# ಡಾ|| ರಾಜ್‌ಕುಮಾರ್ ಅಕಾಡೆಮಿ ಬೆಂಗಳೂರು

ಡಾ|| ರಾಜ್‌ಕುಮಾರ್ ಕುಟುಂಬದವರ ಕೊಡುಗೆ

# ವಾರದ ಸುದ್ದಿ ಸಂಕಲನ

## ಸ್ಪಷ್ಟ ಮತ್ತು ಸಮಗ್ರ ವಿದ್ಯಮಾನಗಳು



**ಜನವರಿ ೫ನೇ ವಾರ**

26-01-2026 TO 31-01-2026

## ಭಾರತ ಮತ್ತು ಐರೋಪ್ಯ ಒಕ್ಕೂಟದ (ಇಯು) ನಡುವಿನ ಎಫ್ಟಿಎ ಜಾರಿ

- ಶುಭಾಂಶು ಶುಕ್ಲಾಗೆ ಅಶೋಕ ಚಕ್ರ ಪ್ರದಾನ
- ಗ್ರಾ.ಪಂ.ಗಳಿಗೆ ಗಾಂಧಿ ಹೆಸರು
- ಆರ್ಥಿಕ ಸಮೀಕ್ಷೆ 2025-26
- ಮುಟ್ಟಿನ ಆರೋಗ್ಯವೂ ಹಕ್ಕು



# ‘ಪದ್ಮ ಪ್ರಶಸ್ತಿ’ ಪುರಸ್ಕೃತರ ಪರಿಚಯ

ಸಾಹಿತ್ಯ, ಶಿಕ್ಷಣ, ವೈದ್ಯಕೀಯ ಮತ್ತು ಸಮಾಜ ಸೇವೆ ಮತ್ತಿತರ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಕರ್ನಾಟಕದ ಎಂಟು ಸಾಧಕರು ದೇಶದ ಅತ್ಯುನ್ನತ ನಾಗರಿಕ ಗೌರವವಾದ ‘ಪದ್ಮ ಪ್ರಶಸ್ತಿ’ಗಳಿಗೆ ಭಾಜನರಾಗಿದ್ದಾರೆ. ಸಾಧಕರ ಪರಿಚಯ ಇಲ್ಲಿದೆ.

## ಶತಾವಧಾನಿ.ಆರ್. ಗಣೇಶ್

**ಪದ್ಮ ಭೂಷಣ, ಕ್ಷೇತ್ರ: ಕಲೆ**

ಶತಾವಧಾನಿ ಆರ್.ಗಣೇಶ್ ಅವರು ಬಹು ಭಾಷಾ ಪಂಡಿತರು. ಕನ್ನಡ, ಸಂಸ್ಕೃತ, ತೆಲುಗು, ತಮಿಳು ಸಹಿತ 8 ಭಾಷೆಗಳಲ್ಲಿ ಅವಧಾನವನ್ನು ನಿರರ್ಗಳವಾಗಿ ಮಾಡಬಲ್ಲವರು. 1962ರ ಡಿಸೆಂಬ ೯4 ರಂದು ಕೋಲಾರದಲ್ಲಿ ಜನನ. ಆರ್. ಶಂಕರನಾರಾಯಣ ಅಯ್ಯರ್ ಹಾಗೂ ಅಲಮೇಲಮ್ಮ ಅವರ ತಂದೆ-ತಾಯಿ.

ಬೆಂಗಳೂರಿನಲ್ಲಿ ಪ್ರಾಥಮಿಕ, ಗೌರಿಬಿದನೂರಿನಲ್ಲಿ ಪ್ರೌಢ ಶಿಕ್ಷಣ ಪಡೆದರು. ವಿಶ್ವೇಶ್ವರಯ್ಯ ಎಂಜಿನಿಯರಿಂಗ್ ಕಾಲೇಜು ವಿಶ್ವವಿದ್ಯಾಲಯದಲ್ಲಿ (ಯುವಿಸಿಇ) ಎಂಜಿನಿಯರಿಂಗ್ ಪದವಿ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನಲ್ಲಿ ಎಂ.ಎಸ್ಸಿ ಪಡೆದರು. ಆದರೆ ಆಸಕ್ತಿ ಬೆಳೆದಿದ್ದು ಭಾರತೀಯ ತತ್ವಶಾಸ್ತ್ರ, ಇತಿಹಾಸ, ಸಾಹಿತ್ಯ, ವೇದಾಂತ, ಉಪನಿಷತ್, ಕಲೆ ಇತ್ಯಾದಿ ವಿಷಯಗಳಲ್ಲಿ. ಮೈಸೂರು ವಿಶ್ವವಿದ್ಯಾಲಯದಲ್ಲಿ ಸಂಸ್ಕೃತದಲ್ಲಿ ಎಂ.ಎ ಸ್ನಾತಕೋತ್ತರ ಪದವಿ ಪಡೆದರು. ಕನ್ನಡದಲ್ಲಿ ಅವಧಾನ ಕಲೆ ಎನ್ನುವ ಪ್ರಬಂಧಕ್ಕೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯ ಡಿ.ಲಿಟ್ ನೀಡಿದೆ.

ಚಿತ್ರಕಾವ್ಯ ಕಲೆಯ ಕುರಿತು ಶತಾವಧಾನ ಶಾರದೆ ಹಾಗೂ ಶತಾವಧಾನ ಶ್ರೀವಿದ್ಯೆ, ಸಂಸ್ಕೃತದಲ್ಲಿ 12 ನಾಟಕ, 16 ಕಾವ್ಯ, ಕನ್ನಡದಲ್ಲಿ 8 ಕಾವ್ಯ, 3 ಕಾದಂಬರಿ ಹಾಗೂ 6 ಅನುವಾದ ಕೃತಿ ಹೊರತಂದಿದ್ದಾರೆ. ಭಾರತೀಯ ವಿದ್ಯಾಭವನದ ಬೆಂಗಳೂರು ಶಾಖೆಯ ಸಂಸ್ಕೃತ ವಿಭಾಗದ ನಿರ್ದೇಶಕರೂ ಹೌದು. ಕರ್ನಾಟಕ ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ಸಂದಿವೆ.

## ಡಾ.ಸುರೇಶ್ ಹನಗವಾಡಿ

**ಪದ್ಮ ಶ್ರೀ, ಕ್ಷೇತ್ರ: ವೈದ್ಯಕೀಯ**

ರಾಜ್ಯದ ಎಲ್ಲ ಜಿಲ್ಲಾ ಆಸ್ಪತ್ರೆಗಳಲ್ಲಿ ಹಿಮೋಫಿಲಿಯಾ ರೋಗಿಗಳ ಆರೈಕೆಯಲ್ಲಿ ಸುಧಾರಣೆ ತರುವಲ್ಲಿ ಮಹತ್ತರ ಪಾತ್ರ ವಹಿಸಿರುವ ದಾವಣಗೆರೆಯ ಜೆಜೆಎಂ ವೈದ್ಯಕೀಯ ಕಾಲೇಜಿನ ರೋಗಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ.ಸುರೇಶ್ ಹನಗವಾಡಿ ಸ್ವತಃ ಕುಸುಮರೋಗಿ (ಹಿಮೋಫಿಲಿಯಾ). ರಕ್ತ ಹೆಪ್ಪುಗಟ್ಟದಿರುವ ಸಮಸ್ಯೆಯಿಂದ ಕಾಣಿಸಿಕೊಳ್ಳುವ ಈ ರೋಗಕ್ಕೆ ರಾಜ್ಯದಲ್ಲೇ ಮೊದಲ ಚಿಕಿತ್ಸಾ ಕೇಂದ್ರ ಸ್ಥಾಪಿಸಿ ಸೇವೆ ಒದಗಿಸುತ್ತಿದ್ದಾರೆ. ರಕ್ತಕ್ಕೆ ಸಂಬಂಧಿಸಿದ ವಿರಳ ರೋಗಗಳಿಗೆ ಒಂದೇ ಸೂರಿನಡಿ ಚಿಕಿತ್ಸೆ ಸಿಗುವಂತೆ ಮಾಡಿದ್ದಾರೆ.

ದೇಶದಾದ್ಯಂತ ಸಂಚರಿಸಿ ಕುಸುಮರೋಗಿಗಳ ಆರೈಕೆಗೆ ಶ್ರಮಿಸುತ್ತಿದ್ದಾರೆ. ಅಗತ್ಯ ಸಮಯಕ್ಕೆ ರಕ್ತ, ದುಬಾರಿ ಬೆಲೆಯ ಔಷಧ, ಚಿಕಿತ್ಸೆ ಉಚಿತವಾಗಿ ಸಿಗುವಂತಹ ವ್ಯವಸ್ಥೆ ರೂಪುಗೊಳ್ಳುವಲ್ಲಿ ಇವರ ಪರಿಶ್ರಮವಿದೆ. ಹಿಮೋಫಿಲಿಯಾ ಕಾಯಿಲೆಯ ಕುರಿತು ಸಮಾಜದಲ್ಲಿ ಜಾಗೃತಿ ಮೂಡಿಸುವಲ್ಲಿ ಕಾರ್ಯನಿರತರಾಗಿದ್ದಾರೆ. ಹಿಮೋಫಿಲಿಯಾ ರೋಗಿಗಳು ಅಂಗವೈಕಲ್ಯಕ್ಕೆ ತುತ್ತಾಗಂತೆ ನೋಡಿಕೊಳ್ಳುತ್ತಿದ್ದಾರೆ.

> **ನಾಲ್ಕು ದಶಕಗಳ ಪ್ರಯತ್ನಕ್ಕೆ ಪ್ರತಿಫಲ ಸಿಕ್ಕಿದೆ. ಇದು ದೇಶದಾದ್ಯಂತ ಕುಸುಮರೋಗಿಗಳಿಗೆ ಉತ್ತಮ ಚಿಕಿತ್ಸೆ ಸಿಗಲು ಸಹಕಾರಿ ಆಗಲಿದೆ ಎಂದು ಭಾವಿಸಿದ್ದೇನೆ**
> **ಡಾ.ಸುರೇಶ್ ಹನಗವಾಡಿ,** ವೈದ್ಯ, ದಾವಣಗೆರೆ

## ಪುಸ್ತಕ ಪ್ರೇಮಿ ಅಂಕೇಗೌಡ

**ಪದ್ಮ ಶ್ರೀ, ಕ್ಷೇತ್ರ: ಸಮಾಜಕಾರ್ಯ**

ಪಾಂಡವಪುರ ತಾಲ್ಲೂಕಿನ ಹರಳಹಳ್ಳಿಯಲ್ಲಿ ಅಂಕೇಗೌಡ ಪ್ರತಿಷ್ಠಾನದಡಿ 20ಲಕ್ಷಕ್ಕೂ ಹೆಚ್ಚು ಪುಸ್ತಕಗಳನ್ನು ಸಂಗ್ರಹಿಸಿ ದ್ದಾರೆ. ‘ಪುಸ್ತಕ ಮನೆ ಅಂಕೇಗೌಡ’ ಎಂದೇ ಖ್ಯಾತಿ ಗಳಿಸಿದ್ದಾರೆ. ಪಾಂಡವಪುರಸಹಕಾರಿ ಸಕ್ಕರೆ ಕಾರ್ಖಾನೆಯಲ್ಲಿ ವೇಳಾಧಿಕಾರಿಯಾಗಿ ದುಡಿದ ಹಣದಲ್ಲಿ ಮೈಸೂರಿನಲ್ಲಿ ಖರೀದಿಸಿದ್ದ ನಿವೇಶನವನ್ನು ₹ 6 ಲಕ್ಷಕ್ಕೆ ಮಾರಿ ₹ 5 ಲಕ್ಷವನ್ನು ಪುಸ್ತಕಗಳ ಖರೀದಿಗೇ ವ್ಯಯಿಸಿದವರು. ಕನ್ನಡ, ಹಿಂದಿ, ಇಂಗ್ಲಿಷ್, ತಮಿಳು ಸೇರಿದಂತೆ ವಿವಿಧ ಭಾಷೆಯ ಸಾವಿರಾರು ಪುಸ್ತಕಗಳಿವೆ. ಮಹಾತ್ಮ ಗಾಂಧಿಯವರ ಕುರಿತ 2,500 ಕೃತಿಗಳ ಬೃಹತ್ ಸಂಗ್ರಹವಿದೆ. ಭಗವದ್ಗೀತೆ, ಮಹಾಭಾರತ, ಜೈನ, ಬೌದ್ಧ ಸಾಹಿತ್ಯ, ಬೈಬಲ್‌ಗೆ ಸಂಬಂಧಿಸಿದ ಸಾವಿರಾರು ಕೃತಿಗಳಿವೆ. ರಾಜ್ಯೋತ್ಸವ ಸೇರಿದಂತೆ ಹಲವು ಪ್ರಶಸ್ತಿಗಳು ಅವರನ್ನು ಅರಸಿ ಬಂದಿವೆ. ಲಿಮ್ಕಾ ದಾಖಲೆಯಲ್ಲೂ ಅವರು ಹೆಸರಿದೆ.

> **ನನಗೆ ಪದ್ಮಶ್ರೀ ಬಂದಿದ್ದು ಕೇಳಿ ಖುಷಿಯಾಯಿತು. ಪ್ರಪಂಚದ ಜ್ಞಾನವನ್ನೆಲ್ಲ ಒಂದೆಡೆ ಸಂಗ್ರಹಿಸಿ ಸಾಮಾನ್ಯರಿಗೆ ತಲುಪಿಸುವ ಆಸೆ ಇತ್ತು. ಪುಸ್ತಕ ಓದುವ, ಸಂಗ್ರಹಿಸುವ ಹವ್ಯಾಸ ಜೀವಂತವಾಗಿ ಇಟ್ಟುಕೊಳ್ಳಬೇಕು**
> **ಅಂಕೇಗೌಡ**

## ಅಡುಗೆ ಮನೆ ಸಾಮ್ರಾಟ ಜಗನ್ನಾಥನ್

**ಪದ್ಮ ಶ್ರೀ, ಕ್ಷೇತ್ರ: ವ್ಯಾಪಾರ ಮತ್ತು ಉದ್ದಿಮೆ**

ಅಡುಗೆ ಮನೆಗೆ ಅಗತ್ಯವಿರುವ ಹತ್ತು ಹಲವು ಉಪಕರಣಗಳ ತಯಾರಿಕಾ ವಲಯದಲ್ಲಿ ದೇಶದ ದೊಡ್ಡ ಕಂಪನಿಯಾಗಿರುವ ಟಿಟಿಕೆ ಪ್ರೆಸ್ಟೀಜ್‌ನ ಅಧ್ಯಕ್ಷರಾಗಿದ್ದರು ಟಿ.ಟಿ. ಜಗನ್ನಾಥನ್. ಅವರು ‘ಅಡುಗೆ ಮನೆಯ ಸಾಮ್ರಾಟ’ ಎಂದೇ ಪ್ರಸಿದ್ಧರಾಗಿದ್ದರು. ಐಐಟಿ-ಚೆನ್ನೈನಿಂದ ಚಿನ್ನದ ಪದಕ ಪಡೆದಿದ್ದ ಜಗನ್ನಾಥನ್, ಅಮೆರಿಕದ ಕಾರ್ನೆಲ್ ವಿಶ್ವವಿದ್ಯಾಲಯದಿಂದ ಪಿಎಚ್‌ಡಿ ಪಡೆದಿದ್ದರು. 50 ವರ್ಷಗಳ ಕಾಲ ಟಿಟಿಕೆ ಪ್ರೆಸ್ಟೀಜ್‌ನ ಆಡಳಿತ ಮಂಡಳಿಯಲ್ಲಿ ಕರ್ತವ್ಯ ನಿರ್ವಹಿಸಿದ್ದರು. ಮುಳುಗುತ್ತಿದ್ದ ಕಂಪನಿಯನ್ನು ಮೇಲೆತ್ತಿ ಕಟ್ಟಿದ ವ್ಯಕ್ತಿ ಇವರು ಎಂದು ಹೇಳಲಾಗುತ್ತದೆ.

1975ರಲ್ಲಿ ವ್ಯವಸ್ಥಾಪಕ ನಿರ್ದೇಶಕರಾಗಿ ಜಗನ್ನಾಥನ್ ಕಂಪನಿ ಸೇರಿದರು. 2000ವರೆಗೆ ಇದೇ ಹುದ್ದೆಯಲ್ಲಿ ಮುಂದುವರಿದ ಅವರು ಬಳಿಕ 19 ವರ್ಷ ಕಾರ್ಯನಿರ್ವಾಹಕ ಅಧ್ಯಕ್ಷರಾಗಿದ್ದರು. 2019ರಿಂದ 2025ರ ಮಾರ್ಚ್‌ವರೆಗೆ ಕಾರ್ಯನಿರ್ವಾಹಕೇತರ ಅಧ್ಯಕ್ಷರಾಗಿದ್ದರು. ಇವರಿಗೆ ಮರಣೋತ್ತರವಾಗಿ ಪದ್ಮಶ್ರೀ ಪುರಸ್ಕಾರ ಘೋಷಿಸಲಾಗಿದೆ.

## ಪ್ರಭಾಕರ ಕೋರೆ

**ಪದ್ಮ ಶ್ರೀ, ಕ್ಷೇತ್ರ: ಸಾಹಿತ್ಯ ಮತ್ತು ಶಿಕ್ಷಣ**

1947ರ ಆಗಸ್ಟ್ 1ರಂದು ಜನಿಸಿದ ಪ್ರಭಾಕರ ಕೋರೆ, ಬಿ.ಕಾಂ ಪದವೀಧರರು. ಶಿಕ್ಷಣ, ಕೃಷಿ, ಸಹಕಾರ, ರಾಜಕೀಯ ವಲಯ, ಚಲನಚಿತ್ರ ಉದ್ಯಮ ಮತ್ತು ಸಾಮಾಜಿಕ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಮೂರು ಅವಧಿಗೆ(1990-1996, 2008-2014, 2014-2020) ರಾಜ್ಯಸಭಾ ಸದಸ್ಯರಾಗಿ, 2001ರಿಂದ 2007ರವರೆಗೆ ವಿಧಾನ ಪರಿಷತ್ ಸದಸ್ಯರಾಗಿ ಕರ್ತವ್ಯ ನಿರ್ವಹಣೆ. 1984ರಲ್ಲಿ ಕೆಎಲ್‌ಇ ಸಂಸ್ಥೆ ಕಾರ್ಯಾಧ್ಯಕ್ಷರಾಗಿ ಅಧಿಕಾರ ಹಿಡಿದಾಗ ಇದ್ದ ಅಂಗಸಂಸ್ಥೆಗಳ ಸಂಖ್ಯೆ 38 ರಿಂದ 317ಕ್ಕೆ ಏರಿಕೆ.

2006 ಮತ್ತು 2009ರಲ್ಲಿ ಕೆಎಲ್‌ಇ ಸಂಸ್ಥೆಯ ಜೆಎನ್‌ಎಂಸಿ ಆವರಣದಲ್ಲಿ ಎರಡು ಬಾರಿ ಕರ್ನಾಟಕ ವಿಧಾನಮಂಡಲ ಅಧಿವೇಶನ ಆಯೋಜಿಸಿದ್ದಾರೆ. 2011ರಲ್ಲಿ ಬೆಳಗಾವಿಯಲ್ಲಿ ನಡೆದ ವಿಶ್ವ ಕನ್ನಡ ಸಮ್ಮೇಳನದ ಸ್ವಾಗತ ಸಮಿತಿ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. ಬೆಳಗಾವಿಯಲ್ಲಿ ಸುವರ್ಣ ವಿಧಾನಸೌಧ ನಿರ್ಮಾಣದಲ್ಲಿ ಮಹತ್ವದ ಪಾತ್ರನಿರ್ವಹಣೆ.

> **ಸಾಮಾಜಿಕ ಸೇವೆ ನನ್ನ ಉಸಿರು. ‘ಪದ್ಮಶ್ರೀ’ ಪ್ರಶಸ್ತಿ ಸಿಕ್ಕಿದ್ದಕ್ಕೆ ಖುಷಿಯಾಗಿದೆ. ಇದನ್ನು ಕೆಎಲ್‌ಇ ಸಂಸ್ಥೆಯ ಇಡೀ ಸಮೂಹಕ್ಕೆ ಮತ್ತು ರೈತರಿಗೆ ಅರ್ಪಿಸುವೆ.**
> **ಪ್ರಭಾಕರ ಕೋರೆ,** ರಾಜ್ಯಸಭೆಯ ಮಾಜಿ ಸದಸ್ಯ

## ಎಸ್.ಜಿ. ಸುಶೀಲಮ್ಮ

**ಪದ್ಮ ಶ್ರೀ, ಕ್ಷೇತ್ರ: ಸಮಾಜಸೇವೆ**

ತಮ್ಮ ಜೀವನವನ್ನು ಸಮಾಜಸೇವೆಗೆ ಮುಡಿಪಾಗಿಟ್ಟವರು ಎಸ್.ಜಿ. ಸುಶೀಲಮ್ಮ ಅವರು ಬೆಂಗಳೂರಿನಲ್ಲಿರುವ ಸುಮಂಗಲಿ ಸೇವಾಶ್ರಮದ ಸಂಸ್ಥಾಪನಾ ಅಧ್ಯಕ್ಷರಾಗಿದ್ದಾರೆ. ‘ಕರ್ನಾಟಕದ ಮದರ್ ತೆರೇಸಾ’ ಎಂದೂ ಪ್ರಸಿದ್ಧರಾಗಿದ್ದಾರೆ. 50 ವರ್ಷಗಳಿಂದ ಸಮಾಜ ಸೇವೆಯಲ್ಲಿ ತೊಡಗಿರುವ ಅವರಿಗೆ ಈಗ 87 ವರ್ಷ. ಅವರು 1975ರಲ್ಲಿ ಸ್ಥಾಪಿಸಿರುವ ಸುಮಂಗಲಿ ಸೇವಾಶ್ರಮ, ಅನಾಥ ಮಕ್ಕಳು, ನಿರ್ಗತಿಕ ಮಹಿಳೆಯರು ಮತ್ತು ವೃದ್ಧರಿಗೆ ಆಶ್ರಯ, ಶಿಕ್ಷಣ ಹಾಗೂ ವೃತ್ತಿಪರ ತರಬೇತಿಯನ್ನು ನೀಡುತ್ತಿದೆ.

ಸುಶೀಲಮ್ಮ ಅವರು 1939ರ ಮೇ 24ರಂದು ಬೆಂಗಳೂರಿನಲ್ಲಿ ಜನಿಸಿದರು. ಪದವಿಪೂರ್ವ ಶಿಕ್ಷಣ ಪಡೆದ ಅವರು, ರೆಂಕೋ ಕಾರ್ಖಾನೆಯಲ್ಲಿ (ಬಿ.ಎಚ್.ಇ.ಎಲ್) 15 ವರ್ಷ ಕಾರ್ಯನಿರ್ವಹಿಸಿದ್ದರು. ಬಳಿಕ ವೃತ್ತಿ ಜೀವನಕ್ಕೆ ರಾಜೀನಾಮೆ ನೀಡಿ, ತಮ್ಮನ್ನು ಸಂಪೂರ್ಣವಾಗಿ ಸಮಾಜಸೇವೆಯಲ್ಲಿ ತೊಡಗಿಸಿಕೊಂಡರು.

1976ರಲ್ಲಿ ಬಸವಾನಂದ ನರ್ಸರಿ, 1979ರಲ್ಲಿ ಸುಮಂಗಲಿ ಯುವತಿ ಮಂಡಳಿಯನ್ನು ಸ್ಥಾಪಿಸಿದರು. 1985ರಲ್ಲಿ ಚೋಳನಾಯಕನಹಳ್ಳಿಯಲ್ಲಿ ಬಸವಾನಂದ ಹಿರಿಯ ಪ್ರಾಥಮಿಕ ಶಾಲೆಯನ್ನು ಪ್ರಾರಂಭಿಸಿದರು. ವಸತಿನಿಲಯ, ವೃದ್ಧಾಶ್ರಮವನ್ನೂ ನಡೆಸುತ್ತಿದ್ದಾರೆ. ಕೌಟುಂಬಿಕ ಸಮಾಲೋಚನೆ ವ್ಯವಸ್ಥೆ, ಗಿಡಗಳ ವಿತರಣೆಯಂತಹ ಕಾರ್ಯವನ್ನೂ ಕೈಗೊಂಡಿದ್ದಾರೆ.

> **ಅನಿರೀಕ್ಷಿತವಾಗಿ ಈ ಪ್ರಶಸ್ತಿ ಬಂದಿದೆ. ಎಲ್ಲರ ಬೆಂಬಲದಿಂದ ಅಂದುಕೊಂಡಿದ್ದನ್ನು ಸಾಕಾರ ಮಾಡಲು ಸಾಧ್ಯವಾಯಿತು. ಈ ಪ್ರಶಸ್ತಿಯು ಇನ್ನುಷ್ಟು ಕಾರ್ಯಸಾಧನೆ ಮಾಡಲು ಉತ್ತೇಜಿಸಲಿದೆ. ಬುಡಕಟ್ಟು ಸಮುದಾಯದವರಿಗೆ ಮನೆ, ಉದ್ಯೋಗ ಒದಗಿಸಬೇಕೆಂಬ ಕನಸಿದೆ. ಸದ್ಯ ಆ ನಿಟ್ಟಿನಲ್ಲಿ ಕಾರ್ಯ ಮಾಡಲಾಗುತ್ತಿದೆ. ನಮ್ಮ ಕನಸುಗಳಿಗೆ ವಿವಿಧ ಸಂಘ–ಸಂಸ್ಥೆಗಳು ನೆರವಾಗುತ್ತಿವೆ. ಇದರಿಂದ ಸಮಾಜಸೇವೆ ಸಾಧ್ಯವಾಗುತ್ತಿದೆ.**
> **ಎಸ್.ಜಿ. ಸುಶೀಲಮ್ಮ**

## ಶಶಿ ಶೇಖರ್ ವೆಂಪತಿ

**ಪದ್ಮ ಶ್ರೀ, ಕ್ಷೇತ್ರ: ಸಾಹಿತ್ಯ ಮತ್ತು ಶಿಕ್ಷಣ**

ಭಾರತ್ ಫೌಂಡೇಷನ್‌ನ ಡೀಪ್‌ಟೆಕ್‌ನ ಸಹ ಸಂಸ್ಥಾಪಕರಾದ ಶಶಿ ಶೇಖರ್ ವೆಂಪತಿ ಅವರು ‘ಎಐ4ಇಂಡಿಯಾ’ ಉಪಕ್ರಮದ ಮೂಲಕ ಭಾರತದ ಕೃತಕ ಬುದ್ಧಿಮತ್ತೆ ವ್ಯವಸ್ಥೆಯನ್ನು ಬಲಪಡಿಸುತ್ತಿದ್ದಾರೆ. ಅವರು ಭಾರತ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ಸಂವಹನ ಸಮಿತಿ ಅಧ್ಯಕ್ಷ ಮತ್ತು ಶೈಕ್ಷಣಿಕ ಮಾಧ್ಯಮದ ಕುರಿತು ಯುಜಿಸಿ ತಜ್ಞರ ಸಮಿತಿ ಅಧ್ಯಕ್ಷರಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಮಾಸ್ ಕಮ್ಯುನಿಕೇಷನ್ (ಐಐಎಂಸಿ), ಜಾಮಿಯಾದ ಎಜೆಕೆ ಮಾಸ್ ಕಮ್ಯುನಿಕೇಷನ್ ಮತ್ತು ಮೀಡಿಯಾ ರಿಸರ್ಚ್ ಸೆಂಟರ್ ಸೇರಿದಂತೆ ವಿವಿಧ ಸಂಸ್ಥೆಗಳ ಆಡಳಿತ ನಿರ್ವಹಣೆಗೂ ಕೊಡುಗೆ ನೀಡಿದ್ದಾರೆ. ಅವರು ಅಂತರರಾಷ್ಟ್ರೀಯ ಪ್ರಸಾರ ಮಾನದಂಡಗಳ ಸಂಸ್ಥೆಯಾದ ಎಟಿಎಸ್‌ಸಿನ ಜಾಗತಿಕ ಸಲಹಾ ಮಂಡಳಿಯ ಸದಸ್ಯರೂ ಆಗಿದ್ದಾರೆ. ಪ್ರಸಾರ ಭಾರತಿಯ ಸಿಇಒ ಆಗಿ ಕಾರ್ಯನಿರ್ವಹಿಸಿದ್ದಾರೆ. ದೂರದರ್ಶನ ಮತ್ತು ಆಲ್ ಇಂಡಿಯಾ ರೇಡಿಯೊದ ಆಧುನೀಕರಣಕ್ಕೆ ಒತ್ತು ನೀಡಿದ್ದರು. ಅದೇ ಸಮಯದಲ್ಲಿ ರಾಜ್ಯಸಭಾ ಟಿವಿಯನ್ನು ಮುನ್ನಡೆಸಿದ್ದರು.

ಐಐಟಿ ಬಾಂಬೆಯ ಹಿರಿಯ ವಿದ್ಯಾರ್ಥಿಯಾಗಿರುವ ಶಶಿ, ‘ಕಲೆಕ್ಟಿವ್ ಸ್ಪಿರಿಟ್ ಕಾಂಕ್ರೀಟ್ ಆ್ಯಕ್ಷನ್- ಮನ್ ಕಿ ಬಾತ್ ಆ್ಯಂಡ್ ಇಟ್ಸ್ ಇನ್ಫ್ಲುಯೆನ್ಸ್ ಆನ್ ಇಂಡಿಯಾ’ ಎಂಬ ಕೃತಿಯನ್ನೂ ರಚಿಸಿದ್ದಾರೆ.

## ಶುಭಾ ವೆಂಕಟೇಶ ಅಯ್ಯಂಗಾರ್

**ಪದ್ಮ ಶ್ರೀ, ಕ್ಷೇತ್ರ: ವಿಜ್ಞಾನ ಮತ್ತು ಎಂಜಿನಿಯರಿಂಗ್**

ಬೆಂಗಳೂರಿನಲ್ಲಿ 1954ರ ಮೇ 14ರಂದು ವೆಂಕಟೇಶ ಅಯ್ಯಂಗಾರ್ ಹಾಗೂ ರಾಜಮ್ಮ ದಂಪತಿಯ ಪುತ್ರಿಯಾಗಿ ಜನಿಸಿದ ಶುಭಾ ಅವರು ನ್ಯಾಷನಲ್ ಕಾಲೇಜಿನಲ್ಲಿ ಬಿಎಸ್ಸಿ ಆನರ್ಸ್ ಹಾಗೂ ಸೆಂಟ್ರಲ್ ಕಾಲೇಜಿನಲ್ಲಿ ಎಂಎಸ್ಸಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. 1974ರಲ್ಲಿ ಎನ್‌ಎಎಲ್ ಸೇರಿದ ಅವರು ಸಿಎಸ್‌ಐಆರ್ ಫೆಲೋಶಿಪ್ ಪಡೆದು ಮೈಸೂರು ವಿಶ್ವವಿದ್ಯಾಲಯದಿಂದ ಪಿಎಚ್.ಡಿ ಪೂರ್ಣಗೊಳಿಸಿದರು. 1982ರಲ್ಲಿ ವಿಜ್ಞಾನಿಯಾಗಿ ವೃತ್ತಿ ಜೀವನ ಆರಂಭಿಸಿ ಮೆಟೀರಿಯಲ್ ಸೈನ್ಸ್‌ನಲ್ಲಿ ತೊಡಗಿಸಿಕೊಂಡರು. ಪೈಲಟ್‌ಗಳು ವಿಮಾನ ಓಡಿಸುವ ಹಾಗೂ ನಿಗದಿತ ನಿಲ್ದಾಣಗಳಲ್ಲಿ ಇಳಿಸಲು ಸೂಕ್ತ ಮಾರ್ಗದರ್ಶನ ಮಾಡುವ ‘ದೃಷ್ಟಿ’ ಎನ್ನುವ ತಂತ್ರಜ್ಞಾನವನ್ನು ಶುಭಾ ಅಭಿವೃದ್ಧಿಪಡಿಸಿದರು. ಈಗ ವಾಯುಪಡೆಯಲ್ಲೂ ಇದೇ ತಂತ್ರಜ್ಞಾನ ಬಳಕೆಯಾಗುತ್ತಿದೆ. ಇದು ಸಂಪೂರ್ಣ ದೇಸಿ ನಿರ್ಮಿತ ತಂತ್ರಜ್ಞಾನ.

ಇದಲ್ಲದೇ ಹೈದರಾಬಾದ್‌ನ ಡಿಆರ್‌ಡಿಎಲ್ ರೂಪಿಸಿದ ಅಗ್ನಿಮಿಸೈಲ್ ಯೋಜನೆಯಲ್ಲೂ ಪ್ರಮುಖ ಪಾತ್ರ ವಹಿಸಿದರು. ಏರೋಸ್ಪೇಸ್‌ಗೆ ಸಂಬಂಧಿಸಿದ ಹಲವು ಸಂಶೋಧನಾ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದಾರೆ. ಏರೋಸ್ಪೇಸ್ ಸಂಶೋಧನೆಯಲ್ಲಿ ಪರಿಣತಿ ಹೊಂದಿರುವ ಪ್ರಮುಖ ಮಹಿಳಾ ವಿಜ್ಞಾನಿಯಾದ ಶುಭಾ 2020ರಲ್ಲಿ ನಿವೃತ್ತಿಯಾಗಿದ್ದಾರೆ. ಶುಭಾ ಅವರಿಗೆ 2024ರಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪ್ರಶಸ್ತಿ ನೀಡಲಾಗಿತ್ತು.

# ರಾಜ್ಯದ 8 ಸಾಧಕರಿಗೆ ‘ಪದ್ಮ’ ಪ್ರಶಸ್ತಿ

## ಶತಾವಧಾನಿ ಆರ್. ಗಣೇಶ್‌ಗೆ ‘ಪದ್ಮಭೂಷಣ’ ಗೌರವ

ಪ್ರಜಾವಾಣಿ ವಾರ್ತೆ/ ಪಿಟಿಐ

**ನವದೆಹಲಿ:** ಶತಾವಧಾನಿ ಆರ್. ಗಣೇಶ್ ಸೇರಿದಂತೆ ರಾಜ್ಯದ ಎಂಟು ಸಾಧಕರು ಈ ಸಾಲಿನ ಪ್ರತಿಷ್ಠಿತ ಪದ್ಮ ಪ್ರಶಸ್ತಿಗಳಿಗೆ ಭಾಜನರಾಗಿದ್ದಾರೆ.

ಗಣರಾಜ್ಯೋತ್ಸವದ ಮುನ್ನಾ ದಿನವಾದ ಭಾನುವಾರ ಕೇಂದ್ರ ಗೃಹ ಸಚಿವಾಲಯ 2026ರ ಸಾಲಿನ ಪದ್ಮ ಪ್ರಶಸ್ತಿ ಪುರಸ್ಕೃತರ ವಿವರ ಪ್ರಕಟಿಸಿತು. 5 ಸಾಧಕರು ‘ಪದ್ಮವಿಭೂಷಣ’, 13 ಸಾಧಕರು ‘ಪದ್ಮಭೂಷಣ’ ಮತ್ತು 113 ಮಂದಿ ತಮ್ಮ ಕ್ಷೇತ್ರಗಳಲ್ಲಿನ ಗಣನೀಯ ಸಾಧನೆಗಾಗಿ ‘ಪದ್ಮಶ್ರೀ’ ಪ್ರಶಸ್ತಿಗೆ ಪಾತ್ರರಾಗಿದ್ದಾರೆ.

ಕರ್ನಾಟಕದ ಎಂ.ಅಂಕೇಗೌಡ, ಎಸ್.ಜಿ.ಸುಶೀಲಮ್ಮ (ಸಮಾಜ ಸೇವೆ), ಪ್ರಭಾಕರ ಕೋರೆ, ಶಶಿ ಶೇಖರ್ ವೆಂಪತಿ (ಸಾಹಿತ್ಯ ಮತ್ತು ಶಿಕ್ಷಣ), ಡಾ.ಸುರೇಶ್ ಹನಗವಾಡಿ (ವೈದ್ಯಕೀಯ), ಶುಭಾ ವೆಂಕಟೇಶ್ ಅಯ್ಯಂಗಾರ್ (ವಿಜ್ಞಾನ ಮತ್ತು ಎಂಜಿನಿಯರಿಂಗ್) ಮತ್ತು ಟಿ.ಟಿ. ಜಗನ್ನಾಥನ್ (ಮರಣೋತ್ತರವಾಗಿ; ವ್ಯಾಪಾರ ಮತ್ತು ಕೈಗಾರಿಕೆ) ಅವರಿಗೆ ‘ಪದ್ಮಶ್ರೀ’ ಗೌರವ ಒಲಿದಿದೆ.

ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಕೇರಳದ ಕೆ.ಟಿ ಥಾಮಸ್ (ಸಾರ್ವಜನಿಕ ವ್ಯವಹಾರ), ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಗಾರ ಮತ್ತು ವಯೊಲಿನ್ ವಾದಕ ಉತ್ತರ ಪ್ರದೇಶದ ಎನ್.ರಾಜಮ್ (ಕಲೆ) ಹಾಗೂ ಹಿರಿಯ ಪತ್ರಕರ್ತ ಕೇರಳದ ಪಿ.ನಾರಾಯಣನ್ (ಸಾಹಿತ್ಯ ಮತ್ತು ಶಿಕ್ಷಣ) ಅವರು ‘ಪದ್ಮವಿಭೂಷಣ’ ಗೌರವಕ್ಕೆ ಪಾತ್ರರಾಗಿದ್ದಾರೆ.

▶4

**ಮುಖ್ಯಾಂಶಗಳು**

- ಒಟ್ಟು 131 ಸಾಧಕರಿಗೆ ಗೌರವ
- ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು
- 16 ಮಂದಿಗೆ ಮರಣೋತ್ತರ ಗೌರವ




**ಪದ್ಮ ಪ್ರಶಸ್ತಿ ಪುರಸ್ಕೃತರಿಗೆ ಅಭಿನಂದನೆಗಳು. ವಿವಿಧ ಕ್ಷೇತ್ರಗಳಲ್ಲಿ ಅವರ ಸಾಧನೆ, ಸಮರ್ಪಣೆ ಮತ್ತು ಸೇವೆಯು ನಮ್ಮ ಸಮಾಜವನ್ನು ಸಮೃದ್ಧಿಗೊಳಿಸಿದೆ**



**ನರೇಂದ್ರ ಮೋದಿ,** ಪ್ರಧಾನಿ

## ವೀರಪ್ಪನ್‌ನನ್ನು ‘ಬೇಟೆ’ಯಾಡಿದ್ದ ಅಧಿಕಾರಿಗೆ ‘ಪದ್ಮಶ್ರೀ’

**ಚೆನ್ನೈ:** ‘ಪದ್ಮಶ್ರೀ’ ಪ್ರಶಸ್ತಿಗೆ ಭಾಜನರಾದ ನಿವೃತ್ತ ಐಪಿಎಸ್ ಅಧಿಕಾರಿ ಕೆ. ವಿಜಯ್ ಕುಮಾರ್ ಅವರು ಕಾಡುಗಳ್ಳ ವೀರಪ್ಪನ್ ವಿರುದ್ಧದ ಕಾರ್ಯಾಚರಣೆಯಿಂದ ಹೆಸರುವಾಸಿಯಾಗಿದ್ದಾರೆ.

2004ರಲ್ಲಿ ತಮಿಳುನಾಡಿನ ಧರ್ಮಪುರಿ ಜಿಲ್ಲೆಯ ಪಾಪರಪಟ್ಟಿ ಬಳಿ ತಮಿಳುನಾಡಿನ ಆಗಿನ ಎಸ್‌ಟಿಎಫ್ ಮುಖ್ಯಸ್ಥರಾಗಿದ್ದ ವಿಜಯ್‌ಕುಮಾರ್ ನೇತೃತ್ವದ ತಂಡ ಕಾರ್ಯಾಚರಣೆ ನಡೆಸಿ ವೀರಪ್ಪನ್‌ನನ್ನು ಹತ್ಯೆ ಮಾಡಿತ್ತು.

73 ವರ್ಷದ ಅವರು 2010ರಿಂದ ಎರಡು ವರ್ಷ ಕೇಂದ್ರ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ನೇತೃತ್ವ ವಹಿಸಿದ್ದರು. ನಕ್ಸಲ್ ಪೀಡಿತ ಪ್ರದೇಶಗಳಲ್ಲಿ ನಡೆದ ಕಾರ್ಯಾಚರಣೆಗಳಲ್ಲಿ ಕೇಂದ್ರ ಗೃಹ ಸಚಿವಾಲಯಕ್ಕೆ ಸಲಹೆಗಾರರಾಗಿಯೂ ಕೆಲಸ ಮಾಡಿದ್ದಾರೆ.

# ರಾಜ್ಯದ 8 ಸಾಧಕರಿಗೆ 'ಪದ್ಮ' ಪ್ರಶಸ್ತಿ

ಒಂದನೇ ಪುಟದಿಂದ...



ಧರ್ಮೇಂದ್ರ

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್ ಹಾಗೂ ಬಾಲಿವುಡ್ ನಟ ಧರ್ಮೇಂದ್ರ ಅವರಿಗೆ ಮರಣೋತ್ತರವಾಗಿ 'ಪದ್ಮವಿಭೂಷಣ' ನೀಡಿ ಗೌರವಿಸಲಾಗಿದೆ. ಮಲಯಾಳ ನಟ ಮಮ್ಮುಟ್ಟಿ, ಗಾಯಕಿ ಅಲ್ಕಾ ಯಾಜ್ಞಿಕ್, ಉತ್ತರ ಪ್ರದೇಶದ ಮಾಜಿ ಮುಖ್ಯಮಂತ್ರಿ ಭಗತ್ ಸಿಂಗ್ ಕೋಶ್ಯಾರಿ, ಕೋಟಕ್ ಮಹೀಂದ್ರ ಬ್ಯಾಂಕ್‌ನ ಸಂಸ್ಥಾಪಕ ಉದಯ್ ಕೋಟಕ್ ಅವರು 'ಪದ್ಮ-ಭೂಷಣ'ಕ್ಕೆ ಆಯ್ಕೆಯಾಗಿದ್ದಾರೆ.

ಟೆನಿಸ್ ದಂತಕಥೆ ವಿಜಯ್ ಅಮೃತ್‌ರಾಜ್ ಮತ್ತು ಕ್ರಿಕೆಟಿಗ ರೋಹಿತ್ ಶರ್ಮಾ ಸೇರಿದಂತೆ ಎಂಟು ಕ್ರೀಡಾಪಟುಗಳು ಈ ಬಾರಿ 'ಪದ್ಮ' ಪುರಸ್ಕೃತರಲ್ಲಿ ಸೇರಿದ್ದಾರೆ.

ಬಿಜೆಪಿ ಹಿರಿಯ ನಾಯಕ ವಿ.ಕೆ. ಮಲ್ಹೋತ್ರ, ಜೆಎಂಎಂ ಸ್ಥಾಪಕ ಮತ್ತು ಜಾರ್ಖಂಡ್‌ನ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್, ದೇಶದ ಜಾಹೀರಾತು ಲೋಕಕ್ಕೆ ವಿಶೇಷ ಮೆರುಗು ತುಂಬಿದ್ದ ಪೀಯೂಷ್ ಪಾಂಡೆ ಅವರಿಗೆ ಮರಣೋತ್ತರವಾಗಿ 'ಪದ್ಮಭೂಷಣ' ಗೌರವ ನೀಡಲಾಗಿದೆ.

ಪ್ರಶಸ್ತಿ ಪುರಸ್ಕೃತರಲ್ಲಿ 19 ಮಹಿಳೆಯರು ಮತ್ತು ಆರು ಮಂದಿ ಅನಿವಾಸಿ ಭಾರತೀಯರು ಸೇರಿದ್ದಾರೆ. 16 ಮಂದಿಗೆ ಮರಣೋತ್ತರವಾಗಿ ಪ್ರಶಸ್ತಿ ನೀಡಲಾಗಿದೆ. ಹಲವಾರು ಬುಡಕಟ್ಟು ಜನಾಂಗದವರು, ಸಾಂಪ್ರದಾಯಿಕ ಔಷಧಿ ನೀಡುವವರು, ಕಲಾ ಸಾಧಕರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

## ಕೇರಳ ಚುನಾವಣೆಯತ್ತ ಚಿತ್ತ



ಅಚ್ಯುತಾನಂದನ್



ಮಮ್ಮುಟ್ಟಿ

ನವದೆಹಲಿ: ಕೇಂದ್ರ ಸರ್ಕಾರವು ಈ ಬಾರಿಯ 'ಪದ್ಮ' ಪ್ರಶಸ್ತಿಗೆ ಸಾಧಕರನ್ನು ಆಯ್ಕೆ ಮಾಡುವಾಗ ಕೇರಳ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡಿದೆ ಎಂದು ವಿಶ್ಲೇಷಿಸಲಾಗಿದೆ.

ಕೇರಳದ ಮಾಜಿ ಮುಖ್ಯಮಂತ್ರಿ ವಿ.ಎಸ್. ಅಚ್ಯುತಾನಂದನ್, ಬಿಜೆಪಿಯ ಮುಖವಾಣಿ ಎನಿಸಿರುವ ಮಲಯಾಳ ಪತ್ರಿಕೆ 'ಜನ್ಮಭೂಮಿ'ಯ ಸಹ ಸ್ಥಾಪಕ ಮತ್ತು ಪ್ರಧಾನ ಸಂಪಾದಕ ಪಿ.ನಾರಾಯಣನ್, ಒಬಿಸಿ ನಾಯಕ ವೆಲ್ಲಪ್ಪಳ್ಳಿ ನಟೇಶನ್ ಮತ್ತು ನಟ ಮಮ್ಮುಟ್ಟಿ ಅವರು ಪ್ರಶಸ್ತಿ ಪುರಸ್ಕೃತರಲ್ಲಿ ಸೇರಿದ್ದಾರೆ.

ಸಂಘ ಪರಿವಾರದ ಪ್ರಮುಖ ಟೀಕಾಕಾರರಲ್ಲಿ ಒಬ್ಬರಾಗಿದ್ದ ಅಚ್ಯುತಾನಂದನ್ (ಮರಣೋತ್ತರವಾಗಿ) ಅವರನ್ನು ಪ್ರಶಸ್ತಿಗೆ ಆಯ್ಕೆ ಮಾಡಿರುವುದು ಸಿಪಿಎಂ ಅನ್ನು ಇಕ್ಕಟ್ಟಿಗೆ ಸಿಲುಕಿಸಿದೆ. ಅಚ್ಯುತಾನಂದನ್ ಅವರ ಕುಟುಂಬವು ಕೇಂದ್ರ ಸರ್ಕಾರದ ನಿರ್ಧಾರವನ್ನು ಸ್ವಾಗತಿಸಿದೆ. 2022ರಲ್ಲಿ ಪಶ್ಚಿಮ ಬಂಗಾಳದ ಮಾಜಿ ಮುಖ್ಯಮಂತ್ರಿ ಬುದ್ಧದೇವ್ ಭಟ್ಟಾಚಾರ್ಯ ಅವರು 'ಪದ್ಮ' ಪ್ರಶಸ್ತಿಯನ್ನು ನಿರಾಕರಿಸಿದ್ದರು.

ಶ್ರೀ ನಾರಾಯಣ ಧರ್ಮ ಪರಿಪಾಲನ ಯೋಗಂ (ಎಸ್‌ಎನ್‌ಡಿಪಿ) ಪ್ರಧಾನ ಕಾರ್ಯದರ್ಶಿ ವೆಲ್ಲಪ್ಪಳ್ಳಿ ನಟೇಶನ್ ಅವರ ಆಯ್ಕೆಯು ಚುನಾವಣೆ ನಡೆಯಲಿರುವ ಕೇರಳದಲ್ಲಿ ರಾಜಕೀಯ ಮಹತ್ವವನ್ನು ಪಡೆದುಕೊಂಡಿದೆ.

ಎಸ್‌ಎನ್‌ಡಿಪಿಯು ಕೇರಳದ ಅತಿದೊಡ್ಡ ಹಿಂದೂ ಸಮುದಾಯ ಎನಿಸಿರುವ 'ಹಿಂದೂ ಈಳವ'ರನ್ನು ಪ್ರತಿನಿಧಿಸುವ ವೇದಿಕೆಯಾಗಿದೆ. ಕಳೆದ ಕೆಲವು ಚುನಾವಣೆ-ಗಳಲ್ಲಿ ಹಿಂದೂ ಈಳವ ಮತಗಳು ಬಿಜೆಪಿಗೆ ಹೋಗುತ್ತಿರುವ ಬಗ್ಗೆ ಸಿಪಿಎಂ ಕಳವಳ ವ್ಯಕ್ತಪಡಿಸಿತ್ತು.

ನಟೇಶನ್ ಅವರ ಪುತ್ರ ತುಷಾರ್ ವೆಲ್ಲಪ್ಪಳ್ಳಿ ಅವರು ಕೇರಳದಲ್ಲಿ ಬಿಜೆಪಿಯ ಪ್ರಮುಖ ಮಿತ್ರಪಕ್ಷವಾಗಿರುವ ಭಾರತ್ ಧರ್ಮ ಜನ ಸೇನಾದ ಅಧ್ಯಕ್ಷರಾಗಿದ್ದಾರೆ.

## ❖ ರಾಷ್ಟ್ರಪತಿಗೆ ರಾಜ್ಯಪಾಲರಿಂದ ವರದಿ

**ಸಂದರ್ಭ: ಬೆಂಗಳೂರು ವಿಧಾನಮಂಡಲದ ಜಂಟಿ ಅಧಿವೇಶನದ ಭಾಷಣ ಬಗೆಗಿನ ವಿವಾದಗಳ ಕುರಿತ ಪ್ರತ್ಯೇಕ ವರದಿಯನ್ನು ರಾಜ್ಯಪಾಲ ಥಾವರಚಂದ್ ಗೆಹಲೋತ್ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.**

- ರಾಜ್ಯ ವಿಧಾನಸಭೆಯಲ್ಲಿ ವಿಧಾನಮಂಡಲದ ಜಂಟಿ ಅಧಿವೇಶನ ಉದ್ದೇಶಿಸಿ ಭಾಷಣ ಮಾಡಿದ ಸಂದರ್ಭದಲ್ಲಿ ನಡೆದಿದ್ದ ಘಟನೆಗಳಿಗೆ ಸಂಬಂಧಿಸಿದಂತೆ ವಾಸ್ತವ ಅಂಶಗಳ ಪ್ರತ್ಯೇಕ ವರದಿಯೊಂದನ್ನು ರಾಜ್ಯಪಾಲ ಥಾವರಚಂದ್ ಗೆಹಲೋಶ ಅವರು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ಸಲ್ಲಿಸಿದ್ದಾರೆ.
- ಅಭಿವೃದ್ಧಿ ಚಟುವಟಿಕೆ ಸೇರಿದಂತೆ ಎಲ್ಲ ಬೆಳವಣಿಗೆ ಗಳ ಕುರಿತು ಲೋಕಭವನದಿಂದ ರಾಷ್ಟ್ರಪತಿಗೆ ಪ್ರತಿ ತಿಂಗಳು ವರದಿ ಸಲ್ಲಿಸಲಾಗುತ್ತದೆ. ಬಂಟ ಅಧಿವೇಶನ ಸಂದರ್ಭದಲ್ಲಿ ವಿಧಾನಸಭೆಯಲ್ಲಿ ನಡೆದಿದ್ದ ಘಟನೆ ಮತ್ತು ಆ ನಂತರದ ಬೆಳವಣಿಗೆಗಳ ಕುರಿತು ಪ್ರತ್ಯೇಕವಾದ ವರದಿಯನ್ನು ಸಲ್ಲಿಸಲಾಗಿದೆ ಎಂದು ಲೋಕಭವನದ ಮೂಲಗಳು ತಿಳಿಸಿವೆ.
- ಜಂಟಿ ಅಧಿವೇಶನದ ಹಿಂದಿನ ದಿನ (ಜ. 21) ಮತ್ತು ಮರುದಿನ ನಡೆದ ವಿದ್ಯಮಾನಗಳನ್ನು ತಮ್ಮ ವರದಿಯಲ್ಲಿ ರಾಜ್ಯಪಾಲರು ಉಲ್ಲೇಖಿಸಿದ್ದಾರೆ. ರಾಜ್ಯ ಸರ್ಕಾರ ಕಳುಹಿಸಿದ್ದ ಭಾಷಣದಲ್ಲಿ ವಿಬಿ ಜಿ ರಾಮ್ ಜಿ ಕಾಯ್ದೆಯೂ ಸೇರಿದಂತೆ ಕೇಂದ್ರ ಸರ್ಕಾರವನ್ನು ಟೀಕಿಸಲಾಗಿತ್ತು. ಈ ಭಾಗವನ್ನು ಪರಿಷ್ಕರಿಸುವಂತೆ ರಾಜ್ಯ ಸರ್ಕಾರಕ್ಕೆ ಸೂಚಿಸಲಾಗಿತ್ತು, ಬಳಿಕ ವಿಧಾನಸಭಾಧ್ಯಕ್ಷ ವಿಧಾನ ಪರಿಷತ್ ಸಭಾಪತಿ, ಕಾನೂನು ಮತ್ತು ಸಂಸದೀಯ ವ್ಯವಹಾರ ಸಚಿವರು, ಮುಖ್ಯಮಂತ್ರಿ-ಯವರ ಕಾನೂನು ಸಲಹೆಗಾರರ ಜತೆಗೆ ನಡೆದ ಚರ್ಚೆಯ ಬಗ್ಗೆಯೂ ವರದಿಯಲ್ಲಿ ಪ್ರಸ್ತಾಪಿಸಿದ್ದಾರೆ. 'ಜಂಟಿ ಅಧಿವೇಶನವನ್ನು ಉದ್ದೇಶಿಸಿ ಭಾಷಣ ಮಾಡಬೇಕಾದ ಸಂವಿಧಾನಬದ್ಧ ಕರ್ತವ್ಯ ನಿಭಾಯಿಸಿದ್ದೇನೆ' ಎಂದೂ ವರದಿಯಲ್ಲಿ ತಿಳಿಸಿದ್ದಾರೆ ಎಂದು ಮೂಲಗಳು ಹೇಳಿವೆ.
- ಭಾಷಣ ಮುಗಿಸಿ ವಿಧಾನಸಭೆಯಿಂದ ಹೊರ ಹೋಗುವಾಗ ರಾಜ್ಯಪಾಲರ ವಿರುದ್ಧ ಘೋಷಣೆ ಕೂಗಿ ಒತ್ತಡ ಹೇರಲು ಪ್ರಯತ್ನಿಸಿದ ಕಾಂಗ್ರೆಸ್ ಸದಸ್ಯರ ವರ್ತನೆ ಬಗ್ಗೆಯೂ ವರದಿಯಲ್ಲಿ ಉಲ್ಲೇಖವಿದೆ. ಘಟನೆಯ ನಂತರ ಸದನದಲ್ಲಿ ಕಾಂಗ್ರೆಸ್, ಬಿಜೆಪಿ ನಾಯಕರು ವ್ಯಕ್ತಪಡಿಸಿದ ಅಭಿಪ್ರಾಯ ಗಳನ್ನೂ ಉಲ್ಲೇಖಿಸಲಾಗಿದೆ. ಈ ಘಟನಾವಳಿಗಳ ಕುರಿತು ರಾಜ್ಯಪಾಲರು ತಮ್ಮ ವೈಯಕ್ತಿಕ ಅಭಿಪ್ರಾಯವನ್ನು ಈ ವರದಿಯಲ್ಲಿ ವ್ಯಕ್ತಪಡಿಸಿಲ್ಲ ಎಂದೂ ಮೂಲಗಳು ತಿಳಿಸಿವೆ.
- ಕೇಂದ್ರ ಸರ್ಕಾರದ ಕುರಿತು ಆಕ್ಷೇಪಾರ್ಹ ಸಾಲುಗಳಿವೆ ಎಂಬ ಕಾರಣ ಮುಂದಿಟ್ಟು ಒಂಟಿ ಅಧಿವೇಶನದಲ್ಲಿ ಪೂರ್ಣ ಭಾಷಣ ಓದದ ರಾಜ್ಯಪಾಲರ ನಡೆಯ ವಿರುದ್ಧ ಸಿಡಿದ ಕಾಂಗ್ರೆಸ್ ಸದಸ್ಯರು, ಅವರ ವಿರುದ್ಧ ಸದನದಲ್ಲೇ ಧಿಕ್ಕಾರ ಕೂಗಿದರು. ರಾಜ್ಯಪಾಲರ ಧೋರಣೆಯನ್ನು ಬಿಜೆಪಿ ಸದಸ್ಯರು ಬಲವಾಗಿ ಸಮರ್ಥಿಸಿಕೊಂಡಿದ್ದಾರೆ.

Dr. Rajkumar IAS/KAS Academy

## ❖ ಲಕ್ಕುಂಡಿ ವೈಭವದ ಮರು ಅನ್ವೇಷಣೆ

### ಚಿನ್ನದ ನಿಧಿ ಸಿಗುವುದಕ್ಕೂ ಮುನ್ನವೇ ಉತ್ಖನನಕ್ಕೆ ಸಿಕ್ಕಿತ್ತು ಚಾಲನೆ

• ಕೆ.ಎಂ.ಸತೀಶ್ ಬೆಳ್ಳಕ್ಕಿ

ಗದಗ ನಗರದಿಂದ 11 ಕಿ.ಮೀ. ದೂರದಲ್ಲಿರುವ ಲಕ್ಕುಂಡಿ ಈಗ ರಾಜ್ಯದ ಹೊರಗೂ ಹೆಸರು ಗಳಿಸಿದೆ. ಚಿನ್ನದ ನಿಧಿ ಸಿಕ್ಕ ನಂತರ ಈ ಗ್ರಾಮವು ದೇಶದ ಗಮನ ಸೆಳೆದಿದೆ. ಲಕ್ಕುಂಡಿಯ ಭವ್ಯ ಪರಂಪರೆಯ ಮರು ಅನ್ವೇಷಣೆಗಾಗಿ ಜ.16ರಿಂದ ಉತ್ಖನನ ಆರಂಭಗೊಂಡಿರುವುದು ಸಂಶೋಧಕರು, ಇತಿಹಾಸಕಾರರಲ್ಲಿ ಕುತೂಹಲ ಮೂಡಿಸಿದೆ.

ಗ್ರಾಮದ ಹುಡುಗ ಪ್ರಜ್ವಲ್ ರಿತ್ತಿ, ಮಾವ ಗುಡದಪ್ಪ ಅವರ ಜೊತೆಗೂಡಿ ತಮ್ಮ ನಿವೇಶನದಲ್ಲಿ ಜನವರಿ 10ರಂದು ತಳಪಾಯ ತೆಗೆಯುವಾಗ 466 ಗ್ರಾಂ ತೂಕದ ಚಿನ್ನದ ನಿಧಿ ಸಿಕ್ಕಿತ್ತು. ಆಗ ಅವರು ಸಿಕ್ಕ ಚಿನ್ನವನ್ನು ಪ್ರಾಮಾಣಿಕವಾಗಿ ಸರ್ಕಾರಕ್ಕೆ ಒಪ್ಪಿಸಿದ್ದರು. ಅದಾದ ವಾರದ ಬಳಿಕ ರಾಜ್ಯ ಪುರಾತತ್ವ ಇಲಾಖೆ, ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರ ಹಾಗೂ ಜಿಲ್ಲಾಡಳಿತದ ನೇತೃತ್ವದಲ್ಲಿ ಲಕ್ಕುಂಡಿಯಲ್ಲಿ ಉತ್ಖನನ ಆರಂಭಿಸಿತು.

ಚಿನ್ನದ ನಿಧಿ ಸಿಕ್ಕಿತು ಎಂಬ ಕಾರಣಕ್ಕೆ ಲಕ್ಕುಂಡಿಯಲ್ಲಿ ದಿಢೀರ್ ಉತ್ಖನನ ಆರಂಭಿಸಿಲ್ಲ. ಲಕ್ಕುಂಡಿಯ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ಉತ್ಖನನ ನಡೆಸಲು ಕಳೆದ ವರ್ಷವೇ ನಿರ್ಧರಿಸಲಾಗಿತ್ತು. ಅದರಂತೆ, ಕಳೆದ ಜೂನ್ 3ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಉತ್ಖನನಕ್ಕೆ ಚಾಲನೆ ನೀಡಿದ್ದರು. ಆದರೆ, ಬಳಿಕ ಮಳೆಗಾಲ ಆರಂಭಗೊಂಡಿದ್ದರಿಂದ ಕೆಲಸ ಪ್ರಾರಂಭವಾಗಿರಲಿಲ್ಲ. ಎರಡೂ ಏಕಕಾಲದಲ್ಲಿ ನಡೆದಿರುವುದು ಕಾಕತಾಳೀಯ ಅಷ್ಟೇ.

**ಈವರೆಗೆ ಸಿಕ್ಕಿದ್ದು ಏನೇನು?:** ಚಿನ್ನದ ನಿಧಿ ಸಿಕ್ಕ ಪ್ರಜ್ವಲ್ ರಿತ್ತಿ ಕುಟುಂಬದ ನಿವೇಶನ ಹಾಗೂ ಅಚ್ಚಪ್ಪನ ಬಯಲಿನಲ್ಲಿ ಇತ್ತು ಎನ್ನಲಾದ ಟಂಕಸಾಲೆಗೂ ಕೋಟೆ ವೀರಭದ್ರೇಶ್ವರ ದೇವಸ್ಥಾನ ಕೇಂದ್ರ ಸ್ಥಾನದಲ್ಲಿದೆ. ಹಾಗಂತ, ಚಿನ್ನದ ನಿಧಿ ಶೋಧನೆಗಾಗಿ ಈ ಜಾಗ ಗುರುತಿಸಿಲ್ಲ. ದೇವಸ್ಥಾನದಿಂದ ಸಿದ್ಧರ ಬಾವಿಗೆ ನೇರ ಸಂಪರ್ಕ ಇದ್ದು, ಇಲ್ಲಿ ಉತ್ಖನನ ನಡೆಸಿದರೆ ಮಹತ್ವದ ಅವಶೇಷಗಳು ಸಿಗಬಹುದು ಎಂದು ತಜ್ಞರು ಅಂದಾಜಿಸಿ, ಈ ಜಾಗದಿಂದ ಪುರಾತತ್ವ ಇಲಾಖೆಯ ನಿವೃತ್ತ ಅಧೀಕ್ಷಕ ಹಾಗೂ ಉತ್ಖನನದ ನಿರ್ದೇಶಕ ಟಿ.ಎಂ.ಕೇಶವ ಅವರ ನೇತೃತ್ವದಲ್ಲಿ ಉತ್ಖನನ ಆರಂಭಿಸಿದ್ದಾರೆ.

ಮೊದಲ ಹಂತದಲ್ಲಿ ₹25 ಲಕ್ಷ ಖರ್ಚು ಮಾಡಿ ಕೋಟೆ ವೀರಭದ್ರೇಶ್ವರ ದೇವಸ್ಥಾನದಿಂದ ಸಿದ್ಧರಬಾವಿವರೆಗಿನ 10x10 ಮೀಟರ್ ಜಾಗದಲ್ಲಿ ನಾಲ್ಕು ಬ್ಲಾಕ್‌ಗಳನ್ನು ಮಾಡಿ ಉತ್ಖನನ ನಡೆಸಲಾಗುತ್ತಿದೆ. ಇಲ್ಲಿಯವರೆಗೆ ನಡೆದಿರುವ ಉತ್ಖನನದಲ್ಲಿ ಲಕ್ಕುಂಡಿಯ ವೈಭವ ಗುರುತಿಸಲು ನೆರವಾಗುವಂತಹ ಯಾವುದೇ ಮಹತ್ವದ ಪ್ರಾಚ್ಯ ಅವಶೇಷ ಸಿಕ್ಕಿಲ್ಲ.


ಜ.17ರಂದು ಎರಡೂವರೆ ಅಡಿಗಳಷ್ಟು ಉತ್ಖನನ ನಡೆಸಿದಾಗ ಶಿವಲಿಂಗದ ಪಾಣಿಪೀಠ ಪತ್ತೆಯಾಗಿತ್ತು. ನಂತರದ ದಿನಗಳಲ್ಲಿ ಸರ್ಪದ ಚಿತ್ರವಿರುವ ಪ್ರಾಚ್ಯ ಅವಶೇಷ, ತಾಮ್ರದ ಘಂಟೆ, ಮಣ್ಣಿನ ಧೂಪದಾರತಿ, ಕಲ್ಲಿನ ಕೈ ಕೊಡಲಿ, ಕಂಬದ ಬೋಧಿಗೆ, ಜಿನ ಚಿತ್ರವಿರುವ ಕಲ್ಲಿನ ಪೀಠ, ನಾಗರಕಲ್ಲು, ಮೂಳೆಯ ತುಂಡುಗಳು, ಮಡಕೆಯ ಚೂರುಗಳು, ಕೆಂಪು ಮಣಿ, ಲೋಹದ ದೀಪದ ತುಣುಕು, ಪಚ್ಚೆ ಕಲ್ಲು, ಕಬ್ಬಿಣದ ಗುಂಡು ಪತ್ತೆಯಾಗಿವೆ. ಇವುಗಳನ್ನೆಲ್ಲಾ ಇತಿಹಾಸ ತಜ್ಞರು ಅಧ್ಯಯನಕ್ಕೆ ಒಳಪಡಿಸಿದ ನಂತರವಷ್ಟೇ ಅವು ಯಾವ ಕಾಲಕ್ಕೆ ಸೇರಿದವು, ಅವುಗಳ ಮಹತ್ವ ಏನು ಎಂಬುದು ಗೊತ್ತಾಗಲಿದೆ.

'ಭಾರತೀಯ ಪುರಾತತ್ವ ಇಲಾಖೆಯು 10x10 ಜಾಗದಲ್ಲಿ ಉತ್ಖನನಕ್ಕೆ ಅನುಮತಿ ನೀಡಿದೆ. ಅದನ್ನು ನಾಲ್ಕು ಭಾಗಗಳಾಗಿ ಮಾಡಿಕೊಳ್ಳಲಾಗಿದೆ. ಆ ಜಾಗದಲ್ಲೆಲ್ಲಾ 10ರಿಂದ 12 ಅಡಿ ಆಳದವರೆಗೆ ಉತ್ಖನನ ನಡೆಸಲಾಗುವುದು. ತರಬೇತಿ ಪಡೆದ ಕುಶಲ ಕಾರ್ಮಿಕರು ಹಂತ ಹಂತವಾಗಿ, ಸೂಕ್ಷ್ಮ ರೀತಿಯಲ್ಲಿ ನಾಲ್ಕು ತಿಂಗಳವರೆಗೆ ಉತ್ಖನನ ನಡೆಸಲಿದ್ದಾರೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ಆಯುಕ್ತ ಶರಣು ಗೋಗೇರಿ ತಿಳಿಸಿದ್ದಾರೆ.




**ಮನೆಯೊಳಗೆ ದೇವಸ್ಥಾನ:** ಲಕ್ಕುಂಡಿ ಗ್ರಾಮದಲ್ಲಿನ ಕೆಲವರು ಪ್ರಾಚೀನ ಕಾಲದ ದೇವಸ್ಥಾನಗಳಿಗೆ ಅಂಟಿಕೊಂಡೇ ಮನೆಯ ಗೋಡೆಗಳನ್ನು ಕಟ್ಟಿಕೊಂಡಿದ್ದಾರೆ. ಇನ್ನು ಕೆಲವರು ದೇವಸ್ಥಾನವನ್ನೇ ಮನೆಯನ್ನಾಗಿ ಮಾಡಿಕೊಂಡಿದ್ದಾರೆ.

> ಲಕ್ಕುಂಡಿಯಲ್ಲಿ ಈಗ ನಡೆದಿರುವ ಉತ್ಖನನದ ಕುರಿತಾಗಿ ಸಾಮಾಜಿಕ ಜಾಲತಾಣಗಳಲ್ಲಿ ಹೆಚ್ಚು ಉತ್ಪ್ರೇಕ್ಷೆಯ ಸುದ್ದಿಗಳೇ ಹರಿದಾಡುತ್ತಿವೆ. ಅಲ್ಲಿ ಅತಿ ದೊಡ್ಡ ಚಿನ್ನದ ನಿಕ್ಷೇಪ ಇದೆಯಂತೆ, ಕೂದಲು ಇರುವ ಘಟಸರ್ಪ ಅದನ್ನು ಕಾಯುತ್ತಿದೆಯಂತೆ ಎಂಬ ಮೂಢನಂಬಿಕೆ ಮೂಡಿಸುವ ಸುದ್ದಿಗಳು ಹರಿದಾಡುತ್ತಿರುವುದಕ್ಕೆ ಪ್ರಜ್ಞಾವಂತರು ತೀವ್ರ ಅಸಹನೆ ವ್ಯಕ್ತಪಡಿಸಿದ್ದಾರೆ.



ಗದಗ ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದಿರುವ ಉತ್ಖನನ ಕೆಲಸ ಶನಿವಾರಕ್ಕೆ ಒಂಬತ್ತು ದಿನಗಳನ್ನು ಪೂರೈಸಿದೆ

ಚೌಕಿಮಠ, ಕುಂಬಾರ ಓಣಿಯಲ್ಲಿ ಇಂತಹ ದೃಶ್ಯಗಳು ಕಣ್ಣಿಗೆ ಕಾಣಿಸುತ್ತವೆ. ಅಮೂಲ್ಯವಾದ ಪ್ರಾಚ್ಯ ಅವಶೇಷಗಳು ಕೆಲವರ ಮನೆಯ ಹಿತ್ತಲಿನಲ್ಲಿ, ಕೊಟ್ಟಿಗೆಯಲ್ಲಿ ಮೆಟ್ಟಿಲುಗಳಾಗಿವೆ.

'ಲಕ್ಕುಂಡಿಯಲ್ಲಿ ಉತ್ಖನನ ಪ್ರಾರಂಭಗೊಂಡ ನಂತರ ಪ್ರಾಚೀನ ದೇವಾಲಯಗಳ ಮಹತ್ವ ಸ್ಥಳೀಯರಿಗೂ ಅರ್ಥವಾಗಿದೆ. ತಮಗೆ ಬೇರೆ ಜಾಗ, ವಸತಿ ವ್ಯವಸ್ಥೆ ಮಾಡಿದರೆ ಅವುಗಳನ್ನು ಬಿಟ್ಟುಕೊಡುವುದಾಗಿ ಸ್ವ ಇಚ್ಛೆಯಿಂದ ಹೇಳಿದ್ದಾರೆ. ಈಗ ನಡೆದಿರುವ ಉತ್ಖನನದಿಂದ ಮಹತ್ವದ ಅವಶೇಷಗಳು ಲಭ್ಯವಾದರೆ ಇಡೀ ಊರನ್ನೇ ಸ್ಥಳಾಂತರಿಸಬೇಕಾಗಬಹುದು. ಆಗ, ಅದಕ್ಕೆ ಏನೇನು ಕ್ರಮಗಳಿವೆ ಎಂಬುದು ಸರ್ಕಾರದ ಮಟ್ಟದಲ್ಲಿ ನಿರ್ಧಾರವಾಗುತ್ತದೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

**ಬಯಲು ವಸ್ತು ಸಂಗ್ರಹಾಲಯ:** ರಾಜ್ಯ ಸರ್ಕಾರವು 2025–26ನೇ ಸಾಲಿನ ಬಜೆಟ್‌ನಲ್ಲಿ, 'ಐತಿಹಾಸಿಕ ಲಕ್ಕುಂಡಿಯಲ್ಲಿನ ಪಾರಂಪರಿಕ ದೇವಾಲಯಗಳನ್ನು ವಿಶ್ವ ಪಾರಂಪರಿಕ ತಾಣಗಳ ತಾತ್ಕಾಲಿಕ ಪಟ್ಟಿಗೆ ಸೇರ್ಪಡೆಗೊಳಿಸಲು ಅಗತ್ಯ ಸೌಕರ್ಯಗಳನ್ನು ಒದಗಿಸಲಾಗುವುದು. ಪ್ರಾಚ್ಯ ಅವಶೇಷಗಳ ಸಂರಕ್ಷಣೆಗಾಗಿ ಬಯಲು ವಸ್ತುಸಂಗ್ರಹಾಲಯ ಪ್ರಾರಂಭಿಸಲಾಗುವುದು' ಎಂದು ಘೋಷಿಸಿತ್ತು.

ಅದರಂತೆ, ಲಕ್ಕುಂಡಿಯಲ್ಲಿ ಈವರೆಗೆ ಸಿಕ್ಕಿರುವ ಪ್ರಾಚ್ಯ ಅವಶೇಷಗಳನ್ನು ಜೋಪಾನವಾಗಿ ಕಾಯ್ದಿರಿಸಲು ವಾರಂಗಲ್ ಮಾದರಿಯ ಬಯಲು ವಸ್ತುಸಂಗ್ರಹಾಲಯ ನಿರ್ಮಿಸಲು ಯೋಜನೆ ರೂಪಿಸಲಾಗಿದೆ. ಲಕ್ಕುಂಡಿಯಲ್ಲಿನ ಬ್ರಹ್ಮ ಜಿನಾಲಯ, ನನ್ನೇಶ್ವರ ದೇವಸ್ಥಾನ, ಕಾಶಿ ವಿಶ್ವನಾಥ ದೇವಸ್ಥಾನ ಮತ್ತು ಕನ್ನರಬಾವಿ ಮಧ್ಯದ ಜಾಗದಲ್ಲಿರುವ ಸ.ನಂ.2ರಲ್ಲಿನ 3 ಎಕರೆ 1 ಗುಂಟೆ ಜಮೀನನ್ನು ಪ್ರತಿ ಎಕರೆಗೆ ₹38 ಲಕ್ಷ ಬೆಲೆ ನಿಗದಿಗೊಳಿಸಿ, ಖರೀದಿಸಲು ಸರ್ಕಾರ ಅನುಮತಿ ನೀಡಿದೆ.

**ಪ್ರಾಚ್ಯ ಅವಶೇಷಗಳ ಸಂಗ್ರಹ ಅಭಿಯಾನ:** ಲಕ್ಕುಂಡಿ ವೈಭವವನ್ನು ಮರುಸ್ಥಾಪಿಸುವ ಸಂಬಂಧ ಪ್ರವಾಸೋದ್ಯಮ ಸಚಿವ ಎಚ್.ಕೆ.ಪಾಟೀಲ ವಿಶೇಷ ಆಸಕ್ತಿ ವಹಿಸಿದ್ದು, ಕಳೆದ ವರ್ಷ ಪ್ರಾಚ್ಯ ಅವಶೇಷಗಳ ಸಂಗ್ರಹ ಅಭಿಯಾನ ನಡೆಸಿದ್ದರು. ಈ ವೇಳೆ ಮೂರು ದಿನಗಳಲ್ಲಿ 1,100ಕ್ಕೂ ಅಧಿಕ ಅಮೂಲ್ಯ ಶಾಸನ, ಶಿಲ್ಪಕಲೆ, ಮುತ್ತು, ರತ್ನ, ಹವಳ, ನಾಣ್ಯ ಸಂಗ್ರಹಿಸಲಾಗಿತ್ತು. ಲಕ್ಕುಂಡಿ ಗ್ರಾಮದ ಜನರು ತಮ್ಮ ಮನೆಗಳಲ್ಲಿ ಇದ್ದ ಪ್ರಾಚ್ಯ ಅವಶೇಷಗಳು, ಮುತ್ತು, ರತ್ನ, ಹವಳ ಸೇರಿದಂತೆ ವಿವಿಧ ಪಾರಂಪರಿಕ ವಸ್ತುಗಳನ್ನು ಸ್ವ ಇಚ್ಛೆಯಿಂದ ಸರ್ಕಾರಕ್ಕೆ ನೀಡಿದ್ದರು.

ಆದಾದ ಬಳಿಕ, ಗದಗ ನಗರದ ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯದಲ್ಲಿ ನಡೆದ ಇತಿಹಾಸ ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಸಚಿವ ಎಚ್.ಕೆ.ಪಾಟೀಲ ಅವರು ಸ್ಥಳೀಯ ಇತಿಹಾಸ ಅಧ್ಯಯನದ ಮಹತ್ವದ ಬಗ್ಗೆ ಇತಿಹಾಸಕಾರರಿಗೆ ಮನವರಿಕೆ ಮಾಡಿಕೊಟ್ಟಿದ್ದರು. ರಾಜ್ಯದಲ್ಲಿನ 238 ತಾಲ್ಲೂಕುಗಳಲ್ಲಿ ಕೂಡ ಸಮೃದ್ಧ ಇತಿಹಾಸವಿದ್ದು, ಅದರ ಸಾಹಿತ್ಯ ಸೃಷ್ಟಿಗೆ ಮುಂದಾದರೆ ಸರ್ಕಾರದಿಂದ ಆರ್ಥಿಕ ನೆರವು ಒದಗಿಸುವ ಭರವಸೆ ನೀಡಿದ್ದರು.

#### ಹಿಂದೆಯೂ ನಡೆದಿತ್ತು ಉತ್ಖನನ

2003–04ರಲ್ಲಿ ಕೂಡ ಇಲ್ಲಿ ಉತ್ಖನನ ನಡೆದಿತ್ತು. ಗ್ರಾಮದ ಅಲ್ಲಮಪ್ರಭು ಮಠದ ಹಿಂಭಾಗ ನಡೆದ ಉತ್ಖನನದ ವೇಳೆ ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ಸಿಕ್ಕಿದ್ದವು.

'ಲಕ್ಕುಂಡಿಯ ಇತಿಹಾಸ ತುಂಬ ಪ್ರಾಚೀನವಾಗಿದೆ. ಇಲ್ಲಿನ 32 ಪ್ರಕಟಿತ ಶಾಸನಗಳ ಪಠ್ಯ ಹಿಡಿದು ಲಕ್ಕುಂಡಿಯಲ್ಲಿ ನೂರಕ್ಕೂ ಹೆಚ್ಚು ಬಾರಿ ಅಡ್ಡಾಡಿದ್ದೇನೆ. ಪ್ರತಿಬಾರಿ ಬಂದಾಗಲೂ ಹೊಸ ಹೊಸ ಶಾಸನಗಳು ಸಿಕ್ಕಿವೆ' ಎನ್ನುತ್ತಾರೆ 'ಲಕ್ಕುಂಡಿಯ ಶಾಸನಗಳು' ಕೃತಿಯ ಲೇಖಕಿ, ಇತಿಹಾಸ ತಜ್ಞೆ ಹನುಮಾಕ್ಷಿ ಗೋಗಿ.

'ಲಕ್ಕುಂಡಿಯಲ್ಲಿ ರಾಷ್ಟ್ರಕೂಟರ ಕಾಲದ ವೀರಗಲ್ಲುಗಳು ಸಿಕ್ಕಿವೆ. ಈ ಪ್ರದೇಶವನ್ನು ಅತಿ ಹೆಚ್ಚು ಸಮಯ ಆಳಿದ ಕಲ್ಯಾಣದ ಚಾಲುಕ್ಯರು, ಕಲಚೂರಿ ಯಾದವರು, ವಿಜಯನಗರ ರಾಜರ ಶಾಸಗಳು ಸಿಕ್ಕಿವೆ. 'ಲಕ್ಕುಂಡಿಯ ಶಾಸನಗಳು' ಕೃತಿಯಲ್ಲಿ 110 ಶಾಸನಗಳ ಬಗ್ಗೆ ಉಲ್ಲೇಖಿಸಲಾಗಿತ್ತು. 2008ರ ನಂತರ ಮತ್ತೆ 45 ಶಾಸನಗಳನ್ನು ಗುರುತಿಸಿದ್ದೇನೆ. ಈ ಕಾರ್ಯಕ್ಕೆ ಸ್ಥಳೀಯರಾದ ಇತಿಹಾಸ ತಜ್ಞ ಅ.ದ.ಕಟ್ಟಿಮನಿ ಅವರ ನೆರವು ಸಾಕಷ್ಟಿದೆ' ಎಂದು ಹೇಳುತ್ತಾರೆ ಅವರು.

ಗ್ರಾಮದ 16 ತಾಣಗಳನ್ನು ಈಗಾಗಲೇ ರಾಜ್ಯ ಸಂರಕ್ಷಿತ ಸ್ಮಾರಕಗಳು ಎಂದು ಘೋಷಿಸಲಾಗಿದೆ. ಇದರ ಜತೆಗೆ ಇನ್ನೂ ಎಂಟು ದೇವಸ್ಥಾನಗಳನ್ನು ಫೆಬ್ರುವರಿ ಅಂತ್ಯದೊಳಗೆ ಸಂರಕ್ಷಿತ ಸ್ಮಾರಕಗಳಾಗಿ ಘೋಷಣೆ ಮಾಡಲಾಗುವುದು ಎಂದು ಸಚಿವ ಎಚ್.ಕೆ. ಪಾಟೀಲ ತಿಳಿಸಿದ್ದಾರೆ. ಇಷ್ಟೆ ಅಲ್ಲದೇ, ಇನ್ನೂ 20 ದೇವಸ್ಥಾನಗಳನ್ನು ರಾಜ್ಯ ಸಂರಕ್ಷಿತ ಸ್ಮಾರಕಗಳ ಪಟ್ಟಿಯಲ್ಲಿ ಸೇರ್ಪಡೆ ಮಾಡುವ ಸಂಬಂಧ ಒಂದು ತಿಂಗಳ ಒಳಗಾಗಿ ಸಮಗ್ರ ಪ್ರಸ್ತಾವವನ್ನು ಸರ್ಕಾರಕ್ಕೆ ಸಲ್ಲಿಸುವಂತೆ ಪ್ರಾಧಿಕಾರದ ಆಯುಕ್ತರಿಗೆ ಸೂಚಿಸಿದ್ದಾರೆ.

ಗ್ರಾಮದಲ್ಲಿ 101 ದೇವಸ್ಥಾನ, 101 ಕಲ್ಯಾಣಿಗಳಿದ್ದವು ಎಂಬ ಉಲ್ಲೇಖವಿದೆ. ಇದರಲ್ಲಿ ಬೆರಳೆಣಿಕೆಯಷ್ಟು ದೇವಸ್ಥಾನ ಮತ್ತು ಕಲ್ಯಾಣಿಗಳು ಉಳಿದಿವೆ. ಅದರಲ್ಲಿ ಕೆಲವು ಗ್ರಾಮದಲ್ಲಿನ ಕೃಷಿ ಭೂಮಿ, ವಾಸದ ಮನೆಗಳಲ್ಲಿ ಚದುರಿಹೋಗಿವೆ. ಉಳಿದವು ಭೂಗರ್ಭದಲ್ಲಿ ಸೇರಿಕೊಂಡಿವೆ.

'ಲಕ್ಕುಂಡಿಯ ದೇಗುಲಗಳು ದಾಳಿಯಿಂದ ಹಾಳಾಗಿಲ್ಲ. ಕಾಲನ ಹೊಡೆತ ಮತ್ತು ಜನರ ಅವಗಣಗೆ ಸಿಕ್ಕು ಹಾಳಾಗಿವೆ. ಹಾಗಾಗಿ, ಇಲ್ಲಿ ಉತ್ಖನನ ಕಾರ್ಯ ಸಮಗ್ರವಾಗಿ ನಡೆದರೆ ಮಾತ್ರ ಲಕ್ಕುಂಡಿಯ ವೈಭವ ಮತ್ತೆ ಗೋಚರಿಸಲಿದೆ' ಎಂಬುದು ತಜ್ಞರ ಅಭಿಪ್ರಾಯ.

#### ಊರಿನ ಐತಿಹಾಸಿಕ ಮಹತ್ವ

9ನೇ ಶತಮಾನದಿಂದ 14ನೇ ಶತಮಾನದವರೆಗೆ ಲಕ್ಕುಂಡಿಗೆ ವಿಶೇಷ ಮಹತ್ವ ಇತ್ತು. ಈ ಊರು ಪ್ರಾಚೀನ ಕಾಲದಲ್ಲಿ ಲೊಕ್ಕಿಗುಂಡಿ ಎಂದು ಪ್ರಸಿದ್ಧವಾಗಿತ್ತು. 11ನೇ ಶತಮಾನದಲ್ಲಿ ಇದು ಬೆಳ್ವೊಲ 300 ಪ್ರಾಂತ್ಯಕ್ಕೆ ಸೇರಿತ್ತು. ಇದು 'ದಾನ ಚಿಂತಾಮಣಿ' ಅತ್ತಿಮಬ್ಬೆಯ ಕರ್ಮಭೂಮಿಯಾಗಿತ್ತು. ಲಕ್ಕುಂಡಿಯು ಬಾದಾಮಿ ಚಾಲುಕ್ಯರು, ಕಲ್ಯಾಣದ ಚಾಲುಕ್ಯರು, ಕಲಚೂರಿಗಳು, ಹೊಯ್ಸಳರು ಮತ್ತು ವಿಜಯನಗರದ ಅರಸರ ಆಳ್ವಿಕೆಗೆ ಒಳಪಟ್ಟಿತ್ತು.

ಸಾವಿರ ವರ್ಷಗಳ ಹಿಂದೆ ಅದರ ಸುವರ್ಣ ಯುಗದಲ್ಲಿ ಲಕ್ಕುಂಡಿ ಎಲ್ಲ ಚಟುವಟಿಕೆಗಳ ಪ್ರಮುಖ ಕೇಂದ್ರವಾಗಿತ್ತು. ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ 100 ಮೀಟರ್ ಅಂತರದೊಳಗಿರುವ ಅಚ್ಚಪ್ಪನ ಬಯಲಿನಲ್ಲಿ ಟಂಕ ಶಾಲೆ ಇತ್ತು. ಅಲ್ಲಿ ಟಂಕಿಸುತ್ತಿದ್ದ ಲೊಕ್ಕಿ ಮತ್ತು ಗದ್ಯಾಣ ಎಂಬ ಚಿನ್ನದ ನಾಣ್ಯಗಳು ಅವುಗಳ ಗಾತ್ರ ಮತ್ತು ತೂಕಕ್ಕೆ ಪ್ರಸಿದ್ಧವಾಗಿದ್ದವು. ನಾಡಿನ ವಿವಿಧೆಡೆ ಸಿಕ್ಕ ಶಾಸನಗಳಲ್ಲಿ ಈ ನಾಣ್ಯಗಳ ಬಗ್ಗೆ ಉಲ್ಲೇಖ ಇರುವುದರಿಂದ ಅವು ರಾಜ್ಯದೆಲ್ಲೆಡೆ ಬಳಕೆಯಲ್ಲಿದ್ದವು ಎಂದು ಗೊತ್ತಾಗಿದೆ. ದೇವಸ್ಥಾನ, ಶಿಲ್ಪಕಲೆಯ ಹೊರತಾಗಿ ಲಕ್ಕುಂಡಿಯ ಇತಿಹಾಸ ಚಾಲುಕ್ಯ ಮತ್ತು ಹೊಯ್ಸಳ ಸಂಸ್ಕೃತಿಗಳ ಅದ್ಭುತ ಸಂಗಮವನ್ನು ತೆರೆದಿಡುತ್ತದೆ ಎಂದು ಇತಿಹಾಸ ತಜ್ಞರು ಹೇಳುತ್ತಾರೆ.



ಲಕ್ಕುಂಡಿಯಲ್ಲಿ ದೊರೆತ ಪ್ರಾಚ್ಯ ಅವಶೇಷಗಳನ್ನು ಇಲ್ಲಿನ ನನ್ನೇಶ್ವರ ದೇವಸ್ಥಾನದ ಪಕ್ಕದ ಬಯಲು ಜಾಗದಲ್ಲಿ ಸಂಗ್ರಹಿಸಿಡಲಾಗಿದೆ

## ❖ 'ಮನದ ಮಾತಿನಲ್ಲಿ ಸೋಫಾ ತ್ಯಾಜ್ಯ ನಿರ್ವಹಣೆ'

**ಸಂದರ್ಭ: ಸೋಫಾ ಮತ್ತು ಹಾಸಿಗೆ ತ್ಯಾಜ್ಯದ ಸಮಸ್ಯೆ ನಿವಾರಣೆಗಾಗಿ ಶ್ರಮಿಸು ತ್ತಿರುವ ಬೆಂಗಳೂರಿನ ಕೆಲವು ವೃತ್ತಿಪರರ ಪ್ರಯತ್ನಗಳನ್ನು ಪ್ರಧಾನಿ ನರೇಂದ್ರ ಮೋದಿ ಭಾನುವಾರ ಶ್ಲಾಘಿಸಿದರು.**

- ತಮ್ಮ 'ಮನದ ಮಾತು' ರೇಡಿಯೊ ಮಾಸಿಕ ಕಾರ್ಯಕ್ರಮದಲ್ಲಿ ಮಾತನಾಡಿದ ಪ್ರಧಾನಿ, ದೇಶದ ವಿವಿಧ ಭಾಗಗಳಲ್ಲಿ ಹಲವು ಗುಂಪುಗಳು ತಮ್ಮ ಪ್ರದೇಶಗಳನ್ನು ಸ್ವಚ್ಛವಾಗಿಟ್ಟುಕೊಳ್ಳಲು ಪ್ರಯತ್ನಗಳನ್ನು ಉಲ್ಲೇಖಿಸಿದರು. ನಡೆಸಿರುವ 'ಬೆಂಗಳೂರಿನಲ್ಲಿ ಸೋಫಾ ತ್ಯಾಜ್ಯ ದೊಡ್ಡ ಸಮಸ್ಯೆ ಆಗಿದೆ. ಕೆಲವು

ವೃತ್ತಿಪರರು ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಲು ತಮ್ಮದೇ ಆದ ಹೊಸ ಮಾರ್ಗವೊಂದನ್ನು ಕಂಡುಕೊಂಡಿದ್ದಾರೆ. ಇದಕ್ಕಾಗಿ ಹಲವರು ಒಟ್ಟುಗೂಡಿದ್ದಾರೆ' ಎಂದು ಹೇಳಿದರು.

- ಇದೇ ಸಂದರ್ಭ ಅರುಣಾಚಲ ಪ್ರದೇಶದ ಜನರ ಪ್ರಯತ್ನವನ್ನು ಮೋದಿ ಅವರು ಮುಕ್ತಕಂಠದಿಂದ ಶ್ಲಾಘಿಸಿದರು.
- ಇಟಾನಗರದ ಕೆಲವು ಪ್ರದೇಶ ಗಳಲ್ಲಿ ಕಸದ ರಾಶಿಯೇ ಬೀಳುತ್ತಿತ್ತು. ಇದನ್ನು ಗಮನಿಸಿದ ಯುವಕರ ಗುಂಪು ಸ್ವಚ್ಛತೆಗೆ ಮುಂದಾಯಿತು. ಆ ಪ್ರದೇಶ ಸ್ವಚ್ಛವಾದೊಡನೆ ಇಡೀ ನಗರಕ್ಕೆ ತನ್ನ ಅಭಿಯಾನ ವಿಸ್ತರಿಸಿತು. ಇದು ಅಕ್ಕಪಕ್ಕದ ನಗರಗಳಿಗೂ ವಿಸ್ತರಣೆಗೊಂಡಿತು. ಇಟಾನಗರವು ಸೇರಿದಂತೆ ನಹರ್ಲಗುನ್, ದೋಯಿಮುಖ್. ಸೆಪ್ಪಾ, ಪಾಲಿನ್, ಪಾಸಿಘಾಟ್‌ನಲ್ಲೂ ಸ್ವಚ್ಛತೆ ಕೈಗೊಂಡಿದ್ದ ರಿಂದ 11 ಲಕ್ಷ ಕೆ.ಜಿ ಕಸ ಸಂಗ್ರಹ ಗೊಂಡಿತು ಎಂದು ಹೇಳಿದರು.
- ಅಸ್ಸಾಂನ ನಾಗೋನ್‌ನ ಜನರು ತಮ್ಮೂರಿನ ಹಳೆಯ ಬೀದಿಗಳ ಜೊತೆ ಭಾವನಾತ್ಮಕ ಸಂಬಂಧ ಹೊಂದಿದ್ದಾರೆ. ಬೀದಿಗಳನ್ನು ಇಲ್ಲಿನ ಜನರೇ ಸ್ವಚ್ಛ ಗೊಳಿಸುತ್ತಿದ್ದಾರೆ. ಈ ಕಾಯಕಕ್ಕೆ ಹಲವರು ಕೈಜೋಡಿಸಿದ್ದು, ಇಲ್ಲಿನ ಬೀದಿಗಳು ಸ್ವಚ್ಛವಾಗಿವೆ ಎಂದು ಮೋದಿ ತಮ್ಮ ಮನದ ಮಾತಿನಲ್ಲಿ ಪ್ರಸ್ತಾಪಿಸಿದರು.

## ❖ ನಾಳೆ ವ್ಯಾಪಾರ ಒಪ್ಪಂದ ಘೋಷಣೆ

**ಸಂದರ್ಭ: ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿರು ವುದು ಹಾಗೂ ಒಪ್ಪಂದವು ಅಂತಿಮ-ಗೊಂಡಿರುವುದರ ಬಗ್ಗೆ ಭಾರತ ಮತ್ತು ಐರೋಪ್ಯ ಒಕ್ಕೂಟವು ಘೋಷಣೆ ಹೊರಡಿಸುವ ನಿರೀಕ್ಷೆ ಇದೆ.**

- ಅಮೆರಿಕವು ವಿವಿಧ ದೇಶಗಳ ಮೇಲೆ ವಿವಿಧ ಕಾರಣಕ್ಕೆ ಸುಂಕ ಹೇರಿ, ಜಾಗತಿಕ ಮಟ್ಟದಲ್ಲಿನ ವ್ಯಾಪಾರ ವಹಿವಾಟುಗಳ ಲಯಕ್ಕೆ ಅಡ್ಡಿ ಸೃಷ್ಟಿಸಿರುವ ಸಂದರ್ಭದಲ್ಲಿ ಭಾರತ ಮತ್ತು ಐರೋಪ್ಯ ಒಕ್ಕೂಟವು ತಮ್ಮ ನಡುವಿನ ವ್ಯಾಪಾರ ಹೆಚ್ಚಿಸಿ ಕೊಳ್ಳಲು ಈ ಕ್ರಮಕ್ಕೆ ಮುಂದಾಗಿವೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.
- ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವೆ ಮುಕ್ತ ವ್ಯಾಪಾರ ಒಪ್ಪಂದಕ್ಕಾಗಿ (ಎಫ್‌ಟಿಎ) ಮಾತುಕತೆ 2007ರಲ್ಲಿ ಶುರುವಾಗಿತ್ತು. ಭಾರತವು ಇದುವರೆಗೆ ಮಾಡಿಕೊಂಡಿರುವ ಎಲ್ಲ ಒಪ್ಪಂದಗಳ ಪಾಲಿಗೆ ಈ ಒಪ್ಪಂದವು 'ತಾಯಿಯಂತೆ' ಇರಲಿದೆ ಎಂದು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಬಣ್ಣಿಸಿದ್ದಾರೆ.
- ಮಾತುಕತೆಯು ಪೂರ್ಣಗೊಂಡಿ-ರುವುದರ ಘೋಷಣೆಯನ್ನು ಭಾರತ ಐರೋಪ್ಯ ಒಕ್ಕೂಟ ಶೃಂಗದಲ್ಲಿ ಮಾಡಲಾಗುವುದು ಎಂದು ಅಧಿಕಾರಿ ಯೊಬ್ಬರು ಮಾಹಿತಿ ನೀಡಿದ್ದಾರೆ. ಐರೋಪ್ಯ ಆಯೋಗದ ಅಧ್ಯಕ್ಷೆ ಉರ್ಸುಲಾ ಫಾಂಡರ್ ಲೇಯನ್ ಅವರು ನಾಲ್ಕು ದಿನಗಳ ಭಾರತ ಭೇಟಿಯನ್ನು ಶನಿವಾರ ಆರಂಭಿಸಿದ್ದಾರೆ.
- ಐರೋಪ್ಯ ಮಂಡಳಿಯ ಅಧ್ಯಕ್ಷ ನಿಯೊ ಕೋಸ್ಟಾ ಹಾಗೂ ಆ್ಯಂಟೊನಿಯೊ ಫಾಂಡರ್ ಲೇಯನ್ ಅವರು ಪ್ರಧಾನಿ ನರೇಂದ್ರ ಮೋದಿ ಅವರ ಜೊತೆ ಮಂಗಳವಾರ ಶೃಂಗಸಭೆಯಲ್ಲಿ ಭಾಗಿಯಾಗಲಿದ್ದಾರೆ.
- ಭಾರತ ಮತ್ತು ಐರೋಪ್ಯ ಒಕ್ಕೂಟದ ಅಧಿಕಾರಿಗಳು ಮುಕ್ತ ವ್ಯಾಪಾರ ಒಪ್ಪಂದದ ಕಡತಗಳಿಗೆ ಸಹ ಹಾಕುವ ಮೊದಲು, ಕಡತಗಳಲ್ಲಿನ ವಿವರಗಳ ಕಾನೂನು ಪರಿಶೀಲನೆ ನಡೆಯಲಿದೆ. ಸಹಿ ಹಾಕುವ ದಿನಾಂಕ ಇನ್ನೂ ಅಂತಿಮಗೊಂಡಿಲ್ಲ. ಒಪ್ಪಂದಕ್ಕೆ ಐರೋಪ್ಯ ಒಕ್ಕೂಟದ ಸಂಸತ್ತಿನ ಒಪ್ಪಿಗೆ, ಭಾರತದಲ್ಲಿ ಕೇಂದ್ರ ಸಂಪುಟದ ಒಪ್ಪಿಗೆ ಅಗತ್ಯ.
- ಅಭಿವೃದ್ಧಿ ಹೊಂದಿರುವ 27 ದೇಶಗಳ ಐರೋಪ್ಯ ಒಕ್ಕೂಟದ ಜೊತೆ ಭಾರತ ಮಾಡಿಕೊಳ್ಳಲಿರುವ ಒಪ್ಪಂದವು ಆತಿ ದೊಡ್ಡದಾಗಿರಲಿದೆ. ಈ ಒಪ್ಪಂದವು ಚೀನಾ ಮೇಲಿನ ಅವಲಂಬನೆಯನ್ನು ತಗ್ಗಿಸಲು ನೆರವಾಗಲಿದೆ.

- ಒಪ್ಪಂದದ ಚಿಟಿಐ ಒತ್ತ ಮಾತುಕತೆ ಸಂದರ್ಭದಲ್ಲಿ ಐರೋಪ್ಯ ಒಕ್ಕೂಟವು ತನ್ನ ಗೋಮಾಂಸ, ಸಕ್ಕರೆ ಮತ್ತು ಅಕ್ಕಿ ಮಾರುಕಟ್ಟೆಯ ಹಿತವನ್ನು ಕಾಪಾಡಿಕೊಂಡಿದೆ. ಭಾರತವು ತನ್ನ ಕೃಷಿ, ಹಾಲು ಮತ್ತು ಹಾಲಿನ ಉತ್ಪನ್ನಗಳ ಮಾರುಕಟ್ಟೆಯ ಹಿತವನ್ನು ಕಾಯ್ದುಕೊಂಡಿದೆ.

## ❖ ಪತ್ರಕರ್ತ ಮಾರ್ಕ್ ಟುಲ್ಲಿ ಇನ್ನಿಲ್ಲ

**ಸಂದರ್ಭ: ಪತ್ರಕರ್ತ, ಲೇಖಕ, ಇತಿಹಾಸಕಾರ ಮಾರ್ಕ್ ಟುಲ್ಲಿ(90) ಅವರು ಬಹುಅಂಗಾಂಗ ವೈಫಲ್ಯದಿಂದಾಗಿ ನಿಧನರಾದರು.**

- ಕೆಲವು ದಿನಗಳಿಂದ ಅನಾರೋಗ್ಯ ದಿಂದ ಬಳಲುತ್ತಿದ್ದ ಅವರು ಜನವರಿ 21ರಂದು ದೆಹಲಿಯ ಮ್ಯಾಕ್ಸ್ ಆಸ್ಪತ್ರೆಗೆ ದಾಖಲಾಗಿದ್ದರು. ಆಸತ್ರೆಯಲ್ಲೇ ಕೊನೆಯುಸಿರೆಳೆದರು ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.
- 1935ರ ಅಕ್ಟೋಬರ್ 24ರಂದು ಕೋಲ್ಕತ್ತದಲ್ಲಿ ಜನಿಸಿದ್ದ ಟುಲ್ಲಿ ಅವರು 22 ವರ್ಷ ಬಿಬಿಸಿ ದೆಹಲಿ ಬ್ಯೂರೊ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸಿದ್ದರು. 1974ರಲ್ಲಿ ಬಿಬಿಸಿಯನ್ನು ತೊರೆದ ಟುಲ್ಲಿ, ಬಿಬಿಸಿ ರೇಡಿಯೊದಲ್ಲಿ ಪ್ರಸಾರವಾಗುತ್ತಿದ್ದ 'ಸಮ್ ಥಿಂಗ್ ಅಂಡರ್‌ಸ್ಟ್ಯಾಡ್ ಕಾರ್ಯಕ್ರಮದ ನಿರೂಪಕರಾಗಿದ್ದರು.
- ಭಾರತ ಮತ್ತು ಬ್ರಿಟಿಷ್ ರಾಜರ ಮಾರ್ಕ್ ಟುಲ್ಲಿ ಸಾಕ್ಷ ಚಿತ್ರದಿಂದ ಆರಂಭಗೊಂಡು ಭಾರತೀಯ ರೈಲ್ವೆ ಕುರಿತ ಸಾಕ್ಷ್ಯಚಿತ್ರಗಳವರೆಗೆ ಹಲವು ಸಾಕ್ಷ್ಯ ಚಿತ್ರಗಳ ಭಾಗವಾಗಿ ಟುಲ್ಲಿ ಕೆಲಸ ಮಾಡಿದ್ದರು. ಬಾಂಗ್ಲಾದೇಶದ ಜೊತೆಗಿನ 1971ರ ಯುದ್ಧ, ತುರ್ತು ಪರಿಸ್ಥಿತಿ ಹೇರಿಕೆ ಸೇರಿದಂತೆ ಸ್ವಾತಂತ್ರ್ಯೋತ್ತರ ಭಾರತದ ಐತಿಹಾಸಿಕ ಘಟನೆಗಳನ್ನು ಟುಲ್ಲಿ ಬಿಬಿಸಿಯಲ್ಲಿ ವರದಿ ಮಾಡಿದ್ದರು.
- ಟುಲ್ಲಿ ಬಿಬಿಸಿಯಿಂದ ಹೊರಬಂದ ಬಳಿಕ ಯಾವುದೇ ಸಂಸ್ಥೆ ಸೇರದೆ ಸ್ವತಂತ್ರವಾಗಿ ಕೆಲಸ ಮಾಡಿದರು. ದೇಶದ ಸಾಮಾಜಿಕ ಮತ್ತು ರಾಜಕೀಯ ಪರಿಸ್ಥಿತಿ ಗಳನ್ನು ವಿಶ್ಲೇಷಿಸುತ್ತಿದ್ದರು.
- 'ನೋ ಫುಲ್ ಸ್ಟ್ಯಾಪ್ಸ್ ಇನ್ಸ್ ಇಂಡಿಯಾ', 'ಇಂಡಿಯಾ ಇನ್ ಸೋ ಮೋಷನ್' ಮತ್ತು 'ದ ಆರ್ಟ್ ಆಫ್ ಇಂಡಿಯಾ' ಸೇರಿದಂತೆ ಭಾರತದ ಬಗ್ಗೆ ಹಲವು ಕೃತಿಗಳನ್ನು ಬರೆದಿದ್ದಾರೆ.
- 'ಆಪರೇಷನ್ ಬ್ಲೂ ಸ್ಟಾರ್ ಮತ್ತು ಪಂಜಾಬ್ ಸಮಸ್ಯೆಗಳ ಕುರಿತಾಗಿ ಬರೆದ 'ಅಮೃತಸರ: ಮಿ.ಗಾಂಧೀಸ್ ಲಾಸ್ಟ್ ಬ್ಯಾಟಲ್' ಪುಸ್ತಕವು ಮೊದಲ ಕೃತಿ.
- ಬ್ರಿಟನ್ ನೀಡುವ ಅತ್ಯುನ್ನತ ನೈಟ್ ಗೌರವವನ್ನು 2002ರಲ್ಲಿ ಪಡೆದ ಟುಲ್ಲಿ. 1992ರಲ್ಲಿ ದೇಶದ ಉನ್ನತ ನಾಗರಿಕ ಪುರಸ್ಕಾರ ಪದ್ಮಶ್ರೀ ಮತ್ತು 2005ರಲ್ಲಿ ಪದ್ಮಭೂಷಣಕ್ಕೆ ಭಾಜನರಾಗಿದ್ದರು.

## ❖ ಅಮೃತರಾಜ್‌ಗೆ ಪದ್ಮಭೂಷಣ, ರೋಹಿತ್‌ಗೆ ಪದ್ಮಶ್ರೀ

**ಸಂದರ್ಭ: ಟೆನಿಸ್ ಕ್ರೀಡೆಯ ದಿಗ್ಗಜ ವಿಜಯ್ ಅಮೃತರಾಜ್ ಅವರಿಗೆ ಪದ್ಮಭೂಷಣ ಪ್ರಶಸ್ತಿ ಲಭಿಸಿದೆ. ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಮಹಿಳಾ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಅವರಿಗೆ ಪದ್ಮಶ್ರೀ ಪ್ರಶಸ್ತಿ ನೀಡಲಾಗಿದೆ.**

- ಕೇಂದ್ರ ಸರ್ಕಾರವು ಪದ್ಮ ಪುರಸ್ಕಾರಗಳ ಪಟ್ಟಿಯನ್ನು ಪ್ರಕಟಿಸಿದೆ. ಇದರಲ್ಲಿ ವಿಜಯ್ ಅವರು ಪದ್ಮಭೂಷಣಕ್ಕೆ ಭಾಜನರಾದ ಏಕೈಕ ಕ್ರೀಡಾಪಟುವಾಗಿದ್ದಾರೆ 1983ರಲ್ಲಿ ಅವರಿಗೆ ಪದ್ಮಶ್ರೀ ಮತ್ತು 1974ರಲ್ಲಿ ಅರ್ಜುನ ಪ್ರಶಸ್ತಿ ಪ್ರದಾನಮಾಡಲಾಗಿತ್ತು.
- 2024ರ ಟಿ20 ವಿಶ್ವಕಪ್ ವಿಜೇತ ತಂಡದ ನಾಯಕ ರೋಹಿತ್ ಶರ್ಮಾ ಮತ್ತು ಹೋದ ವರ್ಷ ಮಹಿಳಾ ಏಕದಿನ ಕ್ರಿಕೆಟ್ ವಿಶ್ವಕಪ್ ಜಯಿಸಿದ್ದ ತಂಡದ ನಾಯಕಿ ಹರ್ಮನ್‌ಪ್ರೀತ್ ಕೌರ್, ಪ್ಯಾರಾಲಿಂಪಿಕ್ಸ್ ಚಿನ್ನದ ಪದಕವಿಜೇತ ಹೈಜಂಪ್ ಅಥ್ಲೀಟ್ ಪ್ರವೀಣಕುಮಾರ್, ಭಾರತ ಮಹಿಳಾ ಹಾಕಿ ತಂಡದ ಗೋಲ್‌ಕೀಪರ್ ಸವಿತಾ ಪೂನಿಯಾ, ಅನುಭವಿ ಕೋಚ್ ಬಲದೇವ ಸಿಂಗ್ ಮತ್ತು ಕೆ. ಪಜಾನಿವೆಲ್ ಅವರಿಗೆ ಪದ್ಮಶ್ರೀ ನೀಡಲಾಗಿದೆ. ಕುಸ್ತಿ ತಂಡದ ಮಾಜಿ ಕೋಚ್ ವಾಡಿಮರ್ ಮೆಸ್ಸವಿರಿಶವಿಲಿ ಅವರಿಗೆ ಮರಣೋತ್ತರ ಪದ್ಮಶ್ರೀ ನೀಡಲಾಗಿದೆ. ವಾಡಿಮರ್ ಅವರು ಒಲಿಂಪಿಯನ್ ಯೋಗೇಶ್ವರ್ ದತ್ ಮತ್ತು ಬಜರಂಗ್ ಪೂನಿಯಾ ಅವರ ಕೋಚ್ ಆಗಿದ್ದರು.

## ❖ ಮುಕ್ತ ವ್ಯಾಪಾರ: ಚರ್ಚೆ ಅಪಾರ : ಭಾರತದಉತ್ಪನ್ನಗಳಿಗೆ ಇ.ಯು ಸುಂಕ ಇಳಿಕೆ?

**ಸಂದರ್ಭ: ಕಾರ್ಮಿಕರ ಶ್ರಮ, ಅವರ ಭಾಗೀದಾರಿಕೆ ತೀವ್ರ ಪ್ರಮಾಣದಲ್ಲಿ ಇರುವ ವಲಯಗಳಿಗೆ ಸೇರಿದ ಉತ್ಪನ್ನಗಳ ಮೇಲಿನ ಸುಂಕ ಇಳಿಕೆಯು ಭಾರತ ಮತ್ತು ಐರೋಪ್ಯ ಒಕ್ಕೂಟದ ನಡುವಿನ ಮುಕ್ತ ವ್ಯಾಪಾರ ತಿಪ್ಪಂದದ ಭಾಗವಾಗಿರುವ ನಿರೀಕ್ಷೆ ಇದೆ.**

- ಅಂದರೆ, ಭಾರತ ಮತ್ತು ಐರೋಪ್ಯ ಒಕ್ಕೂಟದ (ಇಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಜಾರಿಗೆ ಬಂದ ನಂತರದಲ್ಲಿ ಯುರೋಪಿನ ಕಾರುಗಳು, ವೈನ್‌ನಂತಹ ಉತ್ಪನ್ನಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಇಳಿಕೆಯಾಗಬಹುದು ಎಂದು ಅಂದಾಜು ಮಾಡಲಾಗಿದೆ.. ಎಫ್‌ಟಿಎ ಕುರಿತ ಮಾತುಕತೆಗಳು ಪೂರ್ಣಗೊಂಡಿರುವ ವಿಚಾರವನ್ನು ಭಾರತ ಹಾಗೂ ಇಯು ಪ್ರಮುಖರು ಮಂಗಳವಾರ ಘೋಷಿಸಲಿದ್ದಾರೆ.
- ಸೇವಾ ವಲಯಗಳಿಗೆ ಸಂಬಂಧಿಸಿದ ಹಲವು ನಿಯಮಗಳಲ್ಲಿ ಸಡಿಲಿಕೆ ತರುವ ಸಾಧ್ಯತೆ ಇದೆ ಎಂದು ಮೂಲಗಳು ತಿಳಿಸಿವೆ. ಭಾರತದ ತನ್ನ ಜವಳಿ, ಚರ್ಮೋದ್ಯಮ, ವಸ್ತ್ರ, ಆಭರಣ ಮತ್ತು ಹರಳು, ಕರಕುಶಲ ಉತ್ಪನ್ನಗಳಿಗೆ ಯುರೋಪಿನ ಮಾರುಕಟ್ಟೆಗೆ ಸುಂಕರಹಿತವಾಗಿ ಪ್ರವೇಶಿಸಲು ಅವಕಾಶ ಸಿಗಬೇಕು ಎಂದು ಒತ್ತಾಯಿಸಿದೆ. ಭಾರತವು ಅಂತಿಮಗೊಳಿಸಿರುವ ಎಲ್ಲ ಎಫ್‌ಟಿಎಗಳಲ್ಲಿ ಇದೇ ಬೇಡಿಕೆಯನ್ನೇ ಪ್ರಮುಖವಾಗಿ ಇರಿಸಲಾಗಿದೆ.ಅಲ್ಲದೆ, ಭಾರತದ ಜೊತೆ ಎಫ್‌ಟಿಎ ಅಂತಿಮ ಗೊಳಿಸಿರುವ ಬ್ರಿಟನ್, ಯುಎಇ ಮತ್ತು ಆಸ್ಟ್ರೇಲಿಯಾ ಸೇರಿದಂತೆ ಎಲ್ಲದೇಶಗಳು ಈಬೇಡಿಕೆಗೆ ಒಪ್ಪಿವೆ.
- ಐರೋಪ್ಯ ಒಕ್ಕೂಟವು ತನ್ನಲ್ಲಿ ತಯಾರಾಗುವ ವಾಹನಗಳು, ವೈನ್ ಸೇರಿದಂತೆ ವಿವಿಧ ಬಗೆಯ ಮದ್ಯಕ್ಕೆ ಸುಂಕ ಇಳಿಕೆಯ ಪ್ರಯೋಜನ ನೀಡುವಂತೆ ಒತ್ತಾಯಿಸುತ್ತಿದೆ. ಭಾರತವು ಬ್ರಿಟನ್ ಜೊತೆ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದದಲ್ಲಿ, ವಾಹನ ಮಾಡಿಕೊಂಡಿರುವ ವ್ಯಾಪಾರ ಒಪ್ಪಂದದಲ್ಲಿ, ವಾಹನ ವಲಯಕ್ಕೆ ಕೋಟಾ ಆಧಾರಿತ ಸುಂಕ ವಿನಾಯಿತಿ ನೀಡಿದೆ. ಆಸ್ಟ್ರೇಲಿಯಾ, ನ್ಯೂಜಿಲೆಂಡ್ ಜೊತೆಗಿನ ಒಪ್ಪಂದಗಳಲ್ಲಿ ವೈನ್‌ಗಳ ಬಗ್ಗೆ ಪ್ರಸ್ತಾಪ ಇದೆ. ಅಸ್ಟ್ರೇಲಿಯಾದ ವೈನ್‌ಗಳಿಗೆ ಭಾರತವು 10 ವರ್ಷಗಳ ಅವಧಿಯಲ್ಲಿ ಹಂತ ಹಂತವಾಗಿ ರಿಯಾಯಿತಿಗಳನ್ನು ಒದಗಿಸಿದೆ.
- ಕಳೆದ ಸೆಪ್ಟೆಂಬರ್‌ನಲ್ಲಿ ವಿಶೇಷ ಕಾರ್ಯದರ್ಶಿ ಆಗಿದ್ದ (ಈಗ ವಾಣಿಜ್ಯ ಕಾರ್ಯದರ್ಶಿ ರಾಜೇಶ್ ಅಗರ್ವಾಲ್ ಅವರು, 'ಪ್ರಸ್ತಾವಿತ ಒಪ್ಪಂದವು ಭಾರತದ ಆಟೊಮೊಬೈಲ್ ಉದ್ಯಮಕ್ಕೆ ರಫ್ತು ಹೆಚ್ಚಿಸಲು ದೊಡ್ಡ ಅವಕಾಶ ಒದಗಿಸಲಿದೆ, ಅಲ್ಲಿನ ಕಂಪನಿಗಳ ಜೊತೆ ಪಾಲುದಾರಿಕೆಗೆ ನೆರವಾಗಲಿದೆ ಎಂದು ಎಂದಿದ್ದರು.
- ಈಗ ಶೇ 10ರಷ್ಟು ಸುಂಕ: ಭಾರತದ ಸರಕುಗಳಿಗೆ ಐರೋಪ್ಯ ಒಕ್ಕೂಟವು ವಿಧಿಸುತ್ತಿರುವ ಸುಂಕದ ಪ್ರಮಾಣವು ಸರಿಸುಮಾರು ಶೇ 3.8ರಷ್ಟಿದೆ. ಆದರೆ ಕಾರ್ಮಿಕರ ಅಗತ್ಯವು ಹೆಚ್ಚಿನ ಮಟ್ಟದಲ್ಲಿ ಇರುವ ವಲಯಗಳ ಸರಕುಗಳಿಗೆ ಶೇ 10ರಷ್ಟು ಆಮದು ಸುಂಕವನ್ನು ಒಕ್ಕೂಟವು ವಿಧಿಸುತ್ತಿದೆ.
- ಈಗ ಭಾರತವು ಯುರೋಪಿನ ಉತ್ಪನ್ನಗಳಿಗೆ ಸರಾಸರಿ ಶೇ 9.3ರಷ್ಟು ಸುಂಕ ವಿಧಿಸುತ್ತಿದೆ. ಅದರಲ್ಲೂ ಮುಖ್ಯವಾಗಿ ವಾಹನ ಹಾಗೂ ಅವುಗಳ ಬಿಡಿಭಾಗಗಳು (ಶೇ 35.5ರಷ್ಟು), ಪ್ಲಾಸ್ಟಿಕ್ (ಶೇ 10.4ರಷ್ಟು), ರಾಸಾಯನಿಕಗಳು ಹಾಗೂ ಔಷಧಗಳಿಗೆ (ಶೇ 9.9ರಷ್ಟು) ಹೆಚ್ಚಿನ ಪ್ರಮಾಣದಲ್ಲಿ ಸುಂಕ ವಿಧಿಸಲಾಗುತ್ತಿದೆ. ಭಾರತವು ಐರೋಪ್ಯ ಒಕ್ಕೂಟದಿಂದ ಆಮದಾಗುವ ಮದ್ಯದ ಪೇಯಗಳಿಗೆ ಶೇ 100ರಿಂದ ಶೇ 125ರಷ್ಟು ಸುಂಕ ವಿಧಿಸುತ್ತಿದೆ.
- ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ವಲಯಗಳನ್ನು ಒಪ್ಪಂದದ ವ್ಯಾಪ್ತಿಯಿಂದ ಹೊರಗಿರಿಸಲಾಗಿದೆ. ಒಕ್ಕೂಟವು ತನ್ನಲ್ಲಿನ ದನದ ಮಾಂಸ, ಸಕ್ಕರೆ ಮತ್ತು ಅಕ್ಕಿ ಮಾರುಕಟ್ಟೆಯನ್ನು ಒಪ್ಪಂದದ ವ್ಯಾಪ್ತಿಗೆ ತಂದಿಲ್ಲ. ಭಾರತವು ತನ್ನ ಕೃಷಿ ವಲಯ, ಹೈನುಗಾರಿಕೆ ವಲಯವನ್ನು ವಿದೇಶಿ ಪೈಪೋಟಿಗೆ ಒಡ್ಡಲು ಒಪ್ಪಿಲ್ಲ.

Dr. Rajkumar IAS/KAS Academy

## ❖ ಶುಭಾಂಶು ಶುಕ್ಲಾಗೆ ಅಶೋಕ ಚಕ್ರ ಪ್ರದಾನ

**ಸಂದರ್ಭ: ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಗ್ರೂಪ್ ಕ್ಯಾಪ್ಟನ್, ಗಗನಯಾನಿ ಶುಭಾಂಶು ಶುಕ್ಲಾ ಅವರಿಗೆ ಸೋಮವಾರ ಅಶೋಕ ಚಕ್ರ' ಪ್ರದಾನ ಮಾಡಿದರು.**

- ಅಂತರರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ (ಐಎಸ್ಎಸ್) ಭೇಟಿ ನೀಡಿದ ಮೊದಲ ಭಾರತೀಯ ಎಂಬ ಹೆಗ್ಗಳಿಕೆಗೆ ಪಾತ್ರರಾಗುವ ಮೂಲಕ ಇತಿಹಾಸ ಸೃಷ್ಟಿಸಿದ ಶುಭಾಂತು ಶುಕ್ಲಾ ಅವರಿಗೆ ಕರ್ತವ್ಯ ಪಥದಲ್ಲಿ ನಡೆದ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ದೇಶದ ಅತ್ಯುನ್ನತ ಶಾಂತಿಕಾಲದ ಶೌರ್ಯ ಪ್ರಶಸ್ತಿ ನೀಡಿ ಗೌರವಿಸಿದರು.

## ❖ ಜೀವಿತಾವಧಿತನಕ ಜೈಲು ಶಿಕ್ಷೆ ವಿಧಿಸುವ ತೀರ್ಪು: ಸುಪ್ರೀಂ-ಹೈಕೋರ್ಟ್‌ಗೆ ಮಾತ್ರ ಅಧಿಕಾರ'

**ಸಂದರ್ಭ: ಅಪರಾಧಿಯೊಬ್ಬರಿಗೆ ಸಾಯುವವರೆಗೂ ಜೈಲು ಶಿಕ್ಷೆ ವಿಧಿಸುವ ಅಧಿಕಾರ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳಿಗೆ ಮಾತ್ರವೇ ಇದೆ' ಎಂದು ಹೈಕೋರ್ಟ್ ಪ್ರಕರಣವೊಂದರಲ್ಲಿ ಸ್ಪಷ್ಟಪಡಿಸಿದೆ.**

- ಮೂರೂವರೆ ವರ್ಷದ ಮಗುವನ್ನು ಕೊಲೆ ಮಾಡಿದ್ದ ಪ್ರಕರಣದ ಅಪರಾಧಿ ರುದ್ರೇಶ್ ಅಲಿಯಾಸ್ ರುದ್ರಯ್ಯ (28), 'ನನಗೆ ಸಾಯುವವರೆಗಿನ ಜೀವಿತಾವಧಿ ಜೈಲು ಶಿಕ್ಷೆ ವಿಧಿಸಿರುವ ಶಿವಮೊಗ್ಗದ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ ಆದೇಶ ರದ್ದುಪಡಿಸ. ಬೇಕು' ಎಂದು ಕೋರಿ ಹೈಕೋರ್ಟ್ ಗೆ ಕ್ರಿಮಿನಲ್ ಮೇಲ್ಮನವಿ ಸಲ್ಲಿಸಿದ್ದರು.
- ಈ ಮೇಲ್ಮನವಿಯನ್ನು ಭಾಗಶಃ ಪುರಸ್ಕರಿಸಿರುವ ರುದ್ರೇಶ್‌ಗೆ ನ್ಯಾಯಪೀಠ, ಸಾಯುವವರೆಗೆ ಜೀವಿತಾವಧಿ ಶಿಕ್ಷೆ ವಿಧಿಸಿರುವ ಸೆಷನ್ಸ್ ಕೋರ್ಟ್ ಆದೇಶದಲ್ಲಿ ಮಾರ್ಪಾಡು ಮಾಡಿದೆ. ಸಾಯುವವರೆಗಿನ ಜೈಲು ಶಿಕ್ಷೆ ಬದಲಾಗಿ ಜೀವಾವಧಿ ಶಿಕ್ಷೆ ವಿಧಿಸಿ ಆದೇಶಿಸಿದೆ.
- "ಸಾಯುವವರೆಗೆ ಜೈಲು ಶಿಕ್ಷೆ ವಿಧಿಸುವ ಅಧಿಕಾರವನ್ನು ಸಾಂವಿಧಾನಿಕ ನ್ಯಾಯಾಲಯಗಳಾದ ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್‌ಗಳು ಮಾತ್ರವೇ ಹೊಂದಿವೆ. ಈ ಅಧಿಕಾರ ಸೆಷನ್ ಕೋರ್ಟ್‌ಗೆ ಇಲ್ಲ,' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ. ಮೇಲ್ಮನವಿದಾರರ ಪರ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ವಾದ ಮಂಡಿಸಿದ್ದರು.
- ಜೀವಾವಧಿ ಶಿಕ್ಷೆಯಾದರೆ 14 ವರ್ಷ ಜೈಲು ಶಿಕ್ಷೆ ಪೂರೈಸಿದ ನಂತರ ಸನ್ನಡತೆ ಆಧಾರದಲ್ಲಿ ಸರ್ಕಾರಕ್ಕೆ, ಕೈದಿಯನ್ನು ಬಿಡುಗಡೆ ಮಾಡುವ ಅಧಿಕಾರ ಅವಕಾಶವಿರುತ್ತದೆ.

**ಪ್ರಕರಣವೇನು?: ಶಿವಮೊಗ್ಗ ಜಿಲ್ಲೆಯ**

- ಹೊಸಮನೆ ಗ್ರಾಮದ ನಿವಾಸಿ ರುದ್ರೇಶ್, ಹೊಸನಗರದ ಮಠವೊಂದರಲ್ಲಿ ಕೆಲಸ ಮಾಡುತ್ತಿದ್ದರು. ಕೊಲೆಗೀಡಾದ ಮಗುವಿನ ತಾಯಿ (ಪ್ರಕರಣದ ದೂರುದಾರೆ) ಮಠದ ಭಕ್ತೆಯಾಗಿದ್ದರು. ನಿಯಮಿತವಾಗಿ ಮಠಕ್ಕೆ ಭೇಟಿ ನೀಡುತ್ತಿದ್ದರು. ಮಠದ ವ್ಯವಹಾರಗಳಲ್ಲಿ ರುದ್ರೇಶ್‌ಗೆ ದೂರುದಾರೆ ಮತ್ತು ಆಕೆಯ ತಾಯಿ ಸಲಹೆ ನೀಡುತ್ತಿದ್ದರು. ಇದೇ ವಿಚಾರವಾಗಿ ದೂರುದಾರೆಯ ಬಗ್ಗೆ ರುದ್ರೇಶ್ ದ್ವೇಷ ಬೆಳೆಸಿಕೊಂಡಿದ್ದರು.
- 2017ರ ಏಪ್ರಿಲ್ 10ರಂದು ಮಠದ ಕಾರ್ಯಕ್ರಮವೊಂದರಲ್ಲಿ ದೂರುದಾರೆ ತನ್ನ ಮೂರೂವರೆ ವರ್ಷದ ಗಂಡುಮಗು ಮತ್ತು ಕುಟುಂಬದ ಸದಸ್ಯರೊಂದಿಗೆ ಭಾಗಿಯಾಗಿದ್ದರು. ಅಂದು ಮಠದಲ್ಲೇ ಊಟ ಮಾಡಿ ಮಲಗಿದ್ದರು. ಬೆಳಿಗ್ಗೆ 5.30ಕ್ಕೆ ಎಚ್ಚರಗೊಂಡಾಗ ಮಗು ಪಕ್ಕದಲ್ಲಿ ಇರಲಿಲ್ಲ. ನಂತರ ಆ ಮಗು ಶವವಾಗಿ ಪತ್ತೆಯಾಗಿತ್ತು. ರಾತ್ರಿ
- ಈ ಕುರಿತು ಹೊಸನಗರ ಠಾಣಾ ಪೊಲೀಸರು ತನಿಖೆ ನಡೆಸಿದಾಗ, ಮಗುವನ್ನು ರುದ್ರೇಶ್ ಅಪಹರಿಸಿ ಕೊಲೆ ಮಾಡಿದ್ದಕೃತ್ಯ ಬಯಲಾಗಿತ್ತು.
- ಕೊಲೆ ಮತ್ತು ಅಪಹರಣ ಆರೋಪದಡಿ ರುದ್ರೇಶ್ ಅವರನ್ನು 2017ರ ನವೆಂಬರ್ 27ರಂದು ದೋಷಿ ಎಂದು ತೀರ್ಮಾನಿಸಿದ್ದ ಸೆಷನ್ಸ್ ನ್ಯಾಯಾಲಯ ಸಾಯುವವರೆಗೂ ಅಂದರೆ ಜೀವಿತಾವಧಿ ಶಿಕ್ಷೆ ವಿಧಿಸಿ ಆದೇಶಿಸಿತ್ತು.

Dr. Rajkumar IAS/KAS Academy

## ❖ ಭದ್ರತಾ ಖಾತರಿ ದಾಖಲೆ ಸಿದ್ಧ: ಝುಲೆನ್‌ಸ್ಕಿ

**ಸಂದರ್ಭ: ಉಕ್ರೇನ್, ಅಮೆರಿಕ ಮತ್ತು ರಷ್ಯಾ ಪ್ರತಿನಿಧಿಗಳ ನಡುವೆ ಎರಡು ದಿನ ನಡೆದ ಮಾತುಕತೆ ಬಳಿಕ, ಉಕ್ರೇನ್‌ಗಾಗಿ ಅಮೆರಿಕ ಸಿದ್ಧಪಡಿಸಿರುವ ಭದ್ರತಾ ಖಾತರಿ ದಾಖಲೆ ಶೇ 100ರಷ್ಟು ಸಿದ್ಧವಾಗಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝುಲೆನ್‌ಸ್ಕಿ ತಿಳಿಸಿದ್ದಾರೆ.**

- 'ಪಾಲುದಾರ ರಾಷ್ಟ್ರಗಳು ಒಪ್ಪಂದಕ್ಕೆ ಸಹಿ ಹಾಕುವ ದಿನಾಂಕ ನಿಗದಿ ಮಾಡಲು ಉಕ್ರೇನ್ ಕಾಯುತ್ತಿದೆ. ಬಳಿಕ ದಾಖಲೆಯನ್ನು ಅಮೆರಿಕ ಸಂಸತ್ತು ಮತ್ತು ಉಕ್ರೇನ್ ಸಂಸತ್ತಿನಲ್ಲಿ ಮಂಡಿಸಲಾಗುವುದು' ಎಂದು ತಿಳಿಸಿದ್ದಾರೆ.
- 'ಅಬುಧಾಬಿಯಲ್ಲಿ ನಡೆದ ಮಾತುಕತೆಯಲ್ಲಿ ಮೂರು ದೇಶಗಳ ರಾಜತಾಂತ್ರಿಕ ಅಧಿಕಾರಿಗಳು ಮಾತ್ರವಲ್ಲದೆ ಸೇನಾ ಪ್ರತಿನಿಧಿಗಳು ಸಹ ಭಾಗಿಯಾಗಿದ್ದರು. ರಷ್ಯಾ ಉಕ್ರೇನ್ ಸಂಘರ್ಷ ಅಂತ್ಯದ ಉದ್ದೇಶದಿಂದ ಆರಂಭವಾದ ಮಾತುಕತೆಯು ಮುಕ್ತಾಯವಾಯಿತು' ಎಂದು ಅವರು ಹೇಳಿದ್ದಾರೆ. ಮುಂದಿನ ಹಂತದ ಮಾತುಕತೆಗಾಗಿ ನಿಯೋಗವು ಫೆಬ್ರುವರಿ 1ರಂದು ಮತ್ತೆ ಭೇಟಿಯಾಗಲಿದೆ ಎಂದು ಅಮೆರಿಕದ ಅಧಿಕಾರಿಗಳು ತಿಳಿಸಿದ್ದಾರೆ.

## ❖ 'ಸಹಜೀವನ: ಪಾಶ್ಚಿಮಾತ್ಯ ವಿಚಾರ ಪ್ರೇರಣೆ'

**ಸಂದರ್ಭ: ಪಾಶ್ಚಿಮಾತ್ಯ ವಿಚಾರ ಗಳಿಂದ ಪ್ರೇರಣೆಗೊಂಡು ಯುವಕರು ಸಹಜೀವನ ನಡೆಸಲು ಮುಂದಾಗುತ್ತಿದ್ದಾರೆ. ಇಂಥ ಯುವಕರ ಸಂಖ್ಯೆ ಏರಿಕೆಯಾಗುತ್ತಲೇ ಇದೆ. ಕೊನೆಯಲ್ಲಿ ಸಂಬಂಧ ಸರಿಬರಲಿಲ್ಲ ಎಂದಾದರೆ, ಅತ್ಯಾಚಾರದ ಪ್ರಕರಣ ದಾಖಲಿಸುವುದು ಸರ್ವೇಸಾಮಾನ್ಯ ವಾಗಿದೆ' ಎಂದು ಅಲಹಾಬಾದ್ ಹೈಕೋರ್ಟ್ ಅಭಿಪ್ರಾಯಪಟ್ಟಿದೆ.**

- ವ್ಯಕ್ತಿಯೊಬ್ಬರು ಯುವತಿಯನ್ನು ಅಪಹರಿಸಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದಾರೆ ಎಂಬ ಆರೋಪ ಕುರಿತ ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಿದ್ಧಾರ್ಥ್ ಮತ್ತು ಪ್ರಶಾಂತ್ ಮಿಶ್ರಾ ಅವರ ಪೀಠವು ತನ್ನ ತೀರ್ಪಿನಲ್ಲಿ ಈ ಅಭಿಪ್ರಾಯವ್ಯಕ್ತಪಡಿಸಿತು.
- 'ಎಲ್ಲ ಕಾನೂನುಗಳೂ ಮಹಿಳೆಯರ ಪರವಾಗಿಯೇ ಇವೆ. ಸಹಜೀವನ ಎಂಬ ಪರಿಕಲ್ಪನೆಯೇ ಇರದಿದ್ದ ಕಾಲದಲ್ಲಿ ರೂಪಿಸಿದ ಕಾನೂನಿನ ಆಧಾರದಲ್ಲಿ ಪುರುಷರಿಗೆ ಶಿಕ್ಷೆ ನೀಡಲಾಗುತ್ತಿದೆ' ಎಂದು ಪೀಠ ಹೇಳಿತು.
- **ಪ್ರಕರಣವೇನು?**: ಚಂದ್ರಶೇಖರ್ ಎಂಬುವರು ಪೋಷಕರಿಗೆ ಮಾಹಿತಿಯೇ ಇಲ್ಲದಂತೆ ಮದುವೆ ಯಾಗುವುದಾಗಿ ಬಾಲಕಿಯನ್ನು ಅಪಹರಿಸಿ ಉತ್ತರ ಪ್ರದೇಶದ ಗೋರಖಪುರದಿಂದ ಬೆಂಗಳೂರಿಗೆ ಕರೆದುಕೊಂಡು ಹೋಗಿದ್ದಾರೆ. ಇಲ್ಲಿ ಬಾಲಕಿಯ ಜೊತೆ ಲೈಂಗಿಕ ಸಂಪರ್ಕ ಬೆಳೆಸಿದ್ದಾರೆ ದೂರು ನೀಡಲಾಗಿತ್ತು. ಇದು 2021ರ ಪ್ರಕರಣ.
- ಅಪಹರಣ, ಮದುವೆ ಆಗಲು ಅಪಹರಣ, ಪೋಕ್ಸೊ ಕಾಯ್ದೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಮೇಲಿನ ವಿವಿಧ ಸೆಕ್ಷನ್‌ಗಳ ಅವರಿಗೆ ವಿಚಾರಣಾ ದೌರ್ಜನ್ಯ ಕಾಯ್ದೆಗಳ ಅನ್ವಯ ಚಂದ್ರಶೇಖರ್ ನ್ಯಾಯಾಲಯವೊಂದು ಶಿಕ್ಷೆ ವಿಧಿಸಿತ್ತು. ಇದರ ವಿರುದ್ಧ ಚಂದ್ರಶೇಖರ್ ಅವರು ಅಲಹಾಬಾದ್ ಹೈಕೋರ್ಟ್ ಮೊರ ಹೋಗಿದ್ದರು.

## ❖ ಏಷ್ಯಾ ಒಲಿಂಪಿಕ್ ಕೌನ್ಸಿಲ್ ಅಧ್ಯಕ್ಷರಾಗಿ ಜೋಹಾನ್ ಆಯ್ಕೆ: ಕತಾರ್‌ನ ಶೇಖ್ ಜೋಹಾನ್ ಬಿನ್

- ಹಮದ್ ಅಲ್ ಥಾನಿ ಅವರು ಏಷ್ಯಾ ಒಲಿಂಪಿಕ್ (ಏಒಸಿ) ಅಧ್ಯಕ್ಷರಾಗಿ + ಅವಿರೋಧವಾಗಿ ಆಯ್ಕೆಯಾದರು. ಅವರು 2028ರವರೆಗೆ ಈ ಸ್ಥಾನದಲ್ಲಿರಲಿದ್ದಾರೆ.
- ಜೋಹಾನ್ ಅವರು ಕತಾರ್ ಒಲಿಂಪಿಕ್ ಸಮಿತಿಯ ಅಧ್ಯಕ್ಷರಾಗಿದ್ದು, ರಾಷ್ಟ್ರೀಯ ಒಲಿಂಪಿಕ್ ಸಂಸ್ಥೆಗಳ ಜಾಗತಿಕ ಸಮಿತಿಯ ಹಿರಿಯ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸುತ್ತಿದ್ದಾರೆ.
- 2036ರ ಒಲಿಂಪಿಕ್ ಕ್ರೀಡಾಕೂಟಕ್ಕೆ ಆತಿಥ್ಯ ವಹಿಸಲು ಭಾರತ ಹಾಗೂ ಕತಾರ್ ಭಾರಿ ಕಸರತ್ತು ನಡೆಸುತ್ತಿವೆ. ಹೀಗಾಗಿ, ಜೋಹಾನ್ ಅವರ ಆಯ್ಕೆಯು ಕತಾರ್‌ಗೆ ಪೂರಕವಾಗಬಹುದು ಎನ್ನಲಾಗಿದೆ.

## ❖ ಗ್ರಾ.ಪಂ.ಗಳಿಗೆ ಗಾಂಧಿ ಹೆಸರು

- ರಾಜ್ಯದ ಎಲ್ಲ ಗ್ರಾಮ ಪಂಚಾಯಿತಿಗಳು ಇನ್ನು ಮುಂದೆ ಮಹಾತ್ಮ ಗಾಂಧಿ ಎಂಬ ಹೆಸರನ್ನು ಮುಡಿಗೇರಿಸಿಕೊಳ್ಳಲಿವೆ.

# 'ಒಪ್ಪಂದಗಳ ತಾಯಿ'ಗೆ ದಾರಿ ಮುಕ್ತ

### ಭಾರತ ಇತಿಹಾಸದ ಅತಿದೊಡ್ಡ ಒಪ್ಪಂದ ಅಂತಿಮ ● ಮುಕ್ತ ವ್ಯಾಪಾರಕ್ಕೆ ರಹದಾರಿ

ನವದೆಹಲಿ (ಪಿಟಿಐ): 'ಎಲ್ಲ ಒಪ್ಪಂದಗಳ ತಾಯಿ' ಎಂದು ಬಣ್ಣಿಸಲಾಗಿರುವ ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದದ (ಎಫ್‌ಟಿಎ) ಮಾತುಕತೆ ಪೂರ್ಣಗೊಂಡಿದೆ ಎಂದು ಭಾರತ ಮತ್ತು ಇ.ಯು. ಮಂಗಳವಾರ ಘೋಷಿಸಿವೆ.

ಈ ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಭಾರತದಿಂದ ಇ.ಯು ದೇಶಗಳಿಗೆ ರಫ್ತಾಗುವ ಶೇಕಡ 93ರಷ್ಟು ಉತ್ಪನ್ನಗಳು ಸುಂಕ ರಹಿತವಾಗಿ ಅಲ್ಲಿನ ಮಾರುಕಟ್ಟೆ ಪ್ರವೇಶಿಸಲಿವೆ. ಅಲ್ಲದೆ, ಇ.ಯು. ದೇಶಗಳ ಐಷಾರಾಮಿ ಕಾರುಗಳು ಹಾಗೂ ವೈನ್‌ಗಳ ಬೆಲೆಯು ಭಾರತದಲ್ಲಿ ಕಡಿಮೆ ಆಗಲಿದೆ.



ಎರಡು ದಶಕಗಳ ಸುದೀರ್ಘ ಮಾತುಕತೆ ನಂತರದಲ್ಲಿ ಎಫ್‌ಟಿಎ ಈ ಹಂತ ತಲುಪಿದೆ. ಇದು ಅಂದಾಜು 200 ಕೋಟಿ ಜನರ ಬೃಹತ್ ಮಾರುಕಟ್ಟೆಯನ್ನು ಸೃಷ್ಟಿಸಲಿದೆ. ಭಾರತವು ವಿಶ್ವದ ನಾಲ್ಕನೆಯ ಅತಿ ದೊಡ್ಡ ಅರ್ಥ ವ್ಯವಸ್ಥೆಯನ್ನು ಹೊಂದಿದೆ. ಇ.ಯು ದೇಶಗಳನ್ನು ಒಂದು ಗುಂಪಾಗಿ ಪರಿಗಣಿಸಿದಾಗ ಅದು ವಿಶ್ವದ ಎರಡನೆಯ ಅತಿದೊಡ್ಡ ಆರ್ಥಿಕತೆಯಾಗುತ್ತದೆ. ▶10

Publication Date
28/01/2026

### ಏನೆಲ್ಲಾ ಅವಕಾಶ?

- ಭಾರತ ರಫ್ತು ಮಾಡುವ ಉತ್ಪನ್ನಗಳ ಪೈಕಿ ಶೇ 99ರಷ್ಟಕ್ಕೆ ಇ.ಯು ಒಕ್ಕೂಟದ 27 ದೇಶಗಳ ಮಾರುಕಟ್ಟೆಗೆ ಆದ್ಯತೆ ಮೇರೆಗೆ ಪ್ರವೇಶ
- ಭಾರತದ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಹೊಸ ಅವಕಾಶ
- ಜವಳಿ, ಚರ್ಮೋದ್ಯಮ, ಸಮುದ್ರ ಉತ್ಪನ್ನಗಳು, ಹರಳು ಮತ್ತು ಆಭರಣ ವಲಯದ ಉದ್ಯಮಗಳಿಗೆ ಸೇರಿದ ಒಟ್ಟು 33 ಬಿಲಿಯನ್ ಡಾಲರ್ ಮೌಲ್ಯದ ಉತ್ಪನ್ನಗಳ ರಫ್ತಿಗೆ ಉತ್ತೇಜನ
- ಇ.ಯು ದೇಶಗಳ ಕಾರು ತಯಾರಕರಿಗೆ ತಮ್ಮ ವಾಹನಗಳನ್ನು ಭಾರತದಲ್ಲಿ ತಯಾರಿಸಲು, ಅವುಗಳನ್ನು ಭಾರತದಿಂದ ರಫ್ತು ಮಾಡುವ ಅವಕಾಶ ಮುಕ್ತ
- ಇ.ಯು ದೇಶಗಳ ಐ.ಟಿ ಹಾಗೂ ಐ.ಟಿ. ಆಧಾರಿತ ಸೇವೆಗಳು, ವೃತ್ತಿಪರ ಸೇವೆಗಳು, ಶಿಕ್ಷಣ ಸಂಬಂಧಿ ಸೇವೆಗಳ ವಲಯಕ್ಕೆ ಭಾರತದ ಕಂಪನಿಗಳಿಗೆ ಅವಕಾಶ



ಇ.ಯು ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮತ್ತು ಆ್ಯಂಟೊನಿಯೊ ಕೋಸ್ಟಾ ಅವರ ಜತೆ ಪ್ರಧಾನಿ ನರೇಂದ್ರ ಮೋದಿ —ಪಿಟಿಐ ಚಿತ್ರ

> ಇದು ವ್ಯಾಪಾರ ಒಪ್ಪಂದ ಮಾತ್ರವೇ ಅಲ್ಲ. ಇದು ಭಾರತ ಮತ್ತು ಇ.ಯು ದೇಶಗಳ ಸಮೃದ್ಧಿಗೆ ಒಂದು ನೀಲನಕ್ಷೆಯೂ ಹೌದು
>
> **ನರೇಂದ್ರ ಮೋದಿ,** ಪ್ರಧಾನಿ

### ಯುರೋಪಿನ ಐಷಾರಾಮಿ ಕಾರುಗಳು ಅಗ್ಗ

ವಿವರ ▶10

### ಭಾರತದಲ್ಲಿ ಇವು ಅಗ್ಗವಾಗಬಹುದು

ಇ.ಯು ದೇಶಗಳ ವಾಹನಗಳು, ವೈನ್, ಸ್ಪಿರಿಟ್, ಬಿಯರ್, ಆಲಿವ್ ಎಣ್ಣೆ, ಕಿವಿ ಹಣ್ಣು, ಪೇರು ಹಣ್ಣು, ಹಣ್ಣಿನ ಜ್ಯೂಸ್, ಬ್ರೆಡ್, ಪೇಸ್ಟ್ರಿ, ಬಿಸ್ಕತ್ತು, ಪಾಸ್ತಾ, ಚಾಕಲೇಟ್, ಸಾಕುಪ್ರಾಣಿಗಳ ಆಹಾರ, ಕುರಿ ಮಾಂಸ, ಕೆಲವು ಮಾಂಸಭಕ್ಷ್ಯಗಳಿಗೆ ಭಾರತದ ಮಾರುಕಟ್ಟೆ ಪ್ರವೇಶಿಸಲು ಸುಂಕದಲ್ಲಿ ವಿನಾಯಿತಿ ಸಿಗಲಿದೆ. ಈ ಉತ್ಪನ್ನಗಳಿಗೆ ಈಗ ಶೇ 33ರಿಂದ ಶೇ 150ರವರೆಗೆ ಸುಂಕ ವಿಧಿಸಲಾಗುತ್ತಿದೆ.

### ರಾಜ್ಯಕ್ಕೇನು ಲಾಭ?

ಒಪ್ಪಂದದ ಕುರಿತು ಪ್ರಕಟಣೆ ಹೊರಬಿದ್ದ ನಂತರದಲ್ಲಿ ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ಅವರು ದೇಶದ ಯಾವ ರಾಜ್ಯದ ಯಾವ ವಲಯಕ್ಕೆ ಹೆಚ್ಚಿನ ಪ್ರಯೋಜನ ಆಗಬಹುದು ಎಂಬ ವಿವರವನ್ನು ಎಕ್ಸ್ ಮೂಲಕ ನೀಡಿದ್ದಾರೆ.

ರಾಜ್ಯದ ರಾಸಾಯನಿಕಗಳು, ಎಂಜಿನಿಯರಿಂಗ್ ಸರಕುಗಳು, ಎಲೆಕ್ಟ್ರಾನಿಕ್ಸ್, ಔಷಧ ಮತ್ತು ವೈದ್ಯಕೀಯ ಉಪಕರಣಗಳು, ಜವಳಿ ಹಾಗೂ ಉಡುಪು ವಲಯಕ್ಕೆ ಒಪ್ಪಂದವು ಪ್ರಯೋಜನ ತಂದುಕೊಡಲಿದೆ ಎಂಬ ಮಾಹಿತಿ ಅವರು ಹಂಚಿಕೊಂಡಿರುವ ವಿವರದಲ್ಲಿ ಇದೆ.

### ಭಾರತದ ಈ ವಲಯಕ್ಕೆ ರಕ್ಷೆ

ಚೀಸ್ ಸೇರಿದಂತೆ ಹೈನುಗಾರಿಕೆ ಉತ್ಪನ್ನಗಳಿಗೆ ಭಾರತವು ಯಾವುದೇ ವಿನಾಯಿತಿ ನೀಡುತ್ತಿಲ್ಲ. ಸೋಯಾ ಮೀಲ್ ಮತ್ತು ಏಕದಳ ಧಾನ್ಯಗಳಿಗೆ ಕೂಡ ಭಾರತವು ರಿಯಾಯಿತಿ ನೀಡಿಲ್ಲ. ಇದೇ ಸಂದರ್ಭದಲ್ಲಿ ಇ.ಯು ತನ್ನ ಸಕ್ಕರೆ, ಗೋಮಾಂಸ, ಮಾಂಸ ಮತ್ತು ಕುಕ್ಕುಟ ಉದ್ಯಮ ವಲಯವನ್ನು ಭಾರತದ ಉತ್ಪನ್ನಗಳಿಗೆ ಮುಕ್ತವಾಗಿಸಿಲ್ಲ.

Presented by ಪ್ರಜಾವಾಣಿ

# ‘ಒಪ್ಪಂದಗಳ ತಾಯಿ’ಗೆ ದಾರಿ ಮುಕ್ತ

ಒಂದನೇ ಪುಟದಿಂದ...

ಭಾರತ ಮತ್ತು ಇ.ಯು ದೇಶಗಳ ಅರ್ಥ ವ್ಯವಸ್ಥೆಯು ಒಟ್ಟಾಗಿ ವಿಶ್ವದ ಜಿಡಿಪಿಯಲ್ಲಿ ಶೇಕಡ 25ರಷ್ಟು ಪಾಲು ಹೊಂದಿವೆ, ಜಾಗತಿಕ ವ್ಯಾಪಾರದಲ್ಲಿ ಮೂರನೆಯ ಒಂದರಷ್ಟು ಪಾಲು ಹೊಂದಿವೆ.

ಇ.ಯು ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮತ್ತು ಆ್ಯಂಟೊನಿಯೊ ಕೋಸ್ಟಾ ಅವರ ಜೊತೆ ಶೃಂಗಸಭೆಯಲ್ಲಿ ಭಾಗಿಯಾದ ಪ್ರಧಾನಿ ನರೇಂದ್ರ ಮೋದಿ ಅವರು ಭಾರತದ ಇತಿಹಾಸದಲ್ಲಿನ ಅತಿದೊಡ್ಡ ಮುಕ್ತ ವ್ಯಾಪಾರ ಒಪ್ಪಂದ ಕುರಿತ ಮಾತುಕತೆಯು ಪೂರ್ಣಗೊಂಡಿದೆ ಎಂಬುದನ್ನು ಪ್ರಕಟಿಸಿದರು.

ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ವಾಹನಗಳು ಹಾಗೂ ಉಕ್ಕು ಹೊರತುಪಡಿಸಿ, ಭಾರತದ ಬಹುತೇಕ ಎಲ್ಲ ಉತ್ಪನ್ನಗಳು (ಶೇ 93ರಷ್ಟಕ್ಕಿಂತ ಹೆಚ್ಚು) ಐರೋಪ್ಯ ಒಕ್ಕೂಟದ 27 ದೇಶಗಳ ಮಾರುಕಟ್ಟೆಯನ್ನು ಯಾವುದೇ ಸುಂಕ ಪಾವತಿಸದೆ ಪ್ರವೇಶಿಸಬಹುದು. ಭಾರತದ ಇನ್ನುಳಿದ ಸರಿಸುಮಾರು ಶೇ 6ರಷ್ಟು ಉತ್ಪನ್ನಗಳಿಗೆ (ಆಟೊಮೊಬೈಲ್‌ನಂತಹ ಉತ್ಪನ್ನಗಳಿಗೆ) ಸುಂಕ ಕಡಿತ ಅಥವಾ ಕೋಟಾ ಆಧಾರಿತ ಸುಂಕ ವಿನಾಯಿತಿಯ ಪ್ರಯೋಜನ ಸಿಗಲಿದೆ.

ಒಪ್ಪಂದಕ್ಕೆ ಈ ವರ್ಷದಲ್ಲಿ ಸಹಿ ಬೀಳಲಿದೆ. ಒಪ್ಪಂದವು ಮುಂದಿನ ವರ್ಷದ ಆರಂಭದಲ್ಲಿ ಜಾರಿಗೆ ಬರುವ ನಿರೀಕ್ಷೆ ಇದೆ. ಭಾರತದ ಸರಕುಗಳಿಗೆ ಇ.ಯು ದೇಶಗಳಲ್ಲಿ ಈಗ ಸರಾಸರಿ ಶೇ 3.8ರಷ್ಟು ಸುಂಕ ಇದೆ. ಇದು ಒಪ್ಪಂದ ಜಾರಿಯಾದ ನಂತರದಲ್ಲಿ ಶೇ 0.1ಕ್ಕೆ ಇಳಿಕೆ ಆಗುತ್ತದೆ.

ಇ.ಯು ದೇಶಗಳ ಶೇ 90ರಷ್ಟಕ್ಕಿಂತ ಹೆಚ್ಚಿನ ಉತ್ಪನ್ನಗಳಿಗೆ ಭಾರತದ ಮಾರುಕಟ್ಟೆಯನ್ನು 10 ವರ್ಷಗಳ ಅವಧಿಯಲ್ಲಿ ಸುಂಕ ರಹಿತವಾಗಿ ಪ್ರವೇಶಿಸಲು ಸಾಧ್ಯವಾಗಲಿದೆ. ಒಪ್ಪಂದ ಜಾರಿಗೆ ಬರುವ ಮೊದಲ ದಿನ ಶೇ 30ರಷ್ಟು ಉತ್ಪನ್ನಗಳಿಗೆ ಮಾತ್ರ ಭಾರತದ ಮಾರುಕಟ್ಟೆಗೆ ಸುಂಕರಹಿತ ಪ್ರವೇಶ ಸಿಗಲಿದೆ.

ಐರೋಪ್ಯ ಒಕ್ಕೂಟದ ದೇಶಗಳ ಯಂತ್ರೋಪಕರಣಗಳು, ಎಲೆಕ್ಟ್ರಿಕಲ್ ಉಪಕರಣಗಳು, ವಿಮಾನಗಳು, ವೈದ್ಯಕೀಯ ಹಾಗೂ ಶಸ್ತ್ರಚಿಕಿತ್ಸಾ ಉಪಕರಣಗಳು, ಪ್ಲಾಸ್ಟಿಕ್, ರಾಸಾಯನಿಕಗಳು, ಉಕ್ಕು ಮತ್ತು ಕಬ್ಬಿಣ, ಔಷಧಗಳಿಗೆ ಭಾರತದ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಲು ಆಗಲಿದೆ.

ಸೇವಾ ವಲಯಕ್ಕೆ ಸಂಬಂಧಿಸಿದ 144 ಉಪ ವಲಯಗಳನ್ನು ಇ.ಯು ಭಾರತದ ಪಾಲಿಗೆ ಮುಕ್ತವಾಗಿಸುತ್ತಿದೆ. ಇದಕ್ಕೆ ಪ್ರತಿಯಾಗಿ ಭಾರತವು 102 ಉಪ ವಲಯಗಳನ್ನು ಇ.ಯು ಪಾಲಿಗೆ ಮುಕ್ತವಾಗಿಸುತ್ತಿದೆ.

ಇಂಗಾಲದ ತೆರಿಗೆ ವಿಚಾರವಾಗಿ ಇ.ಯು ಈ ಒಪ್ಪಂದದಲ್ಲಿ ಭಾರತಕ್ಕೆ ನಿರ್ದಿಷ್ಟವಾದ ಯಾವುದೇ ರಿಯಾಯಿತಿ ನೀಡುತ್ತಿಲ್ಲ. ಆದರೆ ಇ.ಯು ಮುಂದಿನ ದಿನಗಳಲ್ಲಿ ಯಾವುದೇ ದೇಶಕ್ಕೆ ಈ ತೆರಿಗೆ ವಿಚಾರದಲ್ಲಿ ಯಾವುದೇ ಬಗೆಯ ವಿನಾಯಿತಿ ನೀಡಿದಲ್ಲಿ, ಅದು ಭಾರತಕ್ಕೂ ಕೂಡ ಅನ್ವಯವಾಗುತ್ತದೆ ಎಂಬ ಭರವಸೆ ನೀಡಲಾಗಿದೆ.

## ಯುರೋಪಿನ ಐಷಾರಾಮಿ ಕಾರುಗಳು ಅಗ್ಗ

ಒಪ್ಪಂದವು ಜಾರಿಗೆ ಬಂದ ನಂತರದಲ್ಲಿ ಯುರೋಪಿನ ಐಷಾರಾಮಿ ಕಾರುಗಳಿಗೆ ಭಾರತವು ಕೋಟಾ ಆಧಾರಿತ ಸುಂಕ ವಿನಾಯಿತಿ ಒದಗಿಸಲಿದೆ. ಇದರಿಂದಾಗಿ ಬಿಎಂಡಬ್ಲ್ಯು, ಮರ್ಸಿಡೀಸ್, ಲ್ಯಾಂಬೋರ್ಗಿನಿ, ಪೋರ್ಷೆ, ಔಡಿ ಕಂಪನಿಗಳ ಕಾರುಗಳ ಬೆಲೆಯು ಭಾರತದ ಮಾರುಕಟ್ಟೆಯಲ್ಲಿ ಕಡಿಮೆ ಆಗುವ ನಿರೀಕ್ಷೆ ಇದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಇ.ಯು ದೇಶಗಳು ಭಾರತದ ಆಟೊಮೊಬೈಲ್‌ಗಳ ಮೇಲಿನ ಸುಂಕವನ್ನು ಹಂತ ಹಂತವಾಗಿ ತಗ್ಗಿಸಲಿವೆ. ಭಾರತವು ಇ.ಯು ಒಕ್ಕೂಟದ ದೇಶಗಳ ಕಾರುಗಳ ಮೇಲಿನ ಸುಂಕವನ್ನು ವಾರ್ಷಿಕ 2.5 ಲಕ್ಷ ವಾಹನಗಳ ಕೋಟಾ ಮಿತಿಗೆ ಒಳಪಟ್ಟು ಶೇ 10ಕ್ಕೆ ಇಳಿಕೆ ಮಾಡಲಿದೆ.

ಭಾರತದ ಕಾರು ಮಾರುಕಟ್ಟೆಯಲ್ಲಿ ₹10 ಲಕ್ಷದಿಂದ ₹25 ಲಕ್ಷದವರೆಗಿನ ಕಾರುಗಳ ಮಾರಾಟವು ಹೆಚ್ಚಿದೆ. ಇ.ಯು ದೇಶಗಳು ಭಾರತದಲ್ಲಿ ಈ ಬೆಲೆಯ ಕಾರುಗಳ ಮಾರಾಟದಲ್ಲಿ ಹೆಚ್ಚಿನ ಆಸಕ್ತಿ ಹೊಂದಿಲ್ಲ. ಹೀಗಾಗಿ, ಇ.ಯು. ದೇಶಗಳಿಗೆ ಸೇರಿದ ಕಂಪನಿಗಳ ₹25 ಲಕ್ಷಕ್ಕಿಂತ ಕಡಿಮೆ ಬೆಲೆಯ ಕಾರುಗಳನ್ನು ಇಲ್ಲಿಗೆ ರಫ್ತು ಮಾಡುವ ಬದಲು, ಅವುಗಳನ್ನು ಕಂಪನಿಗಳು ಭಾರತದಲ್ಲಿಯೇ ತಯಾರು ಮಾಡಬಹುದು ಎಂದು ಅಧಿಕಾರಿಯೊಬ್ಬರು ವಿವರಿಸಿದ್ದಾರೆ.

ಕೋಟಾ ಮೂಲಕ ನಿಗದಿ ಮಾಡಿರುವುದಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಯುರೋಪಿನ ಕಂಪನಿಗಳ ಕಾರುಗಳಿಗೆ ಭಾರತದಲ್ಲಿ ಬೇಡಿಕೆ ಇದೆ ಎಂದಾದರೆ, ಆ ಮಾದರಿ ಕಾರುಗಳನ್ನು ಕಂಪನಿಗಳು ಭಾರತದಲ್ಲಿಯೇ ತಯಾರು ಮಾಡುವುದಕ್ಕೆ ಉತ್ತೇಜನ ನೀಡುವುದು ಸರ್ಕಾರದ ಉದ್ದೇಶ ಎಂದು ಅಧಿಕಾರಿ ಹೇಳಿದ್ದಾರೆ.

ಯುರೋಪಿನ ವಿದ್ಯುತ್ ಚಾಲಿತ ವಾಹನಗಳಿಗೆ ಭಾರತದ ಮಾರುಕಟ್ಟೆಯಲ್ಲಿ ಕೋಟಾ ಆಧಾರಿತ ಸುಂಕ ಇಳಿಕೆಯ ಪ್ರಯೋಜನವು ಒಪ್ಪಂದ ಜಾರಿಗೆ ಬಂದ ಐದನೆಯ ವರ್ಷದಿಂದ ಸಿಗಲಿದೆ.

### ಶೂನ್ಯಕ್ಕೆ ಇಳಿಯಲಿದೆ ಸುಂಕ

| ವಲಯ | ಈಗಿನ ಸುಂಕ (%) |
|---|---|
| ಸಮುದ್ರ ಉತ್ಪನ್ನಗಳು | 0-26 |
| ರಾಸಾಯನಿಕಗಳು | 12.8ರವರೆಗೆ |
| ಪ್ಲಾಸ್ಟಿಕ್, ರಬ್ಬರ್ | 6.5ರವರೆಗೆ |
| ಚರ್ಮ ಮತ್ತು ಪಾದರಕ್ಷೆ | 17ರವರೆಗೆ |
| ಜವಳಿ, ವಸ್ತ್ರ, ಉಡುಪು | 12ರವರೆಗೆ |
| ಹರಳು ಮತ್ತು ಆಭರಣ | 4ರವರೆಗೆ |
| ರೈಲು, ವಿಮಾನ, ಹಡಗು, ದೋಣಿ | 7.7ರವರೆಗೆ |
| ಪೀಠೋಪಕರಣಗಳು | 10.5ರವರೆಗೆ |
| ಆಟಿಕೆಗಳು | 4.7ರವರೆಗೆ |
| ಕ್ರೀಡಾ ಉತ್ಪನ್ನಗಳು | 4.7ರವರೆಗೆ |

ಭಾರತದಿಂದ ರಫ್ತು ಆಗುವ ಈ ಎಲ್ಲ ಉತ್ಪನ್ನಗಳ ಮೇಲಿನ ಸುಂಕವು ಶೂನ್ಯಕ್ಕೆ ತಗ್ಗಲಿದೆ

Publication Date
28/01/2026

Presented by ಪ್ರಜಾವಾಣಿ

## ❖ ಆರ್‌ಟಿಇ: ಖಾಸಗಿಗೂ ಅನ್ವಯಕ್ಕೆ ತಿದ್ದುಪಡಿ ಶಿಕ್ಷಣ ಹಕ್ಕು ಕಾಯ್ದೆ

**ಸಂದರ್ಭ: (ಆರ್‌ಟಿಇ) ಅಡಿ ಶೇ 25ರಷ್ಟು ಸೀಟುಗಳನ್ನು ಉಚಿತವಾಗಿ ನೀಡುವುದನ್ನು ಸರ್ಕಾರಿ, ಅನುದಾನಿತ ಶಾಲೆಗಳಿಗೆ ಸೀಮಿತಗೊಳಿಸಿ 2019ರಲ್ಲಿ ಮಾಡಿರುವ ತಿದ್ದುಪಡಿಯನ್ನು ರಾಜ್ಯ ಸರ್ಕಾರ ವಾಪಸ್ ಪಡೆಯುವ ಸಾಧ್ಯತೆಯಿದೆ.**

- ಈ ಕುರಿತು ಜತೆ ಮಾತನಾಡಿದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವ ಮಧು ಬಂಗಾರಪ್ಪ, 'ಎಲ್ಲ ರಾಜ್ಯಗಳು ಖಾಸಗಿ ಶಾಲೆಗಳಲ್ಲಿ ಶೇಕಡ 25ರಷ್ಟು ಸೀಟುಗಳನ್ನು ಅರ್‌ಟಿಇ ಕೋಟಾ ಮೂಲಕ ತುಂಬುವುದನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕೆಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಈ ವಿಷಯವನ್ನು ಮುಖ್ಯ ಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತರಲಾಗುವುದು' ಎಂದು ಹೇಳಿದರು.
- ಆದರೆ, 'ಈ ತಿದ್ದುಪಡಿಗಳನ್ನು ಹಿಂಪಡೆಯುವುದರಿಂದ ಆರ್ಥಿಕವಾಗಿ ಉಂಟಾಗುವ ಪರಿಣಾಮಗಳು, ಹಣಕಾಸು ಇಲಾಖೆ ಅಭಿಪ್ರಾಯ ಮತ್ತು ತೀರ್ಮಾನವೂ ಮಹತ್ವದ್ದಾಗಿರುತ್ತದೆ. ಖಾಸಗಿ ಶಾಲೆಗಳಲ್ಲಿ ಶೇ 25

ಸೀಟು ಗಳನ್ನು ಆರ್‌ಟಿಇ ಕೋಟಾದಡಿ ಭರ್ತಿ ಮಾಡಿದರೆ, ಶುಲ್ಕ ಮರು ಪಾವತಿಗಾಗಿ ಸುಮಾರು ₹500 ಕೋಟಿ ಅಗತ್ಯವಿದೆ' ಎಂದು ಸಚಿವರು ವಿವರಿಸಿದರು.

- ಆರ್‌ಟಿಇ ಕಾಯ್ದೆಯ ನಿಯಮ 4ಕ್ಕೆ ತರಲಾದ ಹಿಂಪಡೆಯುವುದಕ್ಕೆ ತಿದ್ದುಪಡಿಗಳನ್ನು ತಮಗೆ ವೈಯಕ್ತಿಕವಾಗಿಯಾವುದೇ ಆಕ್ಷೇಪ ಇಲ್ಲ' ಎಂದು ಅವರು ಸ್ಪಷ್ಟಪಡಿಸಿದರು.
- ಆರ್‌ಟಿಇ ಕಾಯ್ದೆಯನ್ನು ಜಾರಿಗೆ ತಂದ ಮೊದಲ ರಾಜ್ಯ ಕರ್ನಾಟಕ ವಾಗಿದೆ. ಆದರೆ, 2019ರಲ್ಲಿ ನಿಯಮ 4ಕ್ಕೆ ತಿದ್ದುಪಡಿ ಮಾಡಿ, ಸಮೀಪದಲ್ಲೇ (1 ಕಿಲೋ ಮೀಟರ್ ಒಳಗೆ) ಸರ್ಕಾರಿ ಅಥವಾ ಅನುದಾನಿತ ಶಾಲೆಗಳಿದ್ದರೆ ಖಾಸಗಿ ಶಾಲೆಗಳಲ್ಲಿ ಪ್ರವೇಶ ನೀಡುವುದಕ್ಕೆ ವಿನಾಯಿತಿ ನೀಡಿತ್ತು. ಸರ್ಕಾರಿ ಶಾಲೆಗಳಲ್ಲಿ ಪ್ರವೇಶ ಹೆಚ್ಚಿಸಲು ಈ ಕ್ರಮ ಕೈಗೊಳ್ಳಲಾಗಿದೆ ಎಂದು ಸರ್ಕಾರವು ಆಗ ಸಮರ್ಥಿಸಿಕೊಂಡಿತ್ತು.
- ಈ ತಿದ್ದುಪಡಿಯೊಂದಿಗೆ, ರಾಜ್ಯ ಸರ್ಕಾರವು ಸರ್ಕಾರಿ ಮತ್ತು ಅನುದಾನಿತ ಶಾಲೆಗಳಲ್ಲಿ ಪ್ರವೇಶಕ್ಕೆ ಆದ್ಯತೆ ನೀಡಿತು. ಇದರಿಂದ ಆರ್‌ಟಿಇ ಅಡಿ ಪ್ರವೇಶಕ್ಕೆ ಬೇಡಿಕೆ ಕುಸಿದು, ಶೇ 90 ಸೀಟುಗಳು ಖಾಲಿ ಉಳಿದಿವೆ. 2016-17ನೇ ಸಾಲಿನಲ್ಲಿ ವಿವಿಧ ತಾಂತ್ರಿಕ ಸಮಸ್ಯೆಗಳ ಕಾರಣದಿಂದ ಆರ್‌ಟಿಇ ಅಡಿ ಪ್ರವೇಶ ಗಳು ಕಡಿಮೆಯಾಗಿದ್ದವು. ಪೋಷಕರು ನಕಲಿ ಪ್ರಮಾಣ ಪತ್ರ ಸಲ್ಲಿಸಿದ್ದು ಪ್ರಮುಖ ಕಾರಣಗಳಲ್ಲಿ ಒಂದಾಗಿತ್ತು.
- 86 ಸಾವಿರಕ್ಕೂ ಹೆಚ್ಚು ಅರ್ಜಿಗಳಲ್ಲಿ 34 ಸಾವಿರ ಅರ್ಜಿಗಳು ಅನರ್ಹ ಜಾತಿ/ಆದಾಯ ಪ್ರಮಾಣ ಪತ್ರಗಳ ಕಾರಣ ದಿಂದ ತಿರಸ್ಕೃತಗೊಂಡವು. ಹಾಗೆಯೇ. 24 ಸಾವಿರಕ್ಕೂ ಹೆಚ್ಚು ಅರ್ಜಿಗಳನ್ನು ಅನರ್ಹ ಆಧಾರ್/ಮತದಾರರ ಗುರುತಿನ ಚೀಟಿಗಳ ಕಾರಣದಿಂದ ನಿರಾಕರಿಸಲಾಗಿತ್ತು.

## ಸುಪ್ರೀಂ ಕೋರ್ಟ್ ಏನು ಹೇಳಿದೆ?

- 2009ರ ಆರ್‌ಟಿಇ ಕಾಯ್ದೆಯಡಿ ಖಾಸಗಿ ಅನುದಾನರಹಿತ ಅಲ್ಪಸಂಖ್ಯಾತವಲ್ಲದ ಶಾಲೆಗಳಲ್ಲಿ ಆರ್ಥಿಕವಾಗಿ ಹಿಂದುಳಿದ ವರ್ಗದ ಮಕ್ಕಳಿಗೆ ಶೇ25ರಷ್ಟು ಸೀಟುಗಳು ನೀಡುವುದನ್ನು ರಾಜ್ಯಗಳು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಜನವರಿ 14ರಂದು ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತು.
- ಇದನ್ನು 'ರಾಷ್ಟ್ರೀಯ ಮಿಷನ್' ಎಂದು ಹೇಳಿರುವ ನ್ಯಾಯಾಲಯ, ಈ ಕೋಟಾದಡಿ ಸೀಟುಗಳನ್ನು ಭರ್ತಿ ಮಾಡುವುದನ್ನು ಖಚಿತಪಡಿಸಲು ರಾಜ್ಯಗಳು ನಿಯಮಗಳನ್ನು ರೂಪಿಸಬೇಕು ಎಂದು ಆದೇಶಿಸಿತು.




# ಅಭಿವ್ಯಕ್ತಿಗೆ ಸಂವಿಧಾನದ ರಕ್ಷಣೆ

ಸಂವಿಧಾನವೇ ಬೆಳಕು

Curated by DH DECCAN HERALD | ಪ್ರಜಾವಾಣಿ




ಬೆಂಗಳೂರಿನಲ್ಲಿ ನಡೆದ 'ಸಂವಿಧಾನವೇ ಬೆಳಕು' ಕುರಿತ ಸಂವಾದದಲ್ಲಿ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್, ಮಂಜುಳಾದೇವಿ, ವೈ.ಗ.ಜಗದೀಶ್, ಕ್ಯಾಪ್ಟನ್ ಪಿ. ಮಣಿವಣ್ಣನ್ ಮತ್ತು ನಟರಾಜ್ ಹುಳಿಯಾರ್ ಭಾಗಿಯಾಗಿದ್ದರು ಪ್ರಜಾವಾಣಿ ಚಿತ್ರ

• ಜಯಸಿಂಹ ಆರ್.

ದೇಶದ ಪ್ರತಿಯೊಬ್ಬ ಪ್ರಜೆಯೂ ತನ್ನ ಅನಿಸಿಕೆಯನ್ನು ಮುಕ್ತವಾಗಿ ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಸಂವಿಧಾನ ನೀಡಿದೆ. ಸಂವಿಧಾನದ 19(1)(ಎ) ವಿಧಿಯಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ವ್ಯಾಖ್ಯಾನಿಸಲಾಗಿದೆ.

ಅಭಿವ್ಯಕ್ತಿ ಸ್ವಾತಂತ್ರ್ಯವೆಂಬುದು ಇನ್ನೊಬ್ಬರ ಮಾತು ಮತ್ತು ಅಭಿಪ್ರಾಯವನ್ನು ಕೇಳಿಸಿಕೊಳ್ಳುವ, ಮತ್ತೊಬ್ಬರ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯ ಹೊಂದುವ, ಮಾಹಿತಿಯನ್ನು ಪಡೆದುಕೊಳ್ಳುವ ಮತ್ತು ಪ್ರಶ್ನಿಸುವ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದು ವಿವಿಧ ನ್ಯಾಯಾಲಯಗಳ ಮತ್ತು ಸಂವಿಧಾನ ತಜ್ಞರ ಅಭಿಪ್ರಾಯ. ಫ್ರೆಂಚ್ ಚಿಂತಕ ವೋಲ್ಟೇರ್ ಹೇಳುವಂತೆ, 'ನಿನ್ನ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. ಆದರೆ ಅದನ್ನು ಹೇಳುವ ಹಕ್ಕು ನಿನಗಿದೆ ಎಂಬುದಕ್ಕೆ ನಾನು ಕಡೆಯ ತನಕ ಬದ್ಧವಾಗಿರುತ್ತೇನೆ' ಎಂಬುದೇ ಅಭಿವ್ಯಕ್ತಿ ಸ್ವಾತಂತ್ರ್ಯ.

ನೃತ್ಯ, ನಾಟಕ, ಗಾಯನ, ಬೀದಿ ನಾಟಕ, ಸಿನಿಮಾ, ಧಾರಾವಾಹಿ, ಛಾಯಾಗ್ರಹಣ, ಚಿತ್ರಕಲೆ, ಸಾಹಿತ್ಯ, ವಿಮರ್ಶೆ... ಎಲ್ಲವೂ ಅಭಿವ್ಯಕ್ತಿ ಸ್ವಾತಂತ್ರ್ಯವೇ ಹೌದು.

ಆದರೆ, ಸಂವಿಧಾನವು ನಮಗೆ ನೀಡಲಾಗಿರುವ ಅಭಿವ್ಯಕ್ತಿ ಸ್ವಾತಂತ್ರ್ಯವು ಪರಿಪೂರ್ಣವಲ್ಲ. ಅಂದರೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳಿವೆ. ದೇಶದ ಭದ್ರತೆ, ಸಾರ್ವಭೌಮತ್ವ, ಏಕತೆ, ಸ್ನೇಹಿ ದೇಶಗಳ ಜತೆಗಿನ ಸಂಬಂಧ, ಶಾಂತಿ, ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆ ತರುವ ಹಾಗೂ ಮತ್ತು ಇತರರ ಮಾನಕ್ಕೆ ಹಾನಿಯುಂಟು ಮಾಡುವಂತಹ ಯಾವುದೇ ರೀತಿಯ ಅಭಿವ್ಯಕ್ತಿಗೆ ನಿರ್ಬಂಧವಿದೆ. ಇವುಗಳನ್ನು ಕಾಪಾಡಿಕೊಳ್ಳಲು ಸರ್ಕಾರವು ಅಗತ್ಯ ಕಾನೂನುಗಳನ್ನು ರೂಪಿಸಬಹುದು ಎಂದು ಸಂವಿಧಾನದ 19(2)ನೇ ವಿಧಿ ಹೇಳುತ್ತದೆ.

ಭಾರತದ ಸಂದರ್ಭದಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ನಿರ್ಬಂಧಗಳು ಬ್ರಿಟಿಷ್ ಆಳ್ವಿಕೆಯಲ್ಲಿಯೇ ಆರಂಭವಾಗಿದೆ. ಸ್ವಾತಂತ್ರ್ಯ ಹೋರಾಟಗಾರರನ್ನು ಹತ್ತಿಕ್ಕಲು ಬ್ರಿಟಿಷರು ದೇಶದ್ರೋಹ (ಭಾರತೀಯ ದಂಡ ಸಂಹಿತೆಯ 124ಎ) ಕಾನೂನನ್ನು ಜಾರಿಗೆ ತಂದಿದ್ದರು. ಅಂತಹ ದಬ್ಬಾಳಿಕೆಗಳ ಅನುಭವವಿದ್ದ ಕಾರಣಕ್ಕೇ, ಸಂವಿಧಾನ ರೂಪಿಸಿದ ನಮ್ಮ ಪೂರ್ವಜರು ಅಭಿವ್ಯಕ್ತಿ ಸ್ವಾತಂತ್ರವನ್ನು ನಮಗೆಲ್ಲಾ ನೀಡಿದ್ದಾರೆ. ಪ್ರಭುತ್ವವು ಇಂದಿಗೂ ಈ ಕಾನೂನುಗಳನ್ನು ಉಳಿಸಿಕೊಂಡು, ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ನಿಯಂತ್ರಿಸುತ್ತಿವೆ.

ಅಮೆರಿಕದಲ್ಲಿ ಪತ್ರಿಕಾ ಸ್ವಾತಂತ್ರ್ಯ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎರಡೂ ಬೇರೆ-ಬೇರೆಯೇ. ಭಾರತದಲ್ಲಿ ಪತ್ರಿಕಾ ಸ್ವಾತಂತ್ರ್ಯವೆಂಬುದು ಪ್ರತ್ಯೇಕವಾಗಿಲ್ಲ. ಅಭಿವ್ಯಕ್ತಿ ಸ್ವಾತಂತ್ರ್ಯವೇ ಪತ್ರಿಕಾ ಸ್ವಾತಂತ್ರ್ಯವನ್ನೂ ಒಳಗೊಂಡಿದೆ ಎಂದು ಸುಪ್ರೀಂ ಕೋರ್ಟ್ ವ್ಯಾಖ್ಯಾನಿಸಿದೆ.

ಪ್ರಜಾವಾಣಿ ನೋಡಿಯೊ


ವಿಡಿಯೊ ನೋಡಲು ಸ್ಕ್ಯಾನ್ ಮಾಡಿ

## ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಭುತ್ವ ಮತ್ತು ಸಂವಿಧಾನ: ಸಂವಾದ

'ಅಭಿವ್ಯಕ್ತಿ ಸ್ವಾತಂತ್ರ್ಯ, ಪ್ರಭುತ್ವ ಮತ್ತು ಸಂವಿಧಾನ' ಎಂಬ ವಿಷಯದ ಕುರಿತು ಸಮಾಜ ಕಲ್ಯಾಣ ಇಲಾಖೆ ಹಾಗೂ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಪತ್ರಿಕಾ ಸಮೂಹ ಸಂಸ್ಥೆಯ ಸಹಯೋಗದಲ್ಲಿ ಬೆಂಗಳೂರಿನಲ್ಲಿ ಸಂವಾದ ನಡೆಯಿತು. 'ಸಂವಿಧಾನವೇ ಬೆಳಕು–ಒಂದು ಚರ್ಚೆ' ವಿಷಯದ ಭಾಗವಾಗಿ ನಡೆದ ಸಂವಾದದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್. ನಾಗಮೋಹನ್‌ದಾಸ್, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿವೃತ್ತ ಪ್ರಾಧ್ಯಾಪಕ ನಟರಾಜ್ ಹುಳಿಯಾರ್, ಸಮಾಜ ಕಲ್ಯಾಣ ಇಲಾಖೆಯ ಪ್ರಧಾನ ಕಾರ್ಯದರ್ಶಿ ಕ್ಯಾಪ್ಟನ್ ಪಿ.ಮಣಿವಣ್ಣನ್ ಮತ್ತು ಹೈಕೋರ್ಟ್‌ನ ಹಿರಿಯ ವಕೀಲರಾದ ಮಂಜುಳಾದೇವಿ ಪಾಲ್ಗೊಂಡಿದ್ದರು. 'ಪ್ರಜಾವಾಣಿ' ವರದಿಗಾರರ ವಿಭಾಗದ ಮುಖ್ಯಸ್ಥ ವೈ.ಗ.ಜಗದೀಶ್ ಸಂವಾದ ನಡೆಸಿಕೊಟ್ಟರು.

### ಚರ್ಚೆಯಲ್ಲಿ ವ್ಯಕ್ತವಾದ ವಿಷಯಗಳು

- ಮತ್ತೊಬ್ಬರು ಏನು ಹೇಳುತ್ತಾರೆ ಎಂಬುದನ್ನು ಕೇಳಿಸಿಕೊಳ್ಳುವುದೂ ಸಹ ಅಭಿವ್ಯಕ್ತಿ ಸ್ವಾತಂತ್ರ್ಯ ಒಂದು ಪ್ರಧಾನ ಅಂಗ. ಆದರೆ ಈಚೆಗೆ ಕೇಳಿಸಿಕೊಳ್ಳುವುದು ಹಿಂದೆ ಸರಿದಿದೆ ಮತ್ತು ಕೇಳುವುದು ಮುನ್ನೆಲೆಗೆ ಬಂದಿದೆ
- ದೇಶದ್ರೋಹದ ಕಾನೂನನ್ನು ಬಳಸಿಕೊಂಡು ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕಲಾಗುತ್ತಿತ್ತು. ಈಗ ಆ ಕಾನೂನಿನ ಹೆಸರು ಬದಲಾಗಿದೆ. ಸರ್ಕಾರಗಳ ವಿರುದ್ಧ ಮಾತನಾಡುವವರ ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕೆಲಸವಾಗುತ್ತಿದೆ
- ಮತ್ತೊಬ್ಬರ ಭಾವನೆಗಳಿಗೆ ನೋವುಂಟು ಮಾಡುವ ರೀತಿಯ ಅಭಿಪ್ರಾಯಗಳನ್ನು ನೀಡಿ, ಅಭಿವ್ಯಕ್ತಿ ಸ್ವಾತಂತ್ರ್ಯದ ಹಕ್ಕಿನ ಅಡಿಯಲ್ಲಿ ರಕ್ಷಣೆ ಪಡೆಯಲಾಗುತ್ತಿದೆ
- ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವಂತಹ ಕಾನೂನುಗಳನ್ನು ರದ್ದುಪಡಿಸಬೇಕು. ಅಭಿವ್ಯಕ್ತಿಯ ಅಪರಾಧೀಕರಣ ನಿಲ್ಲಬೇಕು
- ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಕ್ರಮಗಳ ವಿರುದ್ಧ ಹೊಸ ತಲೆಮಾರಿನ ಕಮೀಡಿಯನ್‌ಗಳು ದೊಡ್ಡಮಟ್ಟದಲ್ಲಿ ದನಿ ಎತ್ತುತ್ತಿದ್ದಾರೆ. ಇದು ಒಳ್ಳೆಯ ಬೆಳವಣಿಗೆ
- ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಸಂವಿಧಾನ, ಪ್ರಸ್ತಾವನೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯವನ್ನೂ ಒಳಗೊಂಡು ಮೂಲಭೂತ ಹಕ್ಕುಗಳನ್ನು ಅರ್ಥಮಾಡಿಸುವ ಕೆಲಸವಾಗಬೇಕು


16ನೇ ಹಣಕಾಸು ಆಯೋಗದ ಮುಂದೆ ರಾಜ್ಯದ 9 ಬೇಡಿಕೆಗಳು

# ರಾಜ್ಯಕ್ಕೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲು ಸಿಗಲೇಬೇಕು

16ನೇ ಹಣಕಾಸು ಆಯೋಗದ ವರದಿಯನ್ನು ಬಜೆಟ್ ಅಧಿವೇಶನದ ಆರಂಭದಲ್ಲಿ ಕೇಂದ್ರ ಸರ್ಕಾರ ಮಂಡಿಸುವ ನಿರೀಕ್ಷೆ ಇದೆ. 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ಕರ್ನಾಟಕ ಸೇರಿದಂತೆ ಅಭಿವೃದ್ಧಿ ಹೊಂದಿದ ರಾಜ್ಯಗಳಿಗೆ ಅನ್ಯಾಯವಾಗಿದೆ, ತೆರಿಗೆ ಪಾಲಿನಲ್ಲಿ ಗಣನೀಯ ಇಳಿಕೆಯಾಗಿದೆ ಎಂಬ ಕೂಗು ಮೊದಲಿನಿಂದಲೂ ಇದೆ. ಅನುದಾನ ಹಂಚಿಕೆಯಲ್ಲೂ ಕೇಂದ್ರ ಸರ್ಕಾರ ತಾರತಮ್ಯ ಎಸಗಿದೆ ಎಂಬ ಆಪಾದನೆಯನ್ನು ಬಿಜೆಪಿಯೇತರ ರಾಜ್ಯ ಸರ್ಕಾರಗಳು ಮಾಡುತ್ತಾ ಬಂದಿವೆ. 15ನೇ ಹಣಕಾಸು ಆಯೋಗದ ಶಿಫಾರಸಿನಿಂದ ರಾಜ್ಯಕ್ಕೆ ಆಗಿರುವ ಆರ್ಥಿಕ ನಷ್ಟ, ಅನುದಾನ ಹಂಚಿಕೆಯಲ್ಲಿ ಕರ್ನಾಟಕಕ್ಕೆ ಆಗಿರುವ ಅನ್ಯಾಯ ಹಾಗೂ ಹಣಕಾಸು ಆಯೋಗಕ್ಕೆ ರಾಜ್ಯ ಮಾಡಿರುವ ಮನವಿಗಳ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಲ್ಲಿ ವಿವರಿಸಿದ್ದಾರೆ

• ಸಿದ್ದರಾಮಯ್ಯ

ರಾಜ್ಯವು 16ನೇ ಹಣಕಾಸು ಆಯೋಗದ ಮುಂದೆ ಸಲ್ಲಿಸಿದ ಬೇಡಿಕೆ ಹಾಗೂ ಒತ್ತಾಯಗಳನ್ನು ಜನರ ಮುಂದೆ ತಿಳಿಸಬೇಕಾದುದು ನಮ್ಮ ಕರ್ತವ್ಯ. ನಮ್ಮ ಒತ್ತಾಯಪೂರ್ವಕ ಮನವಿಗಳಿವು:

## ಅನುದಾನ ಕೊಡದೆ ಕೇಂದ್ರದಿಂದ ಅನ್ಯಾಯ

## ❖ ಶಾಂತಿ ಕಾಪಾಡುವ ಸಂಸ್ಥೆಯಾಗಿ ಉಳಿದಿಲ್ಲ: ಭಾರತ

**ಸಂದರ್ಭ: ವಿಶ್ವಸಂಸ್ಥೆ (ಪಿಟಿಐ) ವಿಶ್ವಸಂಸ್ಥೆಯು ಅಂತರರಾಷ್ಟ್ರೀಯ ಶಾಂತಿಯನ್ನು ಕಾಪಾಡುವ ಸಂಸ್ಥೆಯಾಗಿ ಉಳಿದಿಲ್ಲ. ಅದೀಗ ಸಮಾನಾಂತರವಾದ ಸೀಮಿತ ಗುಂಪಿನ ಚೌಕಟ್ಟುಗಳನ್ನು ಹೊಂದಿರುವ ಸಂಸ್ಥೆಯಾಗಿದೆ ಎನ್ನುವ ಚರ್ಚೆಗಳು ನಡೆಯುತ್ತಿವೆ ಎಂದು ಭಾರತ ಹೇಳಿದೆ.**

- 'ಎಲ್ಲ ರಾಷ್ಟ್ರಗಳು ಸಮಾನ ಮತ್ತು ಅಂತರರಾಷ್ಟ್ರೀಯ ವಿಚಾರದ ಬಗ್ಗೆ ನಿರ್ಧಾರ ಕೈಗೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸಬೇಕು ಎನ್ನುವ ವಿಶ್ವಸಂಸ್ಥೆಯ ಧ್ಯೇಯಕ್ಕೀಗ ಚ್ಯುತಿ ಬಂದಿದೆ' ಎಂದು ವಿಶ್ವಸಂಸ್ಥೆಯ ಭಾರತದ ಶಾಶ್ವತ ಪ್ರತಿನಿಧಿ ಪರ್ವತನೇನಿ ಹರೀಶ್ ಸೋಮವಾರ ಹೇಳಿದರು. ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ನಡೆದ ಬಹಿರಂಗ ಚರ್ಚೆ ವೇಳೆ ಅವರು ಈ ಹೇಳಿಕೆ ನೀಡಿದರು.
- ಜಗತ್ತಿನ ಹಲವು ಭೌಗೋಳಿಕ ರಾಜಕೀಯ ಸಂಘರ್ಷವನ್ನು ನಿಲ್ಲಿಸುವಲ್ಲಿ ಹಾಗೂ ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆ ಕಾಪಾಡುವಲ್ಲಿ ವಿಶ್ವಸಂಸ್ಥೆ ಮತ್ತು ಅದರ ಅಂಗಸಂಸ್ಥೆಯಾದ ಭದ್ರತಾ ಮಂಡಳಿಯು ವಿಫಲವಾಗಿರುವಾಗಲೇ ಭಾರತ ಈ ಹೇಳಿಕೆ ನೀಡಿದ.

## ❖ ಡಾಕ್ ಘರ್ ನಿರ್ಯಾತ್ ಕೇಂದ್ರಗಳನ್ನು ತೆರೆದ ಅಂಚೆ ಇಲಾಖೆ: ಸಣ್ಣ ರಫ್ತಿಗೆ ಜಿಲ್ಲಾ ಹಂತದಲ್ಲೇ ಅವಕಾಶ

**ಸಂದರ್ಭ: ಯಾವುದೇ ಜಿಲ್ಲೆಯ ಯಾವುದೇ ವಸ್ತು ರಫ್ತು ಮಾಡಲು ಬೆಂಗಳೂರಿಗೆ ಬರುವುದನ್ನು ತಪ್ಪಿಸಲು ಅಂಚೆ ಇಲಾಖೆಯು ಪ್ರತಿ ಜಿಲ್ಲೆಯಲ್ಲಿ ಎರಡು-ಮೂರುಡಾಕ್ ಘರ್ ನಿರ್ಯಾತ್ ಕೇಂದ್ರಗಳನ್ನು ತೆರೆದಿದೆ.**

- ಅಂಚೆ ಇಲಾಖೆಯು 200ಕ್ಕೂ ಹೆಚ್ಚು ದೇಶಗಳನ್ನು ಒಳಗೊಂಡ ಅಂತರ ರಾಷ್ಟ್ರೀಯ ಲಾಜಿಸ್ಟಿಕ್ಸ್ ಜಾಲವನ್ನು ನಿರ್ವಹಿಸುತ್ತಿದೆ. ಸಾರ್ವತ್ರಿಕ ಒಕ್ಕೂಟ (ಯುಪಿಯು) ಮತ್ತು ಅಂತರ ರಾಷ್ಟ್ರೀಯ ಅಂಚೆ ಆಡಳಿತವು ಭಾರತೀಯ ಅಂಚೆಗೆ ಬೆಂಬಲ ನೀಡಿವೆ. ಕರ್ನಾಟಕದಲ್ಲಿ, ಅಂಚೆ ವೃತ್ತವು ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ 106 ಡಾಕ್ ಘರ್ ನಿರ್ಯಾತ್ ಕೇಂದ್ರ ಗಳನ್ನು (ಡಿಎನ್ಎಕೆಎಸ್) ಸ್ಥಾಪಿಸಿದೆ. ಇದರಲ್ಲಿ ಆರು ಕೇಂದ್ರಗಳು ಬೆಂಗಳೂರು ನಗರ ವ್ಯಾಪ್ತಿಯಲ್ಲಿವೆ.
- ರಾಜ್ಯದ ಮೂಲೆ ಮೂಲೆಯಿಂದ ರಫ್ತುದಾರರು ಇಂಡಿಯಾ ಅಂಚೆಯ ರಫ್ತು ಸೌಲಭ್ಯ ಮತ್ತು ಅಂತರ ರಾಷ್ಟ್ರೀಯ ಮೇಲ್ ಸೇವೆಗಳನ್ನು ಅನುಕೂಲಕರವಾಗಿ ಬಳಸಿಕೊಳ್ಳಲು ಅನುವು ಮಾಡಿಕೊಡುತ್ತದೆ. ಜಾಗತಿಕ ವ್ಯಾಪ್ತಿಯು, ಪ್ರಮುಖ ಸರ್ಕಾರಿ ವೇದಿಕೆಗಳೊಂದಿಗೆ ತಡೆರಹಿತ
- ಡಿಜಿಟಲ್ ರಫ್ತುದಾರರಿಗೆ ಉದ್ದಿಮೆದಾರರಿಗೆ ಇ-ಕಾಮರ್ಸ್ ಸಂಯೋಜನೆಯೊಂದಿಗೆ ಅದರಲ್ಲಿಯೂ ಸಣ್ಣ ಕುಶಲಕರ್ಮಿಗಳಿಗೆ, ಮಾರಾಟಗಾರರಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಸರಳ ಮತ್ತು ಕಡಿಮೆ ವೆಚ್ಚದಲ್ಲಿ ತೆರೆದಿಟ್ಟಿದೆ ಎಂದು ಮುಖ್ಯ ಪೋಸ್ಟ್ ಮಾಸ್ಟರ್ ಜನರಲ್ ಕೆ. ಪ್ರಕಾಶ್ 'ಪ್ರಜಾವಾಣಿ'ಗೆ ಮಾಹಿತಿ ನೀಡಿದರು.
- ಸಣ್ಣ ಮತ್ತು ಮಧ್ಯಮ ಉದ್ಯಮ ಗಳು, ಗ್ರಾಮೀಣ ಉದ್ಯಮಿಗಳಷ್ಟೇ ಅಲ್ಲದೆ ಮೊದಲ ಬಾರಿಗೆ ರಫ್ತು ಮಾಡುವವರಿಗೂ ಸಹಕಾರಿ ಯಾಗಲಿದೆ. ಆನ್‌ಲೈನ್ ರಫ್ತು ದಸ್ತಾವೇಜು ಮತ್ತು ಸುಂಕ ಘೋಷಣೆ ಗಳಲ್ಲಿ ಸಹಾಯ, ಪ್ಯಾಕೇಜಿಂಗ್, ವರ್ಗೀಕರಣಗಳ ಬಗ್ಗೆ ಮಾರ್ಗದರ್ಶನ, ಡಿಜಿಟಲ್ ಅಂಚೆ ರಫ್ತು ಪ್ರಕ್ರಿಯೆಗೆ ಪ್ರವೇಶ ನೀಡುವುದು. ಸಾಧ್ಯ ಇರುವ ಪ್ರದೇಶಗಳಲ್ಲಿ ರಫ್ತುದಾರರ ಮನೆ ಬಾಗಿಲಿಗೆ ಹೋಗಿ ವಸ್ತುಗಳನ್ನು ಸ್ವೀಕರಿಸುವ ಸೌಲಭ್ಯ ನೀಡಲಾಗಿದೆ ಎಂದು ಸಹಾಯಕ ನಿರ್ದೇಶಕ (ಅಂತರ ರಾಷ್ಟ್ರೀಯ ಅಂಚೆ) ವೆಂಕಟೇಶಯ್ಯ ಎ.ವಿ. ಅವರು ತಿಳಿಸಿದರು.

## ❖ ಎಫ್‌ಟಿಎ: ತಯಾರಿಕೆಗೆ ಉತ್ತೇಜನ

### ಭಾರತ ಮತ್ತು ಇ.ಯು ನಡುವಿನ ಒಪ್ಪಂದದ ಕುರಿತು ಮೂಡಿಸ್ ರೇಟಿಂಗ್ಸ್ ಅಭಿಮತ

ನವದೆಹಲಿ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವು (ಎಫ್‌ಟಿಎ) ಭಾರತಕ್ಕೆ ಹೆಚ್ಚಿನ ವಿದೇಶಿ ಹೂಡಿಕೆ ತರಲು ನೆರವಾಗಲಿದೆ, ಭಾರತದ ತಯಾರಿಕಾ ವಲಯಕ್ಕೆ ಬಲ ನೀಡಲಿದೆ, ಭಾರತದ ಕೆಲವು ವಲಯಗಳ ರಫ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚು ಮಾಡಲಿದೆ ಎಂದು ಜಾಗತಿಕ ರೇಟಿಂಗ್ಸ್ ಸಂಸ್ಥೆ ಮೂಡಿಸ್ ಹೇಳಿದೆ.

ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸಂಬಂಧಿಸಿದ ಮಾತುಕತೆಗಳು ಪೂರ್ಣಗೊಂಡಿವೆ ಎಂದು ಭಾರತ ಮತ್ತು ಐರೋಪ್ಯ ಒಕ್ಕೂಟ ಮಂಗಳವಾರ ಘೋಷಿಸಿವೆ. ಈ ಒಪ್ಪಂದ ಜಾರಿಗೆ ಬಂದ ನಂತರದಲ್ಲಿ ಭಾರತದ ಶೇ 93ರಷ್ಟು ಸರಕುಗಳು ಇ.ಯು ದೇಶಗಳ ಮಾರುಕಟ್ಟೆಯನ್ನು ಸುಂಕರಹಿತವಾಗಿ ಪ್ರವೇಶಿಸಲಿವೆ.

ಈ ಒಪ್ಪಂದವು 200 ಕೋಟಿ ಜನರ ಮಾರುಕಟ್ಟೆಯೊಂದನ್ನು ಸೃಷ್ಟಿಸಲಿದೆ. ಭಾರತವು ತನ್ನ ವ್ಯಾಪಾರ ಸಂಬಂಧವನ್ನು ವೈವಿಧ್ಯಮಯ ಆಗಿಸಲು ನಿರಂತರ ಪ್ರಯತ್ನ ನಡೆಸಿದೆ ಎಂಬುದನ್ನು ಈ ಮಾತುಕತೆ ಪೂರ್ಣಗೊಂಡಿರುವುದು ಹೇಳುತ್ತಿದೆ ಎಂದು ಕೂಡ ಮೂಡಿಸ್ ರೇಟಿಂಗ್ಸ್ ಅಭಿಪ್ರಾಯಪಟ್ಟಿದೆ.

'ಯುರೋಪಿನ ಕಾರು ತಯಾರಿಕಾ ಕಂಪನಿಗಳು ಜಗತ್ತಿನ ಮೂರನೆಯ ಅತಿದೊಡ್ಡ ಕಾರು ಮಾರುಕಟ್ಟೆಗೆ ಹೆಚ್ಚು ಸುಲಭವಾಗಿ ಪ್ರವೇಶ ಪಡೆಯಲಿವೆ. ಇದರಿಂದಾಗಿ ಆ ಕಂಪನಿಗಳಿಗೆ ಇನ್ನಷ್ಟು ಹೆಚ್ಚಿನ ಗುಣಮಟ್ಟದ ಕಾರುಗಳನ್ನು ಭಾರತದ ಮಾರುಕಟ್ಟೆಯಲ್ಲಿ ಬಿಡುಗಡೆ ಮಾಡಲು ಸಾಧ್ಯವಾಗುತ್ತದೆ... ಆದರೆ ಇದರಿಂದ ಭಾರತದ ಕಾರು ತಯಾರಿಕಾ ಕಂಪನಿಗಳಿಗೆ ಹೆಚ್ಚು ಸ್ಪರ್ಧೆ ಎದುರಾಗಲಿದೆ' ಎಂದು ಮೂಡಿಸ್ ಹೇಳಿದೆ.

### ವೈನ್ ಉದ್ಯಮಕ್ಕೆ ರಕ್ಷಣೆ: ಸುಲಾ ವಿನ್‌ಯಾರ್ಡ್ಸ್

ಭಾರತ ಮತ್ತು ಇ.ಯು ನಡುವಿನ ಎಫ್‌ಟಿಎ ದೇಶಿ ವೈನ್ ಉದ್ಯಮದ ರಕ್ಷಣೆಗೆ ಅಗತ್ಯವಿರುವ ಅಂಶಗಳನ್ನು ಹೊಂದಿದೆ ಎಂದು ದೇಶದ ಅತಿದೊಡ್ಡ ವೈನ್ ತಯಾರಿಕಾ ಕಂಪನಿ ಸುಲಾ ವಿನ್‌ಯಾರ್ಡ್ಸ್‌ನ ಪ್ರಕಟಣೆ ಹೇಳಿದೆ.

750 ಮಿ.ಲೀ ವೈನ್ ಬಾಟಲಿಯ ಕನಿಷ್ಠ ಆಮದು ದರವು 2.5 ಯುರೊ ಆಗಿರಬೇಕು ಎಂಬ ಅಂಶವನ್ನು ಒಪ್ಪಂದದಲ್ಲಿ ಸೇರಿಸಲಾಗಿದೆ. ಈ ಮೂಲಕ ದೇಶದ ವೈನ್ ಉದ್ಯಮದ ಪ್ರಮುಖ ಕಳವಳಗಳಿಗೆ ಸ್ಪಂದಿಸುವ ಕೆಲಸವನ್ನು ಒಪ್ಪಂದವು ಮಾಡಿದೆ ಎಂದು ತಿಳಿಸಿದೆ.

ಇ.ಯು ದೇಶಗಳಿಂದ ಆಮದು ಮಾಡಿಕೊಳ್ಳುವ ವೈನ್ ಮೇಲಿನ ಸುಂಕವು ಈಗ ಶೇ 150ರಷ್ಟು ಇರುವುದು ಒಪ್ಪಂದ ಜಾರಿಗೆ ಬಂದ ನಂತರದಲ್ಲಿ ಶೇ 20ಕ್ಕೆ (ದುಬಾರಿ ಬೆಲೆಯ ವೈನ್‌ಗಳಿಗೆ ಅನ್ವಯ) ಇಳಿಯಲಿದೆ. ಸುಂಕ ತಗ್ಗಿಸಬೇಕು ಎಂಬುದು ಇ.ಯು ಒಕ್ಕೂಟದ ಪ್ರಮುಖ ಬೇಡಿಕೆಯಾಗಿತ್ತು.

ಆದರೆ 2.5 ಯೂರೋಗಿಂತ ಕಡಿಮೆ ಬೆಲೆಯ ವೈನ್‌ಗಳಿಗೆ ಸುಂಕ ವಿನಾಯಿತಿ ನೀಡಲು ಭಾರತ ನಿರಾಕರಿಸಿದೆ. ಭಾರತದಲ್ಲಿ ತಯಾರಾದ ವೈನ್‌ಗಳಿಗೆ ಇ.ಯು ದೇಶಗಳಲ್ಲಿ ಸುಂಕ ವಿನಾಯಿತಿ ಸಿಗಲಿದೆ. 'ಇದು ದೇಶದ ಶೇ 90ರಷ್ಟಕ್ಕಿಂತ ಹೆಚ್ಚಿನ ವೈನ್ ಉದ್ಯಮವನ್ನು ರಕ್ಷಿಸುತ್ತದೆ' ಎಂದು ಹೇಳಿದೆ.

'ಕಡಿಮೆ ಬೆಲೆಯ ಉತ್ಪನ್ನಗಳನ್ನು ಭಾರತದ ಮಾರುಕಟ್ಟೆಗೆ ತಂದು ಸುರಿಯುವುದಕ್ಕೆ, ದರವನ್ನು ಉದ್ದೇಶಪೂರ್ವಕವಾಗಿ ಕಡಿಮೆ ನಮೂದಿಸುವುದಕ್ಕೆ ಸಂಬಂಧಿಸಿದಂತೆ ನಾವು ವ್ಯಕ್ತಪಡಿಸಿರುವ ಆತಂಕಗಳಿಗೆ ಸರ್ಕಾರ ಸ್ಪಂದಿಸುತ್ತದೆ ಎಂಬ ಆಸೆ ಇದೆ' ಎಂದು ಭಾರತೀಯ ಮದ್ಯ ಪೇಯ ಕಂಪನಿಯಗಳ ಒಕ್ಕೂಟದ (ಸಿಐಎಬಿಸಿ) ಮಹಾನಿರ್ದೇಶಕ ಅನಂತ ಎಸ್. ಅಯ್ಯರ್ ಹೇಳಿದ್ದಾರೆ.

ಒಪ್ಪಂದದಲ್ಲಿ ಭಾಗಿಯಾಗಿರದ ದೇಶಗಳು, ಇ.ಯು ದೇಶಗಳ ಮೂಲಕ ತಮ್ಮ ಉತ್ಪನ್ನಗಳನ್ನು ಭಾರತಕ್ಕೆ ಕಳುಹಿಸುವುದನ್ನು ತಡೆಯಲು ಕಠಿಣ ನಿಯಮ ಜಾರಿಗೆ ತರಬೇಕು ಎಂದು ಕೂಡ ಒಕ್ಕೂಟ ಹೇಳಿದೆ.

### ಗದಗ ಜಿಲ್ಲೆ ರೋಣ ಬಳಿ ಅರಣ್ಯ ಇಲಾಖೆ ಸಿಬ್ಬಂದಿಯಿಂದ ಪತ್ತೆ

# ಹೈಬ್ರಿಡ್ ಕಾಡು ಬೆಕ್ಕು ಗೋಚರ

ಪ್ರಜಾವಾಣಿ ವಾರ್ತೆ

ಗದಗ: ರೋಣ ಮತ್ತು ಗಜೇಂದ್ರಗಡ ತಾಲ್ಲೂಕು ವ್ಯಾಪ್ತಿಯಲ್ಲಿ ಮಾಂಸಾಹಾರಿ ಪ್ರಾಣಿಗಳ ಸಮೀಕ್ಷೆ ನಡೆಸುವಾಗ ಅರಣ್ಯ ಇಲಾಖೆ ಸಿಬ್ಬಂದಿಗೆ ಹೈಬ್ರಿಡ್ ಕಾಡು ಬೆಕ್ಕು ಕಾಣಿಸಿದೆ. ಕಳೆದ ವರ್ಷ 'ವೂಲ್ಫ್‌ಡಾಗ್' ಕಂಡುಬಂದಿದ್ದವು.

'ರೋಣ– ಇಟಗಿ ಮಾರ್ಗದ ಹುಲ್ಲುಗಾವಲಿನಲ್ಲಿ ಪಕ್ಷಿಯನ್ನು ಹಿಡಿದು ತಿನ್ನುತ್ತಿದ್ದ ಹೈಬ್ರಿಡ್ ಕಾಡು ಬೆಕ್ಕು ಗೋಚರಿಸಿತು. ಕಾಡಂಚಿನ



ಹೈಬ್ರಿಡ್ ಬೆಕ್ಕು

ಗ್ರಾಮಗಳಲ್ಲಿ ಈಚೆಗೆ ಇಂತಹ ಬೆಕ್ಕುಗಳ ಸಂಖ್ಯೆ ಸ್ವಲ್ಪಮಟ್ಟಿಗೆ ಹೆಚ್ಚುತ್ತಿದೆ' ಎಂದು ಉಪ ವಲಯ ಅರಣ್ಯಾಧಿಕಾರಿ (ಡಿಆರ್‌ಎಫ್‌ಒ) ಅನ್ವರ್ ಕೋಲ್ಹಾರ ತಿಳಿಸಿದರು.

'ಗಜೇಂದ್ರಗಡ, ರೋಣ ಭಾಗದಲ್ಲಿ ತೋಳಗಳ ಸಂಖ್ಯೆ ಜಾಸ್ತಿ ಇದೆ. ಬೀದಿನಾಯಿಗಳು ಕಾಡಿಗೆ ಲಗ್ಗೆ ಇಡುತ್ತಿರುವ ಕಾರಣ ಕ್ರಾಸ್ ಬ್ರೀಡ್ ಆಗುತ್ತಿವೆ. ಅದೇ ರೀತಿ, ಬೆಕ್ಕುಗಳಲ್ಲೂ ಕ್ರಾಸ್‌ಬ್ರೀಡ್ ಆಗುತ್ತಿದೆ' ಎಂದು ತಿಳಿಸಿದರು.

'ಹೈಬ್ರಿಡ್ ಕಾಡು ಬೆಕ್ಕುಗಳ ಗುಣಲಕ್ಷಣವು ನಾಡು, ಕಾಡು ಬೆಕ್ಕುಗಳಿಗಿಂತ ಭಿನ್ನವಾಗಿರುತ್ತದೆ. ಮುಖದ ಕೆಳಭಾಗ ಮತ್ತು ಕಾಲಿನಲ್ಲಿ ಬಿಳಿ ಬಣ್ಣ ಇರುತ್ತದೆ. ಮೈಮೇಲಿನ ಪಟ್ಟೆಗಳೂ ಸ್ವಲ್ಪ ಭಿನ್ನವಾಗಿರುತ್ತದೆ' ಎಂದು ರೋಣ ತಾಲ್ಲೂಕು ಜಕ್ಕಲಿ ಗ್ರಾಮದ ಜೀವವೈವಿಧ್ಯ ಸಂಶೋಧಕ ಸಂಗಮೇಶ ಕಡಗದ ತಿಳಿಸಿದರು.

'ನಾಡಿನ ಬೆಕ್ಕು, ನಾಯಿಗಳಿಂದ ಕಾಡು ಬೆಕ್ಕು, ತೋಳ ಮತ್ತು ನರಿಗಳ ವಂಶವಾಹಿಗೆ ಧಕ್ಕೆಯಾಗುತ್ತದೆ. ಇದು ಹೀಗೆ ಮುಂದುವರಿದರೆ ಮೂಲವೇ ಮರೆಯಾಗುವ ಅಪಾಯ ಹೆಚ್ಚಿದೆ' ಎಂದು ಅಭಿಪ್ರಾಯಪಟ್ಟರು.

## ❖ ಜಾಗತಿಕ ವ್ಯಾಪಾರದಲ್ಲಿ ಭಾರತದ ಶಕೆ'

**ಸಂದರ್ಭ: ಭಾರತ ಐರೋಪ್ಯ ಒಕ್ಕೂಟದೊಟ್ಟಿಗಿನ ಮುಕ್ತ ವ್ಯಾಪಾರ ಒಪ್ಪಂದ ಅಂತಿಮಗೊಂಡಿದೆ. ಈ ಮೂಲಕ ಭಾರತವು ಜಾಗತಿಕ ವ್ಯಾಪಾರದ ವಿಷಯದಲ್ಲಿ ಮೇಲ್ಮಟ್ಟಕ್ಕೆ ಏರಿದಂತಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಆಡಳಿತದ ವ್ಯಾಪಾರ ಪ್ರತಿನಿಧಿಜೇಮಿಸನ್ ಗ್ರೀರ್ ಹೇಳಿದರು.**

- ವ್ಯಾಪಾರ ಒಪ್ಪಂದ ಕುರಿತ ಪ್ರಶ್ನೆಗೆ ಪ್ರತಿಕ್ರಿಯೆ ನೀಡಿದ ಗ್ರೀರ್ ಅವರು, 'ಅದನ್ನು ಐತಿಹಾಸಿಕ ಒಪ್ಪಂದ ಎಂದು ವರ್ಣಿಸಲಾಗಿದೆ. ಒಪ್ಪಂದದ ಕೆಲವು ಅಂಶಗಳನ್ನು ಗಮನಿಸಿದೆ. ಇದರಿಂದ ಜಾಗತಿಕ ವ್ಯಾಪಾರದಲ್ಲಿ ಭಾರತವು ಹೊಸ ಶಕೆ ಆರಂಭಿಸಲಿದೆ' ಎಂದು ತಿಳಿಸಿದರು.
- 'ಒಪ್ಪಂದದ ಬಳಿಕ ಭಾರತವು ಹೆಚ್ಚುವರಿ ವಲಸೆ ಹಕ್ಕನ್ನು ಪಡೆಯುವ ಸಾಧ್ಯತೆ ಉದ್ಯೋಗಿಗಳ ಸಂಚಾರಕ್ಕೂ ಅವಕಾಶ ಮಾಡಿಕೊಡುವ ಬಗ್ಗೆ 22.000 ನಾಯಕರಾದ ಉರ್ಸುಲಾ ಫಾಂಡರ್ ಲೇಯನ್ ಮಾತನಾಡಿದ್ದಾರೆ ಎಂದು ತಿಳಿದುಬಂದಿದೆ' ಎಂದರು. ಇದೆ. ಭಾರತೀಯ
- 'ಅಮೆರಿಕವು ಜಾಗತೀಕರಣದ ಸಮಸ್ಯೆಗಳ ಇತ್ಯರ್ಥಕ್ಕೆ ಯತ್ನಿಸುತ್ತಿ-ರುವಾಗಲೇ, ಐರೋಪ್ಯ ಒಕ್ಕೂಟವು ಜಾಗತಿಕ ವ್ಯಾಪಾರಕ್ಕೆ ಇನ್ನಷ್ಟು ವೇಗ ನೀಡುತ್ತಿರುವಂತೆ ಕಾಣುತ್ತಿದೆ' ಎಂದು ಹೇಳಿದರು.

# ಟಿ20 ರ್‍ಯಾಂಕಿಂಗ್: ಏಳನೇ ಸ್ಥಾನಕ್ಕೆ ಸೂರ್ಯ


ದುಬೈ (ಪಿಟಿಐ): ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಅವರು ಬುಧವಾರ ಪ್ರಕಟವಾದ ಐಸಿಸಿ ಪುರುಷರ ಟಿ20 ರ್‍ಯಾಂಕಿಂಗ್ ಪಟ್ಟಿಯ ಬ್ಯಾಟರ್‌ಗಳ ವಿಭಾಗದಲ್ಲಿ ಏಳನೇ ಸ್ಥಾನಕ್ಕೆ ಏರಿದ್ದಾರೆ. ನ್ಯೂಜಿಲೆಂಡ್ ವಿರುದ್ಧ ಹಾಲಿ ಟಿ20 ಸರಣಿಯಲ್ಲಿ ತೋರಿದ ಉತ್ತಮ ಪ್ರದರ್ಶನದಿಂದ ಅವರು ಐದು ಸ್ಥಾನಗಳಷ್ಟು ಬಡ್ತಿ ಪಡೆದಿದ್ದಾರೆ.

ವಿಶ್ವದ ಮಾಜಿ ಅಗ್ರಮಾನ್ಯ ಆಟಗಾರನಾಗಿರುವ ಸೂರ್ಯ ಈ ಸರಣಿಯಲ್ಲಿ 32, ಅಜೇಯ 82 ಮತ್ತು ಅಜೇಯ 57 ರನ್ ಗಳಿಸಿದ್ದರು. ಅಭಿಷೇಕ್ ಶರ್ಮಾ ಮೊದಲ ಸ್ಥಾನ ಕಾಪಾಡಿಕೊಂಡಿದ್ದು, ತಿಲಕ್ ವರ್ಮಾ ಮೂರನೇ ಸ್ಥಾನದಲ್ಲಿ ಮುಂದುವರಿದಿದ್ದಾರೆ.

ಅಫ್ಘಾನಿಸ್ತಾನದ ಬ್ಯಾಟರ್ ಇಬ್ರಾಹಿಂ ಜದ್ರಾನ್ ಎರಡು ಸ್ಥಾನ ಬಡ್ತಿ ಪಡೆದು 13ನೇ ಸ್ಥಾನದಲ್ಲಿದ್ದಾರೆ. ರಹಮಾನುಲ್ಲಾ ಗುರ್ಬಾಜ್ ಅವರು ಮೂರು ಸ್ಥಾನ ಮೇಲೇರಿ 15ನೇ ಸ್ಥಾನಕ್ಕೇರಿದ್ದಾರೆ. ಈ ಇಬ್ಬರೂ ಆಟಗಾರರು ವೆಸ್ಟ್ ಇಂಡೀಸ್ ವಿರುದ್ಧ ಸರಣಿಯಲ್ಲಿ ಉತ್ತಮವಾಗಿ ಆಡಿದ್ದರು.

ಟಿ20 ಬೌಲರ್‌ಗಳ ರ್‍ಯಾಂಕಿಂಗ್‌ನಲ್ಲಿ ಅಫ್ಘಾನಿಸ್ತಾನದ ಸ್ಪಿನ್ನರ್ ಮುಜಿಬುರ್ ರಹಮಾನ್ ಅವರು 9ನೇ ಸ್ಥಾನಕ್ಕೇರಿದ್ದಾರೆ. ವೆಸ್ಟ್ ಇಂಡೀಸ್ ವಿರುದ್ಧ ಸರಣಿಯ ಎರಡನೇ ಪಂದ್ಯದಲ್ಲಿ ಅವರು 21 ರನ್ನಿಗೆ 4 ವಿಕೆಟ್ ಕಬಳಿಸಿದ್ದು, ಐದು ಸ್ಥಾನ ಮೇಲೇರಲು ನೆರವಾಗಿದೆ. ಜಸ್‌ಪ್ರೀತ್ ಬೂಮ್ರಾ (4 ಸ್ಥಾನ ಮೇಲೇರಿ 13ನೇ ಸ್ಥಾನ) ಮತ್ತು ರವಿ ಬಿಷ್ಣೋಯಿ (13 ಸ್ಥಾನ ಬಡ್ತಿ ಪಡೆದು 19ನೇ ಸ್ಥಾನ) ಕೂಡ ಪ್ರಗತಿ ಕಂಡಿದ್ದಾರೆ.

**ಬ್ರೂಕ್, ರೂಟ್ ಪ್ರಗತಿ:** ಏಕದಿನ ಕ್ರಮಾಂಕಪಟ್ಟಿಯಲ್ಲಿ ಇಂಗ್ಲೆಂಡ್‌ನ ಹ್ಯಾರಿ ಬ್ರೂಕ್ ಮತ್ತು ಜೋ ರೂಟ್ ಅವರು ಶ್ರೀಲಂಕಾ ವಿರುದ್ಧ ತೋರಿದ ಉತ್ತಮ ಆಟದಿಂದಾಗಿ ಪ್ರಗತಿ ಸಾಧಿಸಿದ್ದಾರೆ. ಬ್ರೂಕ್ 3 ಪಂದ್ಯಗಳಿಂದ 247 ರನ್ ಗಳಿಸಿದ್ದು, 17 ಸ್ಥಾನಗಳಷ್ಟು ಬಡ್ತಿ ಪಡೆದು 11ನೇ ಸ್ಥಾನಕ್ಕೇರಿದ್ದಾರೆ. ಅನುಭವಿ ರೂಟ್ 23 ರಿಂದ 17ನೇ ಸ್ಥಾನಕ್ಕೆ ಜಿಗಿದಿದ್ದಾರೆ.



# ಅನುದಾನಕ್ಕಿಂತ ದ್ವಿಗುಣ ಯೋಜನೆ 'ಸ್ಮಾರ್ಟ್' ವೈಫಲ್ಯ: ಸಿಎಜಿ ವರದಿ

ಪ್ರಜಾವಾಣಿ ವಾರ್ತೆ



**ಬೆಂಗಳೂರು:** ಮೀಸಲಿಟ್ಟ ಅನುದಾನಕ್ಕಿಂತ ಸರಿಸುಮಾರು ದ್ವಿಗುಣ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಂಡ ಕಾರಣ ಕರ್ನಾಟಕದಲ್ಲಿ ಅನುಷ್ಠಾನಗೊಳಿಸ ಲಾದ ಸ್ಮಾರ್ಟ್ ಸಿಟಿ ಯೋಜನೆಗಳು ನಿರೀಕ್ಷಿತ ಗುರಿ ಸಾಧಿಸಲು ವಿಫಲವಾದವು ಎಂದು ಮಹಾಲೇಖಪಾಲರ ವರದಿ ಹೇಳಿದೆ.

ಬೆಂಗಳೂರು, ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ- ಧಾರವಾಡ, ಮಂಗಳೂರು, ಶಿವಮೊಗ್ಗ ಮತ್ತು ತುಮಕೂರು ನಗರ ಗಳಲ್ಲಿ 2015-16ರಿಂದ ಸ್ಮಾರ್ಟ್‌ಸಿಟಿ ಯೋಜನೆಗಾಗಿ ₹817 ಕೋಟಿ ಅನುದಾನ ಮೀಸಲಿಡಲಾಗಿತ್ತು. ಆದರೆ, ₹1,462 ಕೋಟಿ ಮೊತ್ತದ ಯೋಜನೆಗಳನ್ನು ಕೈಗೆತ್ತಿಕೊಳ್ಳಲಾಗಿತ್ತು. ಮಾದರಿಯಾಗಿ ಆಯ್ಕೆ ಮಾಡಲಾದ ನಾಲ್ಕು ವಿಶೇಷ ಘಟಕಗಳಿಗೆ ₹200 ಕೋಟಿ ನಿಗದಿ ಮಾಡಿದ್ದರೂ ನೈಜ ಬಂಡವಾಳ ₹10 ಲಕ್ಷ ಇತ್ತು. ಇತರೆ ಕಾಮಗಾರಿಗಳೂ ಸರ್ಕಾರದ ಮೇಲೆ ಅವಲಂಬಿತವಾದವು. ಹಾಗಾಗಿ 645 ಯೋಜನೆಗಳಲ್ಲಿ 45 ಯೋಜನೆಗಳಷ್ಟೇ ನಿಗದಿತ ಅವಧಿಯ ಒಳಗೆ ಪೂರ್ಣಗೊಂಡಿವೆ. ₹186.79 ಕೋಟಿ ಮೊತ್ತದ ಯೋಜನೆಗಳು ಗುರಿಗಳೊಂದಿಗೆ ಹೊಂದಿಕೆಯಾಗಿಲ್ಲ ಎಂದು ವರದಿಯಲ್ಲಿ ಉಲ್ಲೇಖಿಸಲಾಗಿದೆ.

ಸ್ಮಾರ್ಟ್ ನಗರಗಳು ಕೈಗೊಂಡಿರುವ ಯೋಜನೆಗಳು ದೀರ್ಘಕಾಲ ಉಳಿಯಲು ಸರ್ಕಾರದ ಅನುದಾನ ಹೊರತಾದ ಸಂಪನ್ಮೂಲಗಳನ್ನು ಬಳಕೆ ಮಾಡಬೇಕು. ಪೂರ್ಣಾವಧಿಯ ಸಿಇಒಗಳನ್ನು ನೇಮಕ ಮಾಡಬೇಕು. ಟೆಂಡರ್ ಪ್ರಕ್ರಿಯೆ ವಿಳಂಬ ತಪ್ಪಿಸಬೇಕು. ತಂತ್ರಜ್ಞಾನ ಬಳಕೆಯಲ್ಲಿ ಎಚ್ಚರ ವಹಿಸಬೇಕು, ತಜ್ಞರ ಶಿಫಾರಸುಗಳನ್ನು ಪಾಲಿಸಬೇಕು. ಅಗತ್ಯ ಕಾಮಗಾರಿಗಳ ಮೇಲ್ವಿಚಾರಣೆಯಲ್ಲಿ ಸ್ಥಳೀಯ ಸಂಸ್ಥೆಗಳ ಪ್ರಾತಿನಿಧ್ಯ ಇರಬೇಕು. ಗುಣಮಟ್ಟ ಪರಿಶೀಲನೆಗೆ ಮೇಲ್ವಿಚಾರಣಾ ಸಲಹೆಗಾರರನ್ನು ರಾಜ್ಯ ಸರ್ಕಾರ ನೇಮಿಸಬೇಕು. ಸ್ಥಳೀಯ ಅಗತ್ಯಕ್ಕೆ ತಕ್ಕಂತೆ ಕೆಲ ಮಾರ್ಪಾಡು ಮಾಡಲು ಅವಕಾಶ ನೀಡಬೇಕು ಎಂದು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

Publication Date
30/01/2026

Presented by ಪ್ರಜಾವಾಣಿ

Dr. Rajk

# ಅಂತಿಮ ಹಂತಕ್ಕೆ ವೇಮುಲ ಮಸೂದೆ

ಬೆಂಗಳೂರು: ವಿಶ್ವವಿದ್ಯಾಲಯಗಳು ಹಾಗೂ ಕಾಲೇಜು ಕ್ಯಾಂಪಸ್‌ನಲ್ಲಿ ಜಾತಿ ಆಧಾರಿತ ಭೇದ ತಡೆಯಲು ರಾಜ್ಯ ಸರ್ಕಾರ ಸಿದ್ಧಪಡಿಸುತ್ತಿರುವ 'ರೋಹಿತ್ ವೇಮುಲ ಮಸೂದೆ' ಅಂತಿಮ ಹಂತದಲ್ಲಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಜಾರಿಗೊಳಿಸಿದ್ದ 'ಸಮಾನತೆ' ಉತ್ತೇಜಿಸುವ ಹೊಸ ನಿಯಮಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದೆ. ಈ ನಿಯಮ ಸಾಮಾನ್ಯ ವರ್ಗಗಳ ವಿರುದ್ಧ ಭೇದವನ್ನು ಉತ್ತೇಜಿಸುತ್ತವೆ ಎಂದು ಆರೋಪಿಸಿ, ಕೆಲವರು ಸುಪ್ರೀಂಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಜಾತಿ ಆಧಾರಿತ ಭೇದ ವ್ಯಾಖ್ಯಾನಿಸುವ ನಿಯಮಕ್ಕೂ ಆಕ್ಷೇಪ ವ್ಯಕ್ತವಾಗಿತ್ತು. ಜಾತಿ ಆಧಾರಿತ ಭೇದ ತಡೆಯುವ ಜತೆಗೆ, ಸಾಮಾನ್ಯ ವರ್ಗದ ವಿದ್ಯಾರ್ಥಿಗಳ ಹಿತಾಸಕ್ತಿ ರಕ್ಷಿಸುವುದೂ ರಾಜ್ಯ ಸರ್ಕಾರದ ಆದ್ಯತೆ ಎಂದರು.

ಉನ್ನತ ಶಿಕ್ಷಣ ಇಲಾಖೆಯ ಅಡಿಯಲ್ಲಿರುವ ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಪರಿಶಿಷ್ಟ ಜಾತಿ (ಎಸ್‌ಸಿ), ಪರಿಶಿಷ್ಟ ವರ್ಗ (ಎಸ್‌ಟಿ) ಮತ್ತು ಇತರ ಹಿಂದುಳಿದ ವರ್ಗಗಳು (ಒಬಿಸಿ) ಮತ್ತು ಧಾರ್ಮಿಕ ಅಲ್ಪಸಂಖ್ಯಾತರಿಗೆ ಸಮಾನ ಅವಕಾಶ ಮತ್ತು ಶಿಕ್ಷಣ ಹಕ್ಕು ಕಲ್ಪಿಸಲು ರಾಜ್ಯ ಸರ್ಕಾರ, 'ರೋಹಿತ್ ವೇಮುಲ ಕಾಯ್ದೆ' ರೂಪಿಸಲು ಮುಂದಾಗಿತ್ತು. ಮಸೂದೆಯನ್ನು 2025ರ ಡಿಸೆಂಬರ್‌ನಲ್ಲಿ ಬೆಳಗಾವಿ ಅಧಿವೇಶನದಲ್ಲಿ ಮಂಡಿಸಲು ಸಿದ್ಧತೆ ನಡೆಸಿತ್ತು. ಆದರೆ, ತಜ್ಞರ ಅಭಿಪ್ರಾಯಗಳನ್ನು ಪರಿಗಣಿಸಿ ಕೆಲ ಬದಲಾವಣೆಗಳನ್ನು ಮಾಡಲಾಗಿದೆ.

Publication Date
30/01/2026

Presented by ಪ್ರಜಾವಾಣಿ

## ಆರ್ಥಿಕ ಸಮೀಕ್ಷಾ ವರದಿ: ಅನಿಶ್ಚಿತತೆಗಳ ನಡುವೆಯೇ ಸ್ಥಿರ ಬೆಳವಣಿಗೆಯ ವಿಶ್ವಾಸ

# ಮುಂದಿನ ವರ್ಷವೂ ವೇಗದ ಬೆಳವಣಿಗೆ

ನವದೆಹಲಿ (ಪಿಟಿಐ): ಏಪ್ರಿಲ್‌ನಿಂದ ಆರಂಭವಾಗಲಿರುವ ಹೊಸ ಆರ್ಥಿಕ ವರ್ಷದಲ್ಲಿ ಭಾರತದ ಅರ್ಥ ವ್ಯವಸ್ಥೆಯ ಬೆಳವಣಿಗೆ ದರವು ಶೇ 6.8ರಿಂದ ಶೇ 7.2ರ ಮಟ್ಟದಲ್ಲಿ ಇರಲಿದೆ ಎಂದು ಆರ್ಥಿಕ ಸಮೀಕ್ಷೆ ವರದಿ 2025–26 ಅಂದಾಜು ಮಾಡಿದೆ.

ವರದಿಯನ್ನು ಸಂಸತ್ತಿನಲ್ಲಿ ಗುರುವಾರ ಮಂಡಿಸಲಾಗಿದೆ. ಜಾಗತಿಕ ಮಟ್ಟದಲ್ಲಿ ವ್ಯಾಪಾರ ವಹಿವಾಟುಗಳಿಗೆ ಹಲವು ಅಡ್ಡಿಗಳು ಎದುರಾಗಿದ್ದರೂ ಭಾರತವು ವಿಶ್ವದಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುವ ಪ್ರಮುಖ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಯನ್ನು ಉಳಿಸಿಕೊಳ್ಳಲಿದೆ ಎಂದು ವರದಿ ಹೇಳಿದೆ.

‘ಈಚಿನ ವರ್ಷಗಳಲ್ಲಿ ಜಾರಿಗೆ ತಂದ ಸುಧಾರಣೆಗಳ ಒಟ್ಟು ಪರಿಣಾಮವಾಗಿ ಮಧ್ಯಮಾವಧಿಯಲ್ಲಿ ಅರ್ಥ ವ್ಯವಸ್ಥೆಯ ಬೆಳವಣಿಗೆ ಸಾಧ್ಯತೆ ಶೇ 7ರ ಸನಿಹಕ್ಕೆ ಬಂದಿದೆ’ ಎಂದು ವರದಿಯು ವಿವರಿಸಿದೆ. ‘ಹೀಗಾಗಿ ಜಾಗತಿಕ ಮಟ್ಟದಲ್ಲಿ ಅನಿಶ್ಚಿತತೆಗಳು ಮನೆಮಾಡಿದ್ದರೂ, ಆರ್ಥಿಕ ಬೆಳವಣಿಗೆಯು ಸ್ಥಿರವಾಗಿ ಇರುವ ಅಂದಾಜು ಮಾಡಲಾಗಿದೆ’ ಎಂದು ಹೇಳಲಾಗಿದೆ.




ಅಮೆರಿಕ–ಭಾರತ ನಡುವಿನ ವ್ಯಾಪಾರ ಬಿಕ್ಕಟ್ಟು ಶಮನ ಆಗಿಲ್ಲದಿದ್ದರೂ ಜಿಡಿಪಿ ಬೆಳವಣಿಗೆ ವಿಚಾರದಲ್ಲಿ ಆಶಾದಾಯಕ ಚಿತ್ರಣವೊಂದನ್ನು ವರದಿಯು ನೀಡಿದೆ. ಭಾರತದ ಸರಕುಗಳ ಮೇಲೆ ಅಮೆರಿಕವು ಶೇ 50ರಷ್ಟು ಸುಂಕ ವಿಧಿಸಿದೆ.

ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವು ವಿವಿಧ ಸುಧಾರಣಾ ಕ್ರಮಗಳ ಮೂಲಕ ಆರ್ಥಿಕತೆಗೆ ಚುರುಕು ನೀಡಲು ಮುಂದಾಗಿದೆ. ಆದಾಯ ತೆರಿಗೆ ಮಿತಿಯನ್ನು ಹೆಚ್ಚಿಸಿದೆ, ಜಿಎಸ್‌ಟಿ ದರ ಇಳಿಕೆ ಮಾಡಿದೆ, ಐರೋಪ್ಯ ಒಕ್ಕೂಟದ ಜೊತೆ ಮಹತ್ವದ ವ್ಯಾಪಾರ ಒಪ್ಪಂದ ಪೂರ್ಣಗೊಳಿಸಿದೆ.

### ಸ್ವದೇಶಿ ಮಂತ್ರ ಜಪ

ಅಭಿವೃದ್ಧಿ ಹೊಂದಿದ ದೇಶಗಳು ತಂತ್ರಜ್ಞಾನನ್ನು ನಿರಾಕರಿಸುತ್ತಿರುವ, ತಮ್ಮ ದೇಶದಿಂದ ಆಗುವ ರಫ್ತಿನ ಮೇಲೆ ನಿಯಂತ್ರಣ ವಿಧಿಸುತ್ತಿರುವ ಸಂದರ್ಭದಲ್ಲಿ ‘ಸ್ವದೇಶಿ ತತ್ತ್ವ’ವು ಅಗತ್ಯ ಎಂದು ಸಮೀಕ್ಷಾ ವರದಿ ಪ್ರತಿಪಾದಿಸಿದೆ. ಎಲ್ಲ ಆಮದುಗಳಿಗೆ ಪರ್ಯಾಯ ಸ್ವದೇಶಿ ಉತ್ಪನ್ನ ಕಂಡುಕೊಳ್ಳಲು ಸಾಧ್ಯವಿಲ್ಲ, ಹಾಗೆ ಮಾಡುವ ಅಗತ್ಯವೂ ಇಲ್ಲ. ಆದರೆ, ಜಾಗತಿಕ ಮಟ್ಟದ ವ್ಯಾಪಾರದಲ್ಲಿನ ಸಮಸ್ಯೆಗಳನ್ನು ಎದುರಿಸಲು ಸ್ವದೇಶಿ ಮಂತ್ರವು ಅನಿವಾರ್ಯ ಎಂದು ವರದಿ ಹೇಳಿದೆ.

### ರೂಪಾಯಿಯಿಂದ ‘ಸರಿದೂಗಿಸುವ’ ಕೆಲಸ

ರೂಪಾಯಿಯ ಮೌಲ್ಯವು ಭಾರತದ ಅರ್ಥ ವ್ಯವಸ್ಥೆಯ ಮೂಲಭೂತ ಅಂಶಗಳು ಅತ್ಯುತ್ತಮವಾಗಿರುವುದನ್ನು ಪ್ರತಿಫಲಿಸುತ್ತಿಲ್ಲ. ಅಪಮೌಲ್ಯಗೊಂಡಿರುವ ಕರೆನ್ಸಿಯು ಅಮೆರಿಕದ ಸುಂಕ ಏರಿಕೆಯ ಪರಿಣಾಮವನ್ನು ಒಂದು ಹಂತದವರೆಗೆ ಸರಿದೂಗಿಸುವ ಕೆಲಸ ಮಾಡುತ್ತಿದೆ ಎಂದು ಸಮೀಕ್ಷೆಯ ವರದಿಯಲ್ಲಿ ವಿವರಿಸಲಾಗಿದೆ.



ಅಮೆರಿಕವು ಭಾರತದ ಮೇಲೆ ವಿಧಿಸಿರುವ ಭಾರಿ ಪ್ರಮಾಣದ ಸುಂಕವು ಜಾರಿಯಲ್ಲಿ ಇದ್ದರೂ, ಮುಂದಿನ ಆರ್ಥಿಕ ವರ್ಷದಲ್ಲಿ ಭಾರತದ ಬೆಳವಣಿಗೆ ದರವು ಶೇ 6.2ರಷ್ಟು ಇರಲಿದೆ ಎಂದು ಅಂತರರಾಷ್ಟ್ರೀಯ ಹಣಕಾಸು ನಿಧಿ (ಐಎಂಎಫ್) ಅಂದಾಜು ಮಾಡಿದೆ.

ಅಮೆರಿಕದ ಜೊತೆ ವ್ಯಾಪಾರ ಒಪ್ಪಂದ ಸಂಬಂಧವಾಗಿ ನಡೆಯುತ್ತಿರುವ ಮಾತುಕತೆಯು ಈ ವರ್ಷದಲ್ಲಿ ಪೂರ್ಣಗೊಳ್ಳುವ ನಿರೀಕ್ಷೆ ಇದೆ ಎಂದು ಕೇಂದ್ರದ ಮುಖ್ಯ ಆರ್ಥಿಕ ಸಲಹೆಗಾರ ವಿ. ಅನಂತ ನಾಗೇಶ್ವರನ್ ಅವರು ಸಿದ್ಧಪಡಿಸಿರುವ ಈ ವರದಿಯು ಹೇಳಿದೆ.

Publication Date
30/01/2026

Presented by ಪ್ರಜಾವಾಣಿ

## ಆರ್ಥಿಕ, ತಾಂತ್ರಿಕ ಸಾಮರ್ಥ್ಯ ಪರಿಗಣಿಸದೆ ಕಾಮಗಾರಿಯ ಹೊಣೆ: ಸಿಎಜಿ

# ‘ಎತ್ತಿನಹೊಳೆ: ಅನರ್ಹರಿಗೆ ಗುತ್ತಿಗೆ’

ಪ್ರಜಾವಾಣಿ ವಾರ್ತೆ

**ಬೆಂಗಳೂರು:** ಆರ್ಥಿಕ ಮತ್ತು ತಾಂತ್ರಿಕ ಸಾಮರ್ಥ್ಯ ಇಲ್ಲದ ಏಳು ಗುತ್ತಿಗೆದಾರರಿಗೆ ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಶೇ 67ರಷ್ಟು ಕಾಮಗಾರಿಗಳನ್ನು ನೀಡಿದ್ದರಿಂದಲೇ ಅನುಷ್ಠಾನ ವಿಳಂಬವಾಗಿದೆ ಎಂದು ಮಹಾಲೇಖಪಾಲರ ವರದಿ ಹೇಳಿದೆ.

ವಿಧಾನಸಭೆಯಲ್ಲಿ ಗುರುವಾರ ಮಂಡಿಸಲಾದ ‘ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ ಅನುಷ್ಠಾನದ ಮೇಲಿನ ಕಾರ್ಯ ನಿರ್ವಹಣಾ ಲೆಕ್ಕಪರಿಶೋಧನೆ’ ವರದಿಯಲ್ಲಿ ಈ ಆಕ್ಷೇಪ ಎತ್ತಲಾಗಿದೆ.

₹14,805 ಕೋಟಿ ಮೊತ್ತದ 18 ಕಾಮಗಾರಿಗಳನ್ನು ಏಳು ಕಂಪನಿಗಳಿಗೆ, ಒಂದೇ ಕಂಪನಿಗೆ ₹5,216 ಕೋಟಿ ಮೊತ್ತದ 11 ಕಾಮಗಾರಿಗಳ ಗುತ್ತಿಗೆಯನ್ನು ನಿಯಮ ಉಲ್ಲಂಘಿಸಿ ನೀಡಲಾಗಿದೆ ಎಂದು ಸಿಎಜಿ ತನ್ನ ವರದಿಯಲ್ಲಿ ಉಲ್ಲೇಖಿಸಿದೆ.

**ಯಾರಿಗೆಲ್ಲಾ ಗುತ್ತಿಗೆ...**

| ಗುತ್ತಿಗೆದಾರ ಕಂಪನಿ | ಕಾಮಗಾರಿಗಳ ಸಂಖ್ಯೆ | ಮೊತ್ತ (ಕೋಟಿಗಳಲ್ಲಿ) |
|---|---|---|
| ಡಿ.ವೈ.ಉಪ್ಪಾರ್ ಅಂಡ್ ಸನ್ಸ್ | 2 | ₹1,026.71 |
| ಜಿ.ಶಂಕರ್ | 7 | ₹2,349.26 |
| ಮೇಘಾ ಎಂಜಿನಿಯರಿಂಗ್ ಇನ್‌ಫ್ರಾಸ್ಟ್ರಕ್ಚರ್ ಲಿ. | 3 | ₹3,004 |
| ಶಂಕರ್ ನಾರಾಯಣ್ ಕನ್‌ಸ್ಟ್ರಕ್ಷನ್ ಲಿಮಿಟೆಡ್ | 11 | ₹5,216 |
| ಜಿವಿಪಿಆರ್ ಎಂಜಿನಿಯರ್ಸ್ ಲಿಮಿಟೆಡ್ | 2 | ₹1,036 |
| ಪಿಎಲ್‌ಆರ್ ಪ್ರಾಜೆಕ್ಟ್ಸ್ | 2 | ₹1,169 |
| ಬಿಎಸ್‌ಆರ್‌ಐಐಎಲ್ | 2 | ₹1,004 |

ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 16, ಜೆಡಿಎಸ್–ಕಾಂಗ್ರೆಸ್ ಮೈತ್ರಿ ಸರ್ಕಾರದಲ್ಲಿ 9 ಮತ್ತು ಹಿಂದಿನ ಬಿಜೆಪಿ ಸರ್ಕಾರದಲ್ಲಿ 4 ಕಾಮಗಾರಿಗಳ ಗುತ್ತಿಗೆ ನೀಡಲಾಗಿದೆ.

ಪ್ರಮಾಣಿತ ಟೆಂಡರ್ ದಾಖಲೆಗಳನ್ನು ಅಳವಡಿಸಿಕೊಳ್ಳದೆ ಕಾಮಗಾರಿಗಳ ಗುತ್ತಿಗೆಯನ್ನು ತರಾತುರಿಯಲ್ಲಿ ನೀಡಲಾಗಿದೆ. ಗುತ್ತಿಗೆ ನೀಡುವಾಗ ಗುತ್ತಿಗೆದಾರರ ಆರ್ಥಿಕ ಸಾಮರ್ಥ್ಯವನ್ನು ಪರಿಗಣಿಸಿಲ್ಲ. ಪರಿಣಾಮವಾಗಿ ಗುತ್ತಿಗೆದಾರರು ಹಣಕಾಸನ್ನು ಹೊಂದಿಸಿಕೊಳ್ಳಲಾಗದೆ ಕಾಮಗಾರಿಗಳನ್ನು ವಿಳಂಬ ಮಾಡಿದ್ದಾರೆ ಎಂದು ಸಿಎಜಿ ಹೇಳಿದೆ.



ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆ

ಡಿಪಿಆರ್ ಸಿದ್ಧಪಡಿಸುವುದರಿಂದ ಆರಂಭವಾಗಿ, ಕಾಮಗಾರಿ ಗುತ್ತಿಗೆ ನೀಡುವಲ್ಲಿಯೂ ಗುತ್ತಿಗೆದಾರರಿಗೆ ತಾಂತ್ರಿಕ ಪರಿಣತಿ ಇಲ್ಲದಿರುವುದನ್ನು ಮತ್ತು ಅನನುಭವವನ್ನು ಕಡೆಗಣಿಸಲಾಗಿದೆ. ಹೀಗಾಗಿ ಯೋಜನೆಯ ವಿನ್ಯಾಸವನ್ನು ಪದೇ ಪದೇ ಬದಲಿಸಬೇಕಾಯಿತು. ಜತೆಗೆ ಕೆಲವು ಕಾಮಗಾರಿಗಳು ಸಂಪೂರ್ಣ ವ್ಯರ್ಥವಾದವು ಎಂದು ವರದಿಯಲ್ಲಿ ವಿವರಿಸಿದೆ.

Publication Date
30/01/2026

Presented by ಪ್ರಜಾವಾಣಿ

# ‘2033ರವರೆಗೆ 2ನೇ ವಿಮಾನ ನಿಲ್ದಾಣ ಇಲ್ಲ’

## ಸಂಸದ ಪಿ.ಸಿ.ಮೋಹನ್ ಪ್ರಶ್ನೆಗೆ ಲೋಕಸಭೆಯಲ್ಲಿ ಕೇಂದ್ರದ ಉತ್ತರ

ಪ್ರಜಾವಾಣಿ ವಾರ್ತೆ

**ನವದೆಹಲಿ:** ‘ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ 25 ವರ್ಷ ತುಂಬುವವರೆಗೆ (2033ರ ವರೆಗೆ) ಬೆಂಗಳೂರಿನಲ್ಲಿ ಹೊಸ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಅವಕಾಶ ಇಲ್ಲ’ ಎಂದು ನಾಗರಿಕ ವಿಮಾನಯಾನ ಖಾತೆ ರಾಜ್ಯ ಸಚಿವ ಮುರಳೀಧರ ಮೊಹೊಲ್ ಸ್ಪಷ್ಟಪಡಿಸಿದರು.

ಲೋಕಸಭೆಯಲ್ಲಿ ಗುರುವಾರ ಪ್ರಶ್ನೋತ್ತರ ಅವಧಿಯಲ್ಲಿ ಬೆಂಗಳೂರು ಕೇಂದ್ರ ಸಂಸದ ಪಿ.ಸಿ.ಮೋಹನ್ ಕೇಳಿದ ಪ್ರಶ್ನೆಗೆ ಉತ್ತರ ನೀಡಿದ ಅವರು, ‘ಕೆಂಪೇಗೌಡ ವಿಮಾನ ನಿಲ್ದಾಣದ 150 ಕಿ.ಮೀ. ವೈಮಾನಿಕ ವ್ಯಾಪ್ತಿಯಲ್ಲಿ ಮೈಸೂರು ಹಾಗೂ ಹಾಸನ ವಿಮಾನ ನಿಲ್ದಾಣ ಹೊರತುಪಡಿಸಿ ಬೇರೆ



ವಿಮಾನ ನಿಲ್ದಾಣಗಳ ನಿರ್ಮಾಣಕ್ಕೆ ಅನುಮತಿ ಇಲ್ಲ ಎಂದು ಈ ಹಿಂದೆಯೇ ಒಪ್ಪಂದ ಮಾಡಿಕೊಳ್ಳಲಾಗಿದೆ’ ಎಂದರು.

‘ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣಗಳ ನೀತಿ 2008ರ ಪ್ರಕಾರ, ಅಸ್ತಿತ್ವದಲ್ಲಿರುವ ನಾಗರಿಕ ವಿಮಾನ ನಿಲ್ದಾಣದಿಂದ 150 ಕಿಲೋಮೀಟರ್‌ಗಳ ವೈಮಾನಿಕ ಅಂತರದೊಳಗೆ ಸಾಮಾನ್ಯವಾಗಿ ಗ್ರೀನ್‌ಫೀಲ್ಡ್ ವಿಮಾನ ನಿಲ್ದಾಣದ ಅಭಿವೃದ್ಧಿಗೆ ಅನುಮತಿ ನೀಡುವುದಿಲ್ಲ. ಆದಾಗ್ಯೂ, ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣಗಳ ಮೇಲೆ ಅದರ ಪರಿಣಾಮ ಪರಿಶೀಲಿಸಿದ ನಂತರ, ಪ್ರಕರಣದಿಂದ ಪ್ರಕರಣಕ್ಕೆ ಅನುಗುಣವಾಗಿ ಅನುಮತಿಸಲು ಅವಕಾಶ ಇದೆ’ ಎಂದರು.


‘ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧೀನದ ವಿಮಾನ ನಿಲ್ದಾಣಗಳ ವ್ಯಾಪ್ತಿಯಲ್ಲಿ ಹೊಸ ವಿಮಾನ ನಿಲ್ದಾಣಕ್ಕೆ ಅನುವು ಮಾಡಿಕೊಟ್ಟರೆ ಪ್ರಾಧಿಕಾರಕ್ಕೆ ಕೇಂದ್ರ/ರಾಜ್ಯ ಸರ್ಕಾರ ಅಥವಾ ವಿಮಾನ ನಿಲ್ದಾಣ ಅಭಿವೃದ್ಧಿಪಡಿಸುವವರು ಪರಿಹಾರ ನೀಡಬೇಕು ಎಂಬ ನಿಯಮ ಇದೆ. ಆದರೆ, ಅಸ್ತಿತ್ವದಲ್ಲಿರುವ ವಿಮಾನ ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಗರಿಷ್ಠ ಮಟ್ಟ ತಲುಪದಿದ್ದರೆ ಮಾತ್ರ ಈ ನಿಯಮ ಅನ್ವಯವಾಗುತ್ತದೆ. ಪರಿಹಾರಕ್ಕೆ ಪರ್ಯಾಯವಾಗಿ, ಹೊಸ ವಿಮಾನ ನಿಲ್ದಾಣದಲ್ಲಿ ಶೇ 26ರಿಂದ ಶೇ 49ರ ವರೆಗೆ ಪಾಲು ನೀಡಲು ಅವಕಾಶ ಇದೆ’ ಎಂದು ಅವರು ಮಾಹಿತಿ ನೀಡಿದರು.

### ಕೆಐಎಎಲ್‌ನಲ್ಲಿ ಎಂಆರ್‌ಒ ಘಟಕ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಏರ್ ಇಂಡಿಯಾ ಹಾಗೂ ಇಂಡಿಗೊ ಕಂಪನಿಗಳು ₹1460 ಕೋಟಿ ಹಾಗೂ ₹1100 ಕೋಟಿ ವೆಚ್ಚದಲ್ಲಿ ಎಂಆರ್‌ಒ (ಎಂಜಿನ್‌ಗಳ ನಿರ್ವಹಣೆ ಹಾಗೂ ದುರಸ್ತಿ) ಘಟಕ ಸ್ಥಾಪಿಸುತ್ತಿವೆ ಎಂದು ಸಚಿವರು ತಿಳಿಸಿದರು.

Publication Date
30/01/2026

Presented by ಪ್ರಜಾವಾಣಿ



# ಹಲವು ಸಾಧನೆ ಬದಲಾವಣೆಯ ಪ್ರತಿಪಾದನೆ

**ಆರ್ಥಿಕ ಸಮೀಕ್ಷೆ 2025–26**

2025-26ನೇ ಸಾಲಿನ ಆರ್ಥಿಕ ಸಮೀಕ್ಷೆಯನ್ನು ಕೇಂದ್ರ ಸರ್ಕಾರ ಸಂಸತ್ತಿನಲ್ಲಿ ಮಂಡಿಸಿದ್ದು, ಹಲವು ಕ್ಷೇತ್ರಗಳ ಬೆಳವಣಿಗೆ ಮತ್ತು ಕೊರತೆಗಳ ಬಗ್ಗೆ ಉಲ್ಲೇಖಿಸಿದೆ. ಕೃಷಿ, ಆರೋಗ್ಯ, ಶಿಕ್ಷಣ ಮುಂತಾದ ಕ್ಷೇತ್ರಗಳ ಬೆಳವಣಿಗೆಯನ್ನು ಗಮನಿಸುತ್ತಲೇ ಆಗಬೇಕಾದ ಕೆಲಸಗಳ ಬಗ್ಗೆಯೂ ಪ್ರಸ್ತಾಪಿಸಿದೆ. ಡಿಜಿಟಲ್ ವ್ಯಸನ ಹೆಚ್ಚುತ್ತಿರುವ ಬಗ್ಗೆ ಸಮೀಕ್ಷೆ ತೀವ್ರ ಕಳವಳ ವ್ಯಕ್ತಪಡಿಸಿದ್ದು, ಈ ದಿಸೆಯಲ್ಲಿ ನಿರ್ದಿಷ್ಟ ಪರಿಹಾರ ಕ್ರಮಗಳನ್ನು ರೂಪಿಸಬೇಕು ಎಂದು ಸೂಚಿಸಿದೆ

## ಮಕ್ಕಳ ಡಿಜಿಟಲ್ ವ್ಯಸನಕ್ಕೆ ಬೀಳಲಿ ಕಡಿವಾಣ

ಪ್ರಜಾವಾಣಿ ವಾರ್ತೆ

ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದಕ್ಕೆ ಮಿತಿ ಹೇರುವ, ಬಳಕೆದಾರನ ವಯಸ್ಸು ಆಧರಿಸಿ ಆನ್‌ಲೈನ್ ವೇದಿಕೆಗಳ ಬಳಕೆಗೆ ಅವಕಾಶ ಕಲ್ಪಿಸುವ ಮತ್ತು ಡಿಜಿಟಲ್ ವ್ಯಸನವನ್ನು ತಡೆಯಲು ಆನ್‌ಲೈನ್ ತರಗತಿಗಳನ್ನು ಕಡಿತಗೊಳಿಸುವ ಅಗತ್ಯದ ಬಗ್ಗೆ ಆರ್ಥಿಕ ಸಮೀಕ್ಷೆ ಪ್ರತಿಪಾದಿಸಿದೆ.




ಹೆಚ್ಚುತ್ತಿರುವ ಡಿಜಿಟಲ್ ವ್ಯಸನಕ್ಕೆ ಸಂಬಂಧಿಸಿದಂತೆ ವಯಸ್ಸು ದೃಢೀಕರಣಕ್ಕೆ ಆನ್‌ಲೈನ್ ವೇದಿಕೆಗಳನ್ನು ಜವಾಬ್ದಾರರನ್ನಾಗಿಸಬೇಕು ಮತ್ತು ಶೈಕ್ಷಣಿಕ ವಸ್ತು–ವಿಷಯ ತಿಳಿಯಲು ಮಕ್ಕಳ ನಡುವೆ ಬೇಸಿಕ್ ಫೋನ್‌ಗಳಂತಹ ಸರಳ ಸಾಧನಗಳ ಬಳಕೆ ಉತ್ತೇಜಿಸಬೇಕು. ವಿಶೇಷವಾಗಿ ಸಾಮಾಜಿಕ ಜಾಲತಾಣಗಳು, ಜೂಜಿನ ಆ್ಯಪ್‌ಗಳು ಮತ್ತು ಜಾಹೀರಾತುಗಳಿಗೆ ಸಂಬಂಧಿಸಿದಂತೆ ವಯಸ್ಸು ಮುಖ್ಯವಾಗುತ್ತದೆ ಎಂದಿದೆ.

ಆಸ್ಟ್ರೇಲಿಯಾ, ಚೀನಾ, ದಕ್ಷಿಣ ಕೊರಿಯಾದಂಥ ದೇಶಗಳಲ್ಲಿ ಈ ಕುರಿತು ಜಾರಿಗೆ ತರಲಾಗಿರುವ ನಿಯಮಗಳನ್ನು ಉಲ್ಲೇಖಿಸಲಾಗಿದ್ದು, ಯುವಕರು ಮತ್ತು ವಯಸ್ಕರ ಮಾನಸಿಕ ಆರೋಗ್ಯದ ಮೇಲೆ ಡಿಜಿಟಲ್ ವ್ಯಸನವು ಪರಿಣಾಮ ಬೀರುತ್ತಿದೆ. ಈ ವಿಚಾರದಲ್ಲಿ ಕುಟುಂಬಕ್ಕೂ ಅರಿವು ಮೂಡಿಸುವ ಅಗತ್ಯವಿದ್ದು, ಸ್ಕ್ರೀನ್ ಟೈಮ್‌ಗೆ ಮಿತಿ ಹೇರುವುದು, ಸಾಧನಗಳಿಂದ ಮುಕ್ತವಾಗಿ ಸಮಯ ಕಳೆಯುವುದು, ಎಲ್ಲರೂ ಒಟ್ಟಾಗಿ ಆಫ್‌ಲೈನ್ ಚಟುವಟಿಕೆಗಳಲ್ಲಿ ಭಾಗವಹಿಸುವುದನ್ನು ಉತ್ತೇಜಿಸಬೇಕು ಎಂದು ಸಮೀಕ್ಷೆ ಹೇಳಿದೆ.

**ಕಲಿಕೆ, ಉತ್ಪಾದಕತೆಗೆ ಕುತ್ತು:** ಡಿಜಿಟಲ್ ವ್ಯಸನವು ಶೈಕ್ಷಣಿಕ ಸಾಧನೆ, ಉತ್ಪಾದಕತೆಯ ಮೇಲೂ ವ್ಯತಿರಿಕ್ತ ಪರಿಣಾಮ ಬೀರುತ್ತಿದ್ದು, ಸಾರ್ವಜನಿಕ ಆರೋಗ್ಯ ಕ್ಷೇತ್ರದ ಗಮನಾರ್ಹ ಸಮಸ್ಯೆಯಾಗಿದೆ.

ಭಾರತದಲ್ಲಿ ಡಿಜಿಟಲ್ ವ್ಯಸನ ಮತ್ತು ಅದು ಮಾನಸಿಕ ಆರೋಗ್ಯದ ಮೇಲೆ ಬೀರುವ ಪರಿಣಾಮಗಳ ಸಮಗ್ರ ರಾಷ್ಟ್ರೀಯ ದತ್ತಾಂಶ ಲಭ್ಯವಿಲ್ಲ. ಗುರಿ ಆಧಾರಿತ ಕಾರ್ಯಕ್ರಮಗಳು, ಸಂಪನ್ಮೂಲ ಮೀಸಲಿಡುವಿಕೆ ಮತ್ತು ರಾಷ್ಟ್ರೀಯ ಮಾನಸಿಕ ಆರೋಗ್ಯ ಕಾರ್ಯತಂತ್ರಗಳಲ್ಲಿ ಡಿಜಿಟಲ್ ಆರೋಗ್ಯವನ್ನು ಒಳಗೊಳ್ಳುವುದರ ಅಗತ್ಯ ಇದೆ ಎಂದು ಸಮೀಕ್ಷೆ ಹೇಳಿದೆ. ಭಾರತೀಯ ಸಂದರ್ಭದಲ್ಲಿ ಡಿಜಿಟಲ್ ವ್ಯಸನದ ಮಾನಸಿಕ ಪರಿಣಾಮಗಳ ಬಗ್ಗೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯವು ನಿಮ್ಹಾನ್ಸ್ ನೇತೃತ್ವದಲ್ಲಿ ಅಧ್ಯಯನ ನಡೆಸುತ್ತಿದ್ದು, ಅದರ ವರದಿಯು ಸಮಗ್ರ ಮತ್ತು ಕಾರ್ಯಯೋಗ್ಯವಾದ ಒಳನೋಟಗಳನ್ನು ನೀಡಲಿದೆ. ಈ ವ್ಯಸನವು ಕಲಿಕೆ, ನಾಗರಿಕ ಸಹಭಾಗಿತ್ವದ ಮೇಲೆ ಪರಿಣಾಮ ಬೀರುತ್ತಿದ್ದು, ಮುಂದುವರಿದ ಹಂತದಲ್ಲಿ ಹಲವು ರೀತಿಯ ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಿಗೂ ಕಾರಣವಾಗುತ್ತಿದೆ.



ಚಿತ್ರ: ಆರ್ಥಿಕ ಸಮೀಕ್ಷೆ

### ವಿದೇಶಿ ನೇರ ಬಂಡವಾಳ ಹೂಡಿಕೆ ಹೆಚ್ಚಳ (ಲಕ್ಷ ಕೋಟಿಗಳಲ್ಲಿ)

| | |
|---|---|
| 2023-24 | ₹6.55 |
| 2024-25 | ₹7.45 |
| 2025-26* | ₹5.96 |


*(2025ರ ಏಪ್ರಿಲ್‌ನಿಂದ ನವೆಂಬರ್‌ವರೆಗೆ)


## ಕೃಷಿ ರಫ್ತು: ಸ್ಥಿರ ನೀತಿ ಅಗತ್ಯ

ಮುಂದಿನ ನಾಲ್ಕು ವರ್ಷಗಳಲ್ಲಿ ಕೃಷಿ, ಸಾಗರೋತ್ಪನ್ನ, ಆಹಾರ ಮತ್ತು ಪಾನೀಯಗಳ ರಫ್ತಿನ ಮೌಲ್ಯ ₹9.19 ಲಕ್ಷ ಕೋಟಿಗೆ (10,000 ಕೋಟಿ ಡಾಲರ್) ಹೆಚ್ಚಿಸುವ ಗುರಿಯನ್ನು ತಲುಪಲು ಭಾರತವು ತನ್ನ ಕೃಷಿ ರಫ್ತು ನೀತಿಗಳನ್ನು ಸರಿಪಡಿಸಬೇಕು. ಹೆಚ್ಚು ಸ್ಥಿರವಾದ ನೀತಿ ಬೇಕು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. ಸರ್ಕಾರದ ತಾತ್ಕಾಲಿಕ ನೀತಿಗಳು, ವ್ಯಾಪಾರ ನಿರ್ಬಂಧಗಳು ಪೂರೈಕೆ ಸರಪಣಿಗೆ ಅಡಚಣೆ ಉಂಟುಮಾಡುತ್ತಿರುವುದಲ್ಲದೆ, ದೇಶವು ಹೊಂದಿರುವ ವಿಶ್ವಾಸಾರ್ಹ ಪೂರೈಕೆದಾರ ಎಂಬ ವರ್ಚಸ್ಸಿಗೆ ಧಕ್ಕೆ ತರುತ್ತಿದೆ. 2024–25ರಲ್ಲಿ ಭಾರತದ ಕೃಷಿ ಹಾಗೂ ಅದಕ್ಕೆ ಸಂಬಂಧಿಸಿದ ಉತ್ಪನ್ನಗಳ ರಫ್ತು ಮೌಲ್ಯ ₹4.70 ಲಕ್ಷ ಕೋಟಿಗಳಷ್ಟಿತ್ತು (5,110 ಕೋಟಿ ಡಾಲರ್).

ಭಾರತವು ಜಗತ್ತಿನಲ್ಲೇ ಎರಡನೇ ಅತಿದೊಡ್ಡ ಕೃಷಿ ಉತ್ಪಾದಕ ರಾಷ್ಟ್ರವಾಗಿದ್ದರೂ ಜಾಗತಿಕ ಕೃಷಿ ಉತ್ಪನ್ನಗಳ ಒಟ್ಟು ರಫ್ತಿನಲ್ಲಿ ಭಾರತದ ಪಾಲು ಶೇ 2.2ರಷ್ಟು ಮಾತ್ರ ಇದೆ. 2019–20 ಮತ್ತು 2024–25ರ ನಡುವೆ ಕೃಷಿ ರಫ್ತಿನ ವಾರ್ಷಿಕ ಅಭಿವೃದ್ಧಿ ದರ ಶೇ 8.2ರಷ್ಟರಲ್ಲೇ ನಿಂತಿದೆ ಎಂದು ಸಮೀಕ್ಷೆ ಹೇಳಿದೆ.

ಐದು ವರ್ಷಗಳಲ್ಲಿ ಕೃಷಿ ಕ್ಷೇತ್ರದ ವಾರ್ಷಿಕ ಸರಾಸರಿ ಅಭಿವೃದ್ಧಿ ದರ ಶೇ 4.4ರಷ್ಟಿದೆ ಎಂದು ಹೇಳಿರುವ ಸಮೀಕ್ಷೆ, ಆಹಾರ ಧಾನ್ಯಗಳ ಉತ್ಪಾದನೆ ಹೆಚ್ಚಾಗಿದೆ. ತೋಟಗಾರಿಕಾ ಬೆಳೆಗಳ ಉತ್ಪಾದನೆಯಲ್ಲೂ ಗಣನೀಯ ಏರಿಕೆ ಕಂಡು ಬಂದಿದೆ ಎಂದೂ ವಿವರಿಸಿದೆ.




ಕರ್ನಾಟಕದ 'ಫ್ರೂಟ್ಸ್' ತಂತ್ರಾಂಶ ಸೇರಿದಂತೆ ಕೃಷಿ ಕ್ಷೇತ್ರದಲ್ಲಿ ಕೆಲವು ರಾಜ್ಯಗಳು ಅಳವಡಿಸಿಕೊಂಡಿರುವ ತಂತ್ರಜ್ಞಾನ ಆಧಾರಿತ ಸೇವೆಗಳನ್ನೂ ಸಮೀಕ್ಷೆಯಲ್ಲಿ ಉಲ್ಲೇಖಿಸಲಾಗಿದೆ. ರಾಜ್ಯ ಮಟ್ಟದಲ್ಲಿ ಅಭಿವೃದ್ಧಿ ಪಡಿಸಲಾದ ಈ ವಿನೂತನ ಪರಿಕಲ್ಪನೆಗಳು ಕೃಷಿ ಆಡಳಿತದಲ್ಲಿ ಪರಿಣಾಮಕಾರಿ ಬದಲಾವಣೆಯನ್ನು ತಂದಿವೆ ಮತ್ತು ಕೃಷಿಕರಿಗೆ ಉತ್ತಮ ಸೇವೆ ಒದಗಿಸಲು ನೆರವಾಗಿವೆ ಎಂದು ಹೇಳಿದೆ.

ಆಂಧ್ರಪ್ರದೇಶದಲ್ಲಿ ಜಾರಿಯಲ್ಲಿರುವ ಡ್ರೋನ್ ಆಧಾರಿತ ಸಮೀಕ್ಷೆ, ಇ-ಫಾರ್ಮಾರ್ಕೆಟ್ ಪ್ಲಾಟ್‌ಫಾರ್ಮ್, ಬಿಹಾರದ ಮುಖ್ಯಮಂತ್ರಿ ಸಮೀಕ್ಷಿತ್ ಚೌರ್ (ಜೌಗು ಭೂಮಿ) ವಿಕಾಸ್ ಯೋಜನೆ, ಅಸ್ಸಾಂ ರಾಜ್ಯ ನೀರಾವರಿ ಯೋಜನೆ, ಉತ್ತರ ಪ್ರದೇಶದ ಅಂತರ್ಜಲ ನಿಯಮಗಳು, ಕರ್ನಾಟಕದ ಫ್ರೂಟ್ಸ್ ಪ್ಲಾಟ್‌ಫಾರ್ಮ್ ಜಾರ್ಖಂಡ್‌ನ ಜಿಐಎಸ್ ಆಧಾರಿತ ಕ್ಲೈಮೇಟ್ ಸ್ಮಾರ್ಟ್ ಅಗ್ರಿಕಲ್ಚರ್ ಆ್ಯಂಡ್ ಅಗ್ರಿ ಸ್ಟೇಕ್ ಸ್ಕೀಮ್, ಬಿಹಾರದ ನಾಲ್ಕನೇ ಕೃಷಿ ನೀಲನಕ್ಷೆಗಳನ್ನು ಸಮೀಕ್ಷೆ ಶ್ಲಾಘಿಸಿದೆ.

## ಪ್ರಮುಖ ಅಂಶಗಳು

- ಆಹಾರದಲ್ಲಿ ಸುಧಾರಣೆಯು ಸಾಂಕ್ರಾಮಿಕವಲ್ಲದ ರೋಗಗಳನ್ನು ಗುಣಪಡಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತಿವೆ. ಆದರೆ, ಶಕ್ತಿವರ್ಧಕಗಳು, ಪೌಷ್ಟಿಕತೆಯ, ತೂಕ ಇಳಿಸುವ ಪೇಯಗಳನ್ನು ಸೇವಿಸುವುದು ವೈದ್ಯಕೀಯವಾಗಿ ನಿರೂಪಿತವಾದ ವಿಧಾನಗಳಲ್ಲ. ಈ ಕುರಿತು ಜನರಿಗೆ ತಿಳಿವಳಿಕೆ ಅಗತ್ಯ
- ಸರ್ಕಾರದ ಗುರಿ ನಿರ್ದಿಷ್ಟವಾದ ಕಲ್ಯಾಣ ಕಾರ್ಯಕ್ರಮಗಳಿಂದ ದೇಶದಲ್ಲಿ ಬಡತನ ಕಡಿಮೆ ಆಗಿದ್ದು, ಆದಾಯ ಹಂಚಿಕೆಯಲ್ಲಿಯೂ ಉತ್ತಮಿಕೆ ಕಂಡುಬಂದಿದೆ. ಅಂಚಿನಲ್ಲಿರುವ ಶೇ 5–10ರಷ್ಟು ಜನರ ಬಳಕೆ ವೆಚ್ಚದಲ್ಲಿ ಏರಿಕೆ ಕಂಡುಬಂದಿದ್ದು, ಇದು ಸಬ್ಸಿಡಿಗಳು, ಪಿಂಚಣಿ, ನೇರ ಹಣ ವರ್ಗಾವಣೆ ಮತ್ತು ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಮಾಡಿದ ವೆಚ್ಚದ ಫಲ
- ರಫ್ತು ನಿಯಂತ್ರಣ ಹೆಚ್ಚುತ್ತಿರುವ ಸಂದರ್ಭದಲ್ಲಿ ಸ್ವದೇಶಿ ನಿಯಮಕ್ಕೆ ಒತ್ತು ನೀಡುವುದು ಅನಿವಾರ್ಯವಾಗಿದೆ. ರಫ್ತಿನ ಮೇಲೆ ನಿಯಂತ್ರಣ, ತಂತ್ರಜ್ಞಾನದ ನಿರಾಕರಣೆ, ಇಂಗಾಲ ಹೊರಸೂಸುವಿಕೆಗೆ ಸಂಬಂಧಿಸಿದ ತೆರಿಗೆ ನಿಯಮಗಳು, ಪೂರ್ವ ಮತ್ತು ಪಶ್ಚಿಮ ಎರಡೂ ಕಡೆ ಒಂದೇ ರೀತಿಯ ಕೈಗಾರಿಕಾ ನೀತಿಗಳನ್ನು ಅಳವಡಿಸಿಕೊಂಡಿರುವುದು ಜಾಗತೀಕರಣದ ಅಂತ್ಯವನ್ನು ಸೂಚಿಸುತ್ತಿವೆ
- 15–29 ವಯೋಮಾನದ ಶೇ 4.9ರಷ್ಟು ಮಂದಿ ಮಾತ್ರ ಔಪಚಾರಿಕ ವೃತ್ತಿಪರ ಅಥವಾ ತಾಂತ್ರಿಕ ತರಬೇತಿ ಪಡೆದಿದ್ದು, ಕೌಶಲ ತರಬೇತಿ ಕಾರ್ಯಕ್ರಮಗಳನ್ನು ವಿಸ್ತರಿಸುವ ಅಗತ್ಯವಿದೆ
- ಭಾರತವು ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೆ ವಿಳಂಬವಾಗಿ ಕಾಲಿಟ್ಟಿದೆ. ಆದರೂ ಇದು ದೇಶಕ್ಕೆ ಅನುಕೂಲವನ್ನು ಕಲ್ಪಿಸಿದೆ. ಈ ಕ್ಷೇತ್ರದಲ್ಲಿ ಆರಂಭದಿಂದಲೂ ತೊಡಗಿಕೊಂಡಿರುವ ದೇಶಗಳು ಸಂಶೋಧನೆಗೆ ಹೆಚ್ಚು ಖರ್ಚು ಮಾಡಿವೆ. ಆದರೆ, ಭಾರತವು ಈಗ ಇರುವ ಸಂಪನ್ಮೂಲಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಈ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಬಹುದು. ದೇಶದಲ್ಲಿ ಎಐ ತಂತ್ರಜ್ಞಾನ ಅಳವಡಿಕೆಗಾಗಿ ಎಐ ಆರ್ಥಿಕ ಮಂಡಳಿ ಸ್ಥಾಪಿಸಬೇಕು




## ಸ್ಥಿರ ಅಭಿವೃದ್ಧಿಗೆ ಒತ್ತು ಬೇಕು

ಜಗತ್ತಿನಲ್ಲಿರುವ ಭೌಗೋಳಿಕ ರಾಜಕೀಯ ಪ್ರಕ್ಷುಬ್ಧ ವಾತಾವರಣದ ನಡುವೆಯೇ ಭಾರತವು ದೀರ್ಘಾವಧಿಯ ಸ್ಥಿರ ಅಭಿವೃದ್ಧಿ ಸಾಧಿಸಬೇಕು. ಇದೇ ಹೊತ್ತಿನಲ್ಲಿ ತಕ್ಷಣದಲ್ಲಿ ಎದುರಾಗುವ ಪರಿಸ್ಥಿತಿಯನ್ನೂ ಸಮರ್ಥವಾಗಿ ನಿಭಾಯಿಸಬೇಕು ಎಂದು ಆರ್ಥಿಕ ಸಮೀಕ್ಷೆ ಸಲಹೆ ನೀಡಿದೆ.

'ಜಾಗತಿಕ ಮಟ್ಟದಲ್ಲಿ ನಡೆಯುತ್ತಿರುವ ಏರಿಳಿತಕ್ಕೆ ಪ್ರತಿಯಾಗಿ ಭಾರತವು ಅಲ್ಪಾವಧಿಯ ಒತ್ತಡಗಳನ್ನು ನಿವಾರಿಸಲು ತಕ್ಷಣದ ಪರಿಹಾರಕ್ಕೆ ಒತ್ತು ನೀಡುವುದರ ಬದಲಿಗೆ ವಿಕಸಿತ ಭಾರತವನ್ನು ನಿರ್ಮಾಣ ಮಾಡುವ ನಿಟ್ಟಿನಲ್ಲಿ ಸ್ಥಿತಿಸ್ಥಾಪಕತ್ವವನ್ನು ಹೊಂದಿ, ನಿರಂತರವಾಗಿ ನವೀನ ಪರಿಕಲ್ಪನೆಗಳನ್ನು ಅಳವಡಿಸಿಕೊಳ್ಳುವುದಕ್ಕೆ ಹೆಚ್ಚಿನ ಗಮನ ನೀಡಬೇಕು' ಎಂದು ಹೇಳಿದೆ.

**ಫಾರ್ಮಾ ಉದ್ದಿಮೆಯಿಂದ ಕಲಿಯಿರಿ:** ಅನಿರೀಕ್ಷಿತ ಜಾಗತಿಕ ಸುಂಕ ಹೇರಿಕೆಯಿಂದ ಎದುರಾಗಿರುವ ಸವಾಲನ್ನು ನಿಭಾಯಿಸಲು ಭಾರತದ ಉದ್ದಿಮೆಗಳು ಫಾರ್ಮಾ ಉದ್ದಿಮೆಯಿಂದ ಸ್ಫೂರ್ತಿ ಪಡೆಯಬಹುದು ಎಂದು ಆರ್ಥಿಕ ಸಮೀಕ್ಷೆ ಹೇಳಿದೆ. 1995ರಲ್ಲಿ ಟಿಆರ್‌ಐಪಿಎಸ್ ಒಪ್ಪಂದದ ನಂತರ ಎದುರಾಗಿದ್ದ ಬಿಕ್ಕಟ್ಟನ್ನು ಫಾರ್ಮಾ ಉದ್ದಿಮೆಯು ಸ್ವತಃ ರೂಪಾಂತರಗೊಂಡು ಸಮರ್ಥವಾಗಿ ಎದುರಿಸಿತ್ತು.

## ಎಥೆನಾಲ್‌ಗಾಗಿ ಮೆಕ್ಕೆಜೋಳ ಆಹಾರ ಭದ್ರತೆಗೆ ಕುತ್ತು



ಭಾರತದಲ್ಲಿ ಪೆಟ್ರೋಲ್‌ಗೆ ಎಥೆನಾಲ್ ಮಿಶ್ರಣ ಮಾಡುವ ಯೋಜನೆಯಿಂದ ₹1.44 ಲಕ್ಷ ಕೋಟಿಗೂ ಹೆಚ್ಚು ವಿದೇಶಿ ವಿನಿಮಯ ಉಳಿತಾಯವಾಗಿದ್ದು, ಆಗಸ್ಟ್ 2025ರ ವೇಳೆಗೆ 245 ಲಕ್ಷ ಟನ್ ಕಚ್ಚಾ ತೈಲಕ್ಕೆ ಪರ್ಯಾಯವಾಗಿ ಎಥೆನಾಲ್ ಅನ್ನು ಬಳಸಲಾಗಿದೆ ಎಂದು ಆರ್ಥಿಕ ಸಮೀಕ್ಷೆ ಹೇಳಿದೆ.

ಆದರೆ, ಇದರ ತ್ವರಿತ ವಿಸ್ತರಣೆಯು ಹಲವು ಅನಪೇಕ್ಷಿತ ಪರಿಣಾಮಗಳಿಗೆ ಕಾರಣವಾಗುತ್ತಿದೆ. ಸರ್ಕಾರವು ಮೆಕ್ಕೆಜೋಳ ಆಧಾರಿತ ಎಥೆನಾಲ್ ಉತ್ಪಾದನೆಯನ್ನು ಉತ್ತೇಜಿಸುತ್ತಿದ್ದು, ರೈತರು ಬೇಳೆ, ಎಣ್ಣೆಕಾಳುಗಳ ಬದಲಿಗೆ ಮೆಕ್ಕೆಜೋಳ ಬೆಳೆಯುತ್ತಿದ್ದಾರೆ. ಇದರಿಂದ ದೇಶದಲ್ಲಿ ದೀರ್ಘಾವಧಿಯ ಆಹಾರ ಭದ್ರತೆ ಮತ್ತು ಪೌಷ್ಟಿಕತೆಯ ಸಮಸ್ಯೆಗಳು ಉಂಟಾಗಬಹುದು ಎಂದು ಸಮೀಕ್ಷೆ ಹೇಳಿದೆ.

ಭಾರತವು ಪೆಟ್ರೋಲ್‌ಗೆ ಶೇ 20ರಷ್ಟು ಎಥೆನಾಲ್ ಅನ್ನು ಮಿಶ್ರಣ ಮಾಡುವ ಗುರಿಯತ್ತ ಸಾಗುತ್ತಿದ್ದು, ಈ ಗುರಿಸಾಧನೆಗಾಗಿ ಸಾಂಪ್ರದಾಯಿಕವಾದ ಸಕ್ಕರೆ ಆಧಾರಿತ ಕಚ್ಚಾ ಪದಾರ್ಥಗಳನ್ನೂ ಮೀರಿ ಆಹಾರ ಧಾನ್ಯಗಳಿಗೆ (ವಿಶೇಷವಾಗಿ ಮೆಕ್ಕೆಜೋಳ) ವಿಸ್ತರಿಸಿದೆ. ದೇಶದ ಹಲವೆಡೆ ಮೆಕ್ಕೆಜೋಳದ ಉತ್ಪಾದನೆ (ಶೇ 8.77) ಮತ್ತು ಬೆಳೆ ಬೆಳೆಯುವ ಪ್ರದೇಶ (ಶೇ 6.68) ಹೆಚ್ಚಾಗಿದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಮೆಕ್ಕೆಜೋಳವು ಬೇಳೆಕಾಳು, ಎಣ್ಣೆಕಾಳು, ಸೋಯಾಬೀನ್, ಸಿರಿಧಾನ್ಯ ಮತ್ತು ಹತ್ತಿಯೊಂದಿಗೆ ಪೈಪೋಟಿ ನಡೆಸುತ್ತಿದೆ.

ಇಪ್ಪತ್ತು ವರ್ಷಗಳಷ್ಟು ಹಳೆಯದಾದ ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯನ್ನು ಮರುಪರಿಶೀಲಿಸಬೇಕು ಎಂದು ಆರ್ಥಿಕ ಸಮೀಕ್ಷೆ ಪ್ರಬಲವಾಗಿ ಪ್ರತಿಪಾದಿಸಿದೆ. ಕಾಯ್ದೆಯ ಅಡಿಯಲ್ಲಿ ಗೋಪ್ಯ ವರದಿಗಳು ಮತ್ತು ಕರಡು ಅಭಿಪ್ರಾಯಗಳನ್ನು ಬಹಿರಂಗ ಪಡಿಸುವುದಕ್ಕೆ ಅವಕಾಶ ನೀಡಬಾರದು. ಅಂತಹ ನಿಯಮಗಳು ಆಡಳಿತವನ್ನು ನಿರ್ಬಂಧಕ್ಕೊಳಪಡಿಸುತ್ತವೆ ಎಂದು ಅದು ಹೇಳಿದೆ.

## ಜಾಹೀರಾತು ನಿರ್ಬಂಧಿಸಿ

ಉಪ್ಪು, ಸಕ್ಕರೆ, ಕೊಬ್ಬಿನ ಅಂಶ ಜಾಸ್ತಿ ಇರುವ ಹೆಚ್ಚು ಸಂಸ್ಕರಿತ ಆಹಾರ ಪದಾರ್ಥಗಳ ಬಳಕೆ ಹೆಚ್ಚುತ್ತಿದ್ದು, ಭಾರತದಲ್ಲಿ ಇಂತಹ ಆಹಾರ ಪದಾರ್ಥಗಳ ಮಾರುಕಟ್ಟೆ ವೇಗವಾಗಿ ಅಭಿವೃದ್ಧಿ ಹೊಂದುತ್ತಿದೆ. ಈ ದಿಸೆಯಲ್ಲಿ, ಬೆಳಿಗ್ಗೆ 6ರಿಂದ ರಾತ್ರಿ 11 ಗಂಟೆಯವರೆಗೆ ಇಂಥ ಆಹಾರ ವಸ್ತುಗಳ ಜಾಹೀರಾತುಗಳನ್ನು ನಿರ್ಬಂಧಿಸಬೇಕು ಎಂದು ಬಲವಾಗಿ ಪ್ರತಿಪಾದಿಸಿದೆ.

ದೇಶದಲ್ಲಿ 2020ರಲ್ಲಿ 3.3 ಕೋಟಿ ಮಕ್ಕಳು ಸ್ಥೂಲಕಾಯದವರಾಗಿದ್ದರೆ, 2035ಕ್ಕೆ ಈ ಸಂಖ್ಯೆ 8.3 ಕೋಟಿಗೆ ಏರಲಿದೆ. 2019–21ರ ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ ಪ್ರಕಾರ, ದೇಶದ ಶೇ 24ರಷ್ಟು ಮಹಿಳೆಯರು ಮತ್ತು ಶೇ 23ರಷ್ಟು ಪುರುಷರು ಅಧಿಕ ತೂಕ ಮತ್ತು ಬೊಜ್ಜು ಹೊಂದಿದ್ದಾರೆ. ದೇಶದಲ್ಲಿ 2009 ಮತ್ತು 2023ರ ನಡುವೆ ಹೆಚ್ಚು ಸಂಸ್ಕರಿತ ಆಹಾರ ಪದಾರ್ಥಗಳ ಮಾರಾಟವು ಶೇ 150ರಷ್ಟು ಹೆಚ್ಚಳವಾಗಿದೆ. ಇದೇ ಅವಧಿಯಲ್ಲಿ ಮಹಿಳೆಯರು ಮತ್ತು ಪುರುಷರಲ್ಲಿ ಬೊಜ್ಜು ಕೂಡ ದ್ವಿಗುಣಗೊಂಡಿದೆ. ಇವುಗಳ ಪರಿಹಾರಕ್ಕೆ ಗ್ರಾಹಕರ ಸ್ವಭಾವದಲ್ಲಿ ಬದಲಾವಣೆ ತರುವುದರ ಜತೆಗೆ ನಿಮಯ ರೂಪಿಸುವುದೂ ಅಗತ್ಯವಾಗಿದೆ. ಮಾಧ್ಯಮಗಳ ಜತೆಗೆ ಡಿಜಿಟಲ್ ಮಾಧ್ಯಮಗಳ ಜಾಹೀರಾತುಗಳ ಮೇಲೂ ನಿರ್ಬಂಧ ವಿಧಿಸುವ ಅಗತ್ಯವಿದೆ ಎಂದು ಸಮೀಕ್ಷೆ ಪ್ರತಿಪಾದಿಸಿದೆ.

Publication Date 30/01/2026

Presented by

# ಗಿಗ್ ಕಾರ್ಮಿಕರಿಗೆ ಕನಿಷ್ಠ ಸಂಭಾವನೆಗೆ ಸಲಹೆ

ನವದೆಹಲಿ (ಪಿಟಿಐ): ದೇಶದ ಗಿಗ್ ವ್ಯವಸ್ಥೆಯಲ್ಲಿ ಕೆಲಸ ಮಾಡುತ್ತಿರುವವರ ಪೈಕಿ ಶೇಕಡ 40ರಷ್ಟು ಮಂದಿ ತಿಂಗಳಿಗೆ ₹15 ಸಾವಿರಕ್ಕಿಂತ ಕಡಿಮೆ ಸಂಪಾದಿಸುತ್ತಿದ್ದಾರೆ ಎಂದು ಆರ್ಥಿಕ ಸಮೀಕ್ಷೆ ವರದಿಯು ಆತಂಕ ವ್ಯಕ್ತಪಡಿಸಿದೆ.

ಅಲ್ಲದೆ, ಈ ವಲಯದ ಕಾರ್ಮಿಕರ ಸ್ಥಿತಿಯಲ್ಲಿ ಸುಧಾರಣೆ ತರಲು ಕಾರ್ಮಿಕರಿಗೆ ಪ್ರತಿ ಒಂದು ಗಂಟೆಯ ಕೆಲಸಕ್ಕೆ ಅಥವಾ ವಹಿಸಿದ ಪ್ರತಿ ಒಂದು ಕೆಲಸಕ್ಕೆ ಕನಿಷ್ಠ ಸಂಭಾವನೆ ನಿಗದಿ ಆಗಬೇಕು ಎಂದು ಸಲಹೆ ನೀಡಿದೆ. ಗಿಗ್ ಕಾರ್ಮಿಕರು ಕೆಲಸದ ಭಾಗವಾಗಿ ಕಾಯುತ್ತ ನಿಂತರೆ ಅದಕ್ಕೆ ಪ್ರತ್ಯೇಕವಾಗಿ ಪರಿಹಾರ ಮೊತ್ತ ನೀಡಬೇಕು ಎಂದು ಹೇಳಿದೆ.

ದೇಶದ ಗಿಗ್ ಅರ್ಥ ವ್ಯವಸ್ಥೆಯು ಬಹಳ ವೇಗವಾಗಿ ವಿಸ್ತರಣೆ ಕಾಣುತ್ತಿದೆ. ಹೀಗಿದ್ದರೂ ಅಲ್ಲಿ ಕೆಲಸ ಮಾಡುವವರ ಆದಾಯ ಅಸ್ಥಿರವಾಗಿದೆ. ಇದರಿಂದಾಗಿ ಅವರಿಗೆ ಹಣಕಾಸಿನ ಸೇವೆಗಳು ಸರಿಯಾಗಿ ಸಿಗುತ್ತಿಲ್ಲ ಎಂಬ ದೂರುಗಳು ಇವೆ.

ಸೀಮಿತ ಕೌಶಲ ಹೊಂದಿರುವುದು, ಕೃತಕ ಬುದ್ಧಿಮತ್ತೆ ಯಂತಹ ತಾಂತ್ರಿಕ ಮುನ್ನಡೆ ಗಳಿಂದಾಗಿ ಕೆಲಸ ಕಳೆದುಕೊಳ್ಳುವ ಭಯವು ಗಿಗ್ ಕಾರ್ಮಿಕರನ್ನು ಇನ್ನಷ್ಟು ತೊಂದರೆಗೆ ಸಿಲುಕಿಸುತ್ತವೆ ಎಂದು ವರದಿ ಕಳವಳ ವ್ಯಕ್ತಪಡಿಸಿದೆ.

'ಗಿಗ್ ಮಾರುಕಟ್ಟೆಯಲ್ಲಿ ಕೆಲಸ ಹುಡುಕಿಕೊಳ್ಳಲು ಡಿಜಿಟಲ್ ವೇದಿಕೆಗಳು ಅಗತ್ಯವಾಗಿವೆ. ಇದು ಶುಲ್ಕ, ಅಲ್ಗರಿದಂ ಮತ್ತು ಕಾರ್ಮಿಕರ ರಕ್ಷಣೆಗೆ ಸಂಬಂಧಿಸಿದ ಕಳವಳಕ್ಕೆ ಕಾರಣ. ಸ್ಪರ್ಧಾತ್ಮಕತೆಗೆ ಸಂಬಂಧಿಸಿದ ನಿಯಮ, ದತ್ತಾಂಶ ಲಭ್ಯತೆ, ಆಲ್ಗರಿದಂಗಳಲ್ಲಿ ಪಾರದರ್ಶಕತೆ ಮೂಲಕ ಇವಕ್ಕೆ ಸ್ಪಂದಿಸಬೇಕು' ಎಂದು ಸಲಹೆ ನೀಡಿದೆ.

Publication Date
30/01/2026

Presented by ಪ್ರಜಾವಾಣಿ

# ಮುಟ್ಟಿನ ಆರೋಗ್ಯವೂ ಹಕ್ಕು

## ಶಾಲೆಗಳಲ್ಲಿ ಬಾಲಕಿಯರಿಗೆ ಉಚಿತ ಸ್ಯಾನಿಟರಿ ನ್ಯಾಪ್‌ಕಿನ್ ವಿತರಣೆಗೆ ಸುಪ್ರೀಂಕೋರ್ಟ್ ಆದೇಶ



ನವದೆಹಲಿ (ಪಿಟಿಐ): ಮುಟ್ಟಿನ ಆರೋಗ್ಯದ ಹಕ್ಕು ಸಂವಿಧಾನ ನೀಡಿರುವ ಜೀವಿಸುವ ಹಕ್ಕಿನ ಭಾಗ ಎಂದು ಸುಪ್ರೀಂ ಕೋರ್ಟ್ ಶುಕ್ರವಾರ ಸಾರಿದೆ.

ಖಾಸಗಿ ಶಾಲೆಗಳನ್ನೂ ಒಳಗೊಂಡಂತೆ ಎಲ್ಲ ಶಾಲೆಗಳಲ್ಲಿ ವಿದ್ಯಾರ್ಥಿನಿಯರಿಗೆ ಮಣ್ಣಿನಲ್ಲಿ ಕರಗುವ ಸ್ಯಾನಿಟರಿ ನ್ಯಾಪ್‌ಕಿನ್‌ಗಳನ್ನು ಉಚಿತವಾಗಿ ನೀಡಬೇಕು. ವಿದ್ಯಾರ್ಥಿಗಳಿಗೆ ಲಿಂಗಾಧಾರಿತವಾಗಿ ಪ್ರತ್ಯೇಕವಾದ ಸ್ವಚ್ಛ ಶೌಚಾಲಯ ಸೌಲಭ್ಯವನ್ನು ಒದಗಿಸಬೇಕು ಎಂದು ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಕೋರ್ಟ್ ನಿರ್ದೇಶನ ನೀಡಿದೆ.

ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರಿದ್ದ ನ್ಯಾಯಪೀಠವು ಈ ಮಹತ್ವದ ತೀರ್ಪು ಪ್ರಕಟಿಸುವ ಮೂಲಕ, ಲಿಂಗ ಸಮಾನತೆ ಮತ್ತು ಶೈಕ್ಷಣಿಕ ಸಮಾನತೆಯನ್ನು ಎತ್ತಿಹಿಡಿದಿದೆ. ಈ ತೀರ್ಪು ಸರ್ಕಾರಿ, ಅನುದಾನಿತ ಮತ್ತು ಖಾಸಗಿ ಸೇರಿದಂತೆ ಎಲ್ಲ ಶಾಲೆಗಳಿಗೂ ಅನ್ವಯವಾಗಲಿದೆ ಎಂದು ನ್ಯಾಯಪೀಠ ತಿಳಿಸಿದೆ.

ನ್ಯಾಯಾಲಯದ ಈ ತೀರ್ಪು ಸರಿಯಾಗಿ ಅನುಷ್ಠಾನಗೊಳ್ಳದಿದ್ದರೆ ಖಾಸಗಿ ಶಾಲೆಗಳ ಮಾನ್ಯತೆ ರದ್ದುಗೊಳಿಸುವುದೂ ಸೇರಿದಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು. ಸಾರ್ವಜನಿಕ ಸಂಸ್ಥೆಗಳಲ್ಲಿ ತೀರ್ಪು ಪಾಲನೆಯಾಗದಿದ್ದಲ್ಲಿ, ಆಯಾ ರಾಜ್ಯ ಸರ್ಕಾರವನ್ನೇ ನೇರವಾಗಿ ಹೊಣೆ ಮಾಡಲಾಗುವುದು ಎಂದು ನ್ಯಾಯಪೀಠ ಸ್ಪಷ್ಟವಾಗಿ ತಿಳಿಸಿದೆ.

'ಸಂವಿಧಾನದ 21ನೇ ವಿಧಿಯಲ್ಲಿ ಬರುವ ಜೀವಿಸುವ ಹಕ್ಕು, ಮುಟ್ಟಿನ ಆರೋಗ್ಯದ ಹಕ್ಕನ್ನೂ ಒಳಗೊಂಡಿದೆ. ಸುರಕ್ಷಿತ, ಪರಿಣಾಮಕಾರಿ ಮುಟ್ಟಿನ ನೈರ್ಮಲ್ಯ ನಿರ್ವಹಣೆಗೆ ಅಗತ್ಯವಾದ ಸೌಲಭ್ಯ ಕಲ್ಪಿಸಬೇಕು ಎಂಬುದನ್ನು ಇದು ಸಾರುತ್ತದೆ. ಇಂಥ ಕ್ರಮಗಳಿಂದ ವಿದ್ಯಾರ್ಥಿನಿಯರು ಮುಂದೆ ಲೈಂಗಿಕ ಮತ್ತು ಸಂತಾನೋತ್ಪತ್ತಿಗೆ ಸಂಬಂಧಿಸಿದಂತೆ ಉತ್ತಮ ಆರೋಗ್ಯ ಹೊಂದಲು ಸಾಧ್ಯ. ಆರೋಗ್ಯಕರ ಸಂತಾನೋತ್ಪತ್ತಿಯ ಹಕ್ಕಿನಲ್ಲಿ ಶಿಕ್ಷಣ ಮತ್ತು ಲೈಂಗಿಕ ಆರೋಗ್ಯದ ಕುರಿತ ಮಾಹಿತಿ ಪಡೆಯುವ ಹಕ್ಕೂ ಅಂತರ್ಗತವಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತು.



'ಜೀವಿಸುವ ಮತ್ತು ಘನತೆಯ ಹಕ್ಕಿಗೆ ಶಿಕ್ಷಣದ ಹಕ್ಕು (ಆರ್‌ಟಿಇ) ವಿಶಾಲವಾದ ಚೌಕಟ್ಟನ್ನು ನೀಡುತ್ತದೆ. ಶಿಕ್ಷಣವನ್ನು ಪಡೆಯದೆ ಇವುಗಳ ಬಗ್ಗೆ ಅರಿತುಕೊಳ್ಳಲು ಸಾಧ್ಯವಿಲ್ಲ' ಎಂದು ಹೇಳಿತು.

'ಯಾವುದೇ ವ್ಯಕ್ತಿಯು ಅವಮಾನ, ಬಹಿಷ್ಕಾರ ಅಥವಾ ಪ್ರತ್ಯೇಕತೆಯ ನೋವು ಅನುಭವಿಸಬಾರದು. ಇಂಥ ವಿದ್ಯಮಾನಗಳು ವ್ಯಕ್ತಿಯ ಘನತೆಗೆ ಧಕ್ಕೆ ತರುತ್ತವೆ. ಈ ಮಾತು ವಿದ್ಯಾರ್ಥಿನಿಯರಿಗೂ ಅನ್ವಯವಾಗುತ್ತದೆ. ಮುಟ್ಟಿನ ಸಂದರ್ಭದಲ್ಲಿ ನೈರ್ಮಲ್ಯಕ್ಕೆ ಅಗತ್ಯವಿರುವ ಸೌಲಭ್ಯಗಳ ಅಲಭ್ಯತೆ ಕೂಡ ಅವರ ಘನತೆಯನ್ನು ಕುಗ್ಗಿಸುತ್ತದೆ' ಎಂದು ನ್ಯಾಯಪೀಠ ಹೇಳಿತು.

'ಖಾಸಗೀತನ ಮತ್ತು ಘನತೆ ಎರಡೂ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ಖಾಸಗಿ ಹಕ್ಕಿನ ಉಲ್ಲಂಘನೆಯನ್ನು ತಡೆಯುವುದು ಮಾತ್ರವಲ್ಲದೆ ಪ್ರತಿಯೊಬ್ಬ ವ್ಯಕ್ತಿಯ ಖಾಸಗೀತನದ ರಕ್ಷಣೆಯೂ ರಾಜ್ಯಗಳ ಹೊಣೆಯಾಗಿದೆ' ಎಂದು ಅಭಿಪ್ರಾಯಪಟ್ಟಿತು.

'ಮುಟ್ಟಿನ ನೈರ್ಮಲ್ಯ ನಿರ್ವಹಣೆಗೆ ಸಂಬಂಧಿಸಿದ ಸೌಲಭ್ಯಗಳು ಸಿಗದಿದ್ದಾಗ ಶಾಲಾ ಹಂತದಲ್ಲಿ ಕೂಡ ಬಾಲಕಿಯರು ಸಮಾನವಾಗಿ ಪಾಲ್ಗೊಳ್ಳುವ ಹಕ್ಕಿನಿಂದ ವಂಚಿತರಾಗುತ್ತಾರೆ. ಇದರ ಪರಿಣಾಮವಾಗಿ ಜೀವನದ ಮುಂದಿನ ಹಂತಗಳಲ್ಲೂ ಅಸಮರ್ಥತೆಯನ್ನು ಎದುರಿಸಬೇಕಾಗುತ್ತದೆ' ಎಂದು ನ್ಯಾಯಪೀಠ ಹೇಳಿತು.

### 'ಸುಪ್ರೀಂ' ನಿರ್ದೇಶನಗಳೇನು?

- ಶೌಚಾಲಯದ ಆವರಣದ ಒಳಗೆ ಸ್ಯಾನಿಟರಿ ನ್ಯಾಪ್‌ಕಿನ್ ಸುಲಭವಾಗಿ ಲಭ್ಯವಾಗುವಂತೆ ಇರಬೇಕು. ವೆಂಡಿಂಗ್ ಯಂತ್ರದ ಮೂಲಕ ಅಥವಾ ನಿರ್ದಿಷ್ಟ ಪ್ರದೇಶದಲ್ಲಿ ನ್ಯಾಪ್‌ಕಿನ್‌ಗಳನ್ನು ಇಡಬಹುದು ಅಥವಾ ಗೊತ್ತುಪಡಿಸಿದ ಅಧಿಕಾರಿಯೂ ವಿತರಿಸಬಹುದು
- ಪ್ರತಿಯೊಂದು ಶಾಲೆಯೂ ಲಿಂಗಾಧಾರಿತ ಶೌಚಾಲಯ ಸೌಲಭ್ಯ ಹೊಂದಿರಬೇಕು
- ಈಗಾಗಲೇ ಅಸ್ತಿತ್ವದಲ್ಲಿರುವ ಅಥವಾ ಹೊಸದಾಗಿ ನಿರ್ಮಿಸುವ ಶೌಚಾಲಯಗಳನ್ನು ವಿದ್ಯಾರ್ಥಿಗಳ ಅನುಕೂಲಕ್ಕೆ ತಕ್ಕಂತೆ ಮತ್ತು ಅವರ ಖಾಸಗೀತನವನ್ನು ಕಾಪಾಡುವ ರೀತಿಯಲ್ಲಿ ವಿನ್ಯಾಸಗೊಳಿಸಬೇಕು/ ನಿರ್ಮಿಸಬೇಕು/ ನಿರ್ವಹಣೆ ಮಾಡಬೇಕು
- ಶೌಚಾಲಯಗಳು ಅಂಗವಿಕಲ ಮಕ್ಕಳ ಅಗತ್ಯವನ್ನೂ ಪೂರೈಸುವಂತಿರಬೇಕು
- ಶೌಚಾಲಯಗಳಲ್ಲಿ ಕೈ ತೊಳೆಯುವ ಸೋಪು ಮತ್ತು ಎಲ್ಲಾ ಸಮಯದಲ್ಲೂ ನೀರಿನ ಸೌಲಭ್ಯ ಇರಲೇಬೇಕು



Publication Date
31/01/2026

Presented by ಪ್ರಜಾವಾಣಿ

# ನಗರದ ಜನರಿಗೂ 'ಗೃಹ ಆರೋಗ್ಯ'

## ಜಿಬಿಎ ವ್ಯಾಪ್ತಿಯಲ್ಲಿ ಯೋಜನೆ ಜಾರಿಗೆ ಆರೋಗ್ಯ ಇಲಾಖೆಯಿಂದ ಅಗತ್ಯ ಸಿದ್ಧತೆ

• ವರುಣ ಹೆಗಡೆ

**ಬೆಂಗಳೂರು:** ಮನೆ ಬಾಗಿಲಲ್ಲಿಯೇ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಿ, ಔಷಧ ವಿತರಿಸುವ 'ಗೃಹ ಆರೋಗ್ಯ' ಯೋಜನೆಯನ್ನು ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ವ್ಯಾಪ್ತಿಗೂ ವಿಸ್ತರಿಸಲು ಆರೋಗ್ಯ ಇಲಾಖೆ ಮುಂದಾಗಿದೆ.

ಈ ಸಂಬಂಧ ಇಲಾಖೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಈಗಾಗಲೇ ಆರೋಗ್ಯ ಇಲಾಖೆ ಹಾಗೂ ಜಿಬಿಎ ಅಧಿಕಾರಿಗಳು ಸಭೆ ನಡೆಸಿದ್ದು, ಗ್ರಾಮೀಣ ಭಾಗಕ್ಕೆ ಸೀಮಿತವಾಗಿದ್ದ ಈ ಯೋಜನೆಯನ್ನು ಫೆಬ್ರುವರಿ ತಿಂಗಳಲ್ಲಿ ನಗರಕ್ಕೂ ವಿಸ್ತರಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ನಗರದ ಎಲ್ಲ ಜನರ ಆರೋಗ್ಯ ತಪಾಸಣೆ ಕಷ್ಟಸಾಧ್ಯ ಎಂಬ ಕಾರಣಕ್ಕೆ, ಆರ್ಥಿಕವಾಗಿ ದುರ್ಬ-



ಲರಾಗಿರುವ ಹಾಗೂ ಕೊಳೆಗೇರಿ ಪ್ರದೇಶದ ನಿವಾಸಿಗಳಿಗೆ ಅವರ ಮನೆ ಬಾಗಿಲಲ್ಲಿಯೇ ವಿವಿಧ ಪರೀಕ್ಷೆಗಳನ್ನು ನಡೆಸಲಾಗುತ್ತದೆ. ಅನಾರೋಗ್ಯ ಸಮಸ್ಯೆ ಇರುವವರಿಗೆ ಅಗತ್ಯ ಔಷಧ ಒದಗಿಸುವ ಜತೆಗೆ, ಚಿಕಿತ್ಸೆಗೂ ಕ್ರಮವಹಿಸಲಾಗುತ್ತದೆ.

ಆರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಈ ಯೋಜನೆಯನ್ನು ಪ್ರಾಯೋಗಿಕವಾಗಿ 2024ರ ಅಕ್ಟೋಬರ್‌ನಲ್ಲಿ ಕೋಲಾರದಲ್ಲಿ ಪ್ರಾರಂಭಿಸಲಾಗಿತ್ತು. 2025ರ ಜೂನ್‌ನಲ್ಲಿ ಈ ಯೋಜನೆಯನ್ನು ರಾಜ್ಯದಾದ್ಯಂತ ವಿಸ್ತರಿಸಲಾಗಿದೆ. ಸದ್ಯ ಗ್ರಾಮೀಣ ಪ್ರದೇಶದಲ್ಲಿ ಮಾತ್ರ ಈ ಯೋಜನೆಯಡಿ ಆರೋಗ್ಯ ತಪಾಸಣೆ ನಡೆಸಲಾಗುತ್ತಿದೆ.

**ವೈದ್ಯರ ತಂಡ ಭೇಟಿ:** ಯೋಜನೆಯಡಿ ವೈದ್ಯರನ್ನೊಳಗೊಂಡ ತಂಡವು 30 ವರ್ಷ ಮೇಲ್ಪಟ್ಟವರನ್ನು ತಪಾಸಣೆ ಮಾಡಲಿದೆ. ಸಮುದಾಯ ಆರೋಗ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಸಂರಕ್ಷಣಾಧಿಕಾರಿಗಳು ಹಾಗೂ ಆಶಾ ಕಾರ್ಯಕರ್ತೆಯರನ್ನು ಒಳಗೊಂಡ ತಂಡವು ಮನೆಗಳಿಗೆ ಭೇಟಿ ನೀಡಲಿದೆ. ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಸಮಸ್ಯೆ ಎದುರಿಸುತ್ತಿರುವವರಿಗೆ ಒಂದು ತಿಂಗಳಿಗೆ ಸಾಕಾಗುವಷ್ಟು ಮಾತ್ರೆಗಳನ್ನೂ ನೀಡಲಾಗುತ್ತದೆ. ಈ ಔಷಧವನ್ನು ಪ್ರತಿ ತಿಂಗಳು ಪರಿಶೀಲಿಸಿ, ಮುಂದುವರಿಕೆಗೆ ಅಗತ್ಯವಿರುವ ಮಾತ್ರೆಗಳನ್ನು ಒದಗಿಸಲಾಗುತ್ತದೆ. ಈ ಕಾರ್ಯಕ್ಕೆ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಜತೆಗೆ ನಮ್ಮ ಕ್ಲಿನಿಕ್‌ಗಳನ್ನೂ ಬಳಸಿಕೊಳ್ಳಲಾಗುತ್ತದೆ.

'ಸದ್ಯ ಗ್ರಾಮೀಣ ಪ್ರದೇಶದಲ್ಲಿ ಜಾರಿಯಲ್ಲಿರುವ ಈ ಯೋಜನೆಗೆ ಉತ್ತಮ ಸ್ಪಂದನೆ ವ್ಯಕ್ತವಾಗಿದೆ. ಆರಂಭಿಕ ಹಂತದಲ್ಲಿಯೇ ರೋಗ ಪತ್ತೆಗೆ ಯೋಜನೆ ಸಹಕಾರಿಯಾಗಿದೆ. ಸಾಂಕ್ರಾಮಿಕವಲ್ಲದ ರೋಗಗಳ ಬಗ್ಗೆ ಹಾಗೂ ನಿಯಮಿತ ಆರೋಗ್ಯ ತಪಾಸಣೆ ಬಗ್ಗೆ ಅರಿವು ಮೂಡಿಸಲಾಗುತ್ತಿದೆ. ನಗರ ಪ್ರದೇಶದಲ್ಲಿ ಯೋಜನೆ ವಿಸ್ತರಣೆಗೆ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆ' ಎಂದು ಆರೋಗ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದರು.

**ಜಿಬಿಎ ವ್ಯಾಪ್ತಿಗೂ ಗೃಹ ಆರೋಗ್ಯ ಯೋಜನೆ ವಿಸ್ತರಿಸಲು ಮುಂದಾಗಿದ್ದೇವೆ. ಈ ಸಂಬಂಧ ಅಧಿಕಾರಿಗಳ ಜತೆಗೆ ಸಭೆ ನಡೆಸಲಾಗಿದ್ದು, ಯೋಜನೆಯಡಿ ತಪಾಸಣೆ ಜತೆಗೆ ಔಷಧವನ್ನೂ ನೀಡಲಾಗುವುದು**

**ದಿನೇಶ್ ಗುಂಡೂರಾವ್,** ಆರೋಗ್ಯ ಸಚಿವ

### 14 ರೋಗಗಳ ಪತ್ತೆ

ಗೃಹ ಆರೋಗ್ಯ ಯೋಜನೆಯಡಿ ಸಾಂಕ್ರಾಮಿಕವಲ್ಲದ 14 ರೋಗಗಳ ಪತ್ತೆಗೆ ತಪಾಸಣೆ ಮಾಡಲಾಗುತ್ತದೆ. ಮಧುಮೇಹ, ಅಧಿಕ ರಕ್ತದೊತ್ತಡ, ಬಾಯಿ, ಸ್ತನ ಹಾಗೂ ಗರ್ಭಕಂಠದ ಕ್ಯಾನ್ಸರ್, ಮಾನಸಿಕ ಅಸ್ವಸ್ಥತೆ, ಮೂತ್ರಪಿಂಡ ಸಮಸ್ಯೆ, ಶ್ವಾಸಕೋಶ ಕಾಯಿಲೆ, ರಕ್ತಹೀನತೆ, ಕಣ್ಣಿನ ಸಮಸ್ಯೆ ಸೇರಿ ವಿವಿಧ ಅನಾರೋಗ್ಯ ಸಮಸ್ಯೆಗಳನ್ನು ಪತ್ತೆ ಮಾಡಲಾಗುತ್ತದೆ.

ಈ ಯೋಜನೆಯಡಿ ಹೆಚ್ಚಿನ ಚಿಕಿತ್ಸೆಯನ್ನೂ ಒದಗಿಸಲಾಗುತ್ತದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್‌ನ ವೈದ್ಯಾಧಿಕಾರಿಗಳು ಶಂಕಿತ ಪ್ರಕರಣಗಳನ್ನು ದೃಢಪಡಿಸಿ, ಹೆಚ್ಚಿನ ಚಿಕಿತ್ಸೆಗೆ ಶಿಫಾರಸು ಮಾಡುತ್ತಾರೆ.

Publication Date
31/01/2026

Presented by

# ಆಯುಷ್ಮಾನ್ ಭಾರತ್ ಯೋಜನೆ ಸಂತಾನ ಚಿಕಿತ್ಸೆ ಸೇರ್ಪಡೆ

ಬೆಂಗಳೂರು: ಮಕ್ಕಳಾಗದ ದಂಪತಿಗಳಿಗೆ ಸಂತಾನ ಚಿಕಿತ್ಸೆಗಳನ್ನು 'ಆಯುಷ್ಮಾನ್ ಭಾರತ್ ಪ್ರಧಾನ ಮಂತ್ರಿ ಜನಾರೋಗ್ಯ ಯೋಜನೆ–ಮುಖ್ಯಮಂತ್ರಿಗಳ ಆರೋಗ್ಯ ಕರ್ನಾಟಕ ಯೋಜನೆಯಡಿ' ತರಲಾಗಿದೆ.

ಈ ಸಂಬಂಧ ಆರೋಗ್ಯ ಇಲಾಖೆ ಆದೇಶ ಹೊರಡಿಸಿದ್ದು, ಈ ಆದೇಶ ಒಂದು ವರ್ಷ ಮಾತ್ರ ಜಾರಿಯಲ್ಲಿ ಇರಲಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದ 120 ದಂಪತಿಗೆ ಮಾತ್ರ ಈ ಚಿಕಿತ್ಸೆಗೆ ಅನುಮೋದನೆ ದೊರೆತಿದೆ. 'ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ' (ಎಆರ್‌ಟಿ) ಮೂಲಕ ದಂಪತಿಗಳಿಗೆ ಸಂತಾನ ಚಿಕಿತ್ಸೆ ನೀಡಲಾಗುತ್ತದೆ. ಖಾಸಗಿ ವ್ಯವಸ್ಥೆಯಡಿ ಈ ಚಿಕಿತ್ಸೆ ದುಬಾರಿಯಾಗಿರುವುದರಿಂದ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಐವಿಎಫ್ ಸೇರಿ ವಿವಿಧ ವಿಧಾನಗಳ ಮೂಲಕ ಆಯ್ದ ದಂಪತಿಗೆ ಈ ಚಿಕಿತ್ಸೆ ನೀಡಲಾಗುತ್ತದೆ ಎಂದು ತಿಳಿಸಲಾಗಿದೆ.

ಜಿಲ್ಲಾ ಆಸ್ಪತ್ರೆಗಳು, ವೈದ್ಯಕೀಯ ಕಾಲೇಜುಗಳು, ಸ್ವಾಯತ್ತ ಆರೋಗ್ಯ ಸಂಸ್ಥೆಗಳು ಹಾಗೂ ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತದೆ ಎಂದು ಆದೇಶ ಹೇಳಿದೆ.

# ಬಜೆಟ್ ಸಿದ್ಧವಾಗುವುದು ಹೇಗೆ? ತಂಡದಲ್ಲಿ ಯಾರ್ಯಾರು?

**ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ (ಫೆ.1) 2026–27ನೇ ಸಾಲಿನ ಬಜೆಟ್ ಅನ್ನು ಸಂಸತ್ತಿನಲ್ಲಿ ಮಂಡಿಸಲಿದ್ದಾರೆ. ಸರ್ಕಾರದ ಆರ್ಥಿಕ ಗುರಿಗಳ ನೀಲನಕ್ಷೆಯನ್ನು ಒಳಗೊಂಡ ಬಜೆಟ್ ಸಿದ್ಧಪಡಿಸುವುದು ಸವಾಲಿನ ಮತ್ತು ಸಂಕೀರ್ಣವಾದ ಕೆಲಸ. ಈ ದೀರ್ಘ ಪ್ರಕ್ರಿಯೆಯಲ್ಲಿ ಹಣಕಾಸು ಸಚಿವಾಲಯದ ಅಡಿಯಲ್ಲಿ ಬರುವ ವಿವಿಧ ಇಲಾಖೆಗಳ ಅಧಿಕಾರಿಗಳ ಪಾತ್ರವು ಗಮನಾರ್ಹವಾದುದು. ಬಜೆಟ್ ತಯಾರಿಯ ವಿವಿಧ ಹಂತಗಳು ಮತ್ತು ಈ ಪ್ರಕ್ರಿಯೆಯಲ್ಲಿ ಹಣಕಾಸು ಸಚಿವರ ಜತೆಗೆ ಕೆಲಸ ನಿರ್ವಹಿಸಿದ ಅಧಿಕಾರಿಗಳ ಪರಿಚಯ ಇಲ್ಲಿದೆ**

ಪ್ರಜಾವಾಣಿ ವಾರ್ತೆ

ಬಜೆಟ್ ಅನ್ನು ಹೇಗೆ ರೂಪಿಸಲಾಗುತ್ತದೆ ಎನ್ನುವ ಕುತೂಹಲ ಜನರಲ್ಲಿದೆ. ಕೇಂದ್ರ ಸರ್ಕಾರದ ಆರ್ಥಿಕ ಗುರಿಗಳು, ಅನುದಾನದ ವಿನಿಯೋಗ ಮತ್ತು ವರಮಾನ ಸಂಗ್ರಹದ ವಾರ್ಷಿಕ ದಿಕ್ಸೂಚಿಯಾದ ಬಜೆಟ್ ಅನ್ನು ರೂಪಿಸುವುದು ಗುರುತರವಾದ ಕಾರ್ಯ. ಸರ್ಕಾರದ ವಿವಿಧ ಇಲಾಖೆಗಳು ಮತ್ತು ಕೇಂದ್ರ ಸರ್ಕಾರದ ಹಲವು ಉನ್ನತ ಅಧಿಕಾರಿಗಳ ಹಲವು ತಿಂಗಳ ಶ್ರಮ ಬಜೆಟ್ ಹಿಂದೆ ಇರುತ್ತದೆ.

ಹಣಕಾಸು ಸಚಿವಾಲಯವು ನೀತಿ ಆಯೋಗವೂ ಸೇರಿದಂತೆ ಪ್ರಮುಖ ಸಂಸ್ಥೆ, ಇಲಾಖೆಗಳೊಂದಿಗೆ ಚರ್ಚಿಸಿ ಬಜೆಟ್ ರೂಪಿಸುತ್ತದೆ. ಸರ್ಕಾರದ ವೆಚ್ಚದ ಆದ್ಯತೆಗಳು, ವರಮಾನದ ಗುರಿ, ಆರ್ಥಿಕ ನೀತಿಗಳು ಮತ್ತು ಆರ್ಥಿಕ ಕಾರ್ಯತಂತ್ರಗಳನ್ನು ಬಜೆಟ್ ಒಳಗೊಂಡಿರುತ್ತದೆ. ಸಂಸತ್‌ನ ಪ್ರತಿವರ್ಷದ (ಫೆಬ್ರುವರಿಯಲ್ಲಿ ನಡೆಯುವ) ಬಜೆಟ್ ಅಧಿವೇಶನದಲ್ಲಿ ಲೋಕಸಭೆಯಲ್ಲಿ ಹಣಕಾಸು ಸಚಿವರು ಬಜೆಟ್ ಮಂಡಿಸುವುದು ಸಂಪ್ರದಾಯ. ಅದಕ್ಕೂ ಆರು ತಿಂಗಳ ಹಿಂದೆಯೇ (ಆಗಸ್ಟ್–ಸೆಪ್ಟೆಂಬರ್) ಅದರ ಸಿದ್ಧತೆಗಳು ಆರಂಭವಾಗಿರುತ್ತವೆ. ಹಲವು ಹಂತಗಳ ಮೂಲಕ ಬಜೆಟ್ ರೂಪು ಪಡೆಯುತ್ತದೆ.



ನಿರ್ಮಲಾ ಸೀತಾರಾಮನ್

**ಸುತ್ತೋಲೆ:** ಕೇಂದ್ರ ಹಣಕಾಸು ಸಚಿವಾಲಯವು ಅಂದಾಜು ವರಮಾನ ಮತ್ತು ವೆಚ್ಚದ ಮಾಹಿತಿಯ ಸಂಬಂಧ ಎಲ್ಲ ಇಲಾಖೆಗಳಿಗೆ, ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಿಗೆ, ಸ್ವಾಯತ್ತ ಸಂಸ್ಥೆಗಳಿಗೆ ಸುತ್ತೋಲೆ ಕಳಿಸುವುದರೊಂದಿಗೆ ಬಜೆಟ್ ಪ್ರಕ್ರಿಯೆ ಆರಂಭವಾಗುತ್ತದೆ. ಪ್ರತಿಯೊಂದು ಇಲಾಖೆಯೂ ಮೂರು ರೀತಿಯ ಮಾಹಿತಿ ನೀಡುತ್ತದೆ; ಮುಂದಿನ ವರ್ಷದ ಬಜೆಟ್ ಅಂದಾಜು, ಪ್ರಸ್ತುತ ವರ್ಷದ ಪರಿಷ್ಕೃತ ಅಂದಾಜು ಮತ್ತು ಹಿಂದಿನ ವರ್ಷದ ಸ್ವೀಕೃತಿ (ವರಮಾನ) ಮತ್ತು ವೆಚ್ಚದ ಮಾಹಿತಿಯನ್ನು ಇಲಾಖೆಗಳು ನೀಡುತ್ತವೆ.

**ಬಜೆಟ್ ಪ್ರಕ್ರಿಯೆ ಅಂತಿಮ ಹಂತ ಮುಟ್ಟಿರುವುದನ್ನು ಹಣಕಾಸು ಇಲಾಖೆಯು ಆಯೋಜಿಸುವ 'ಹಲ್ವಾ ಸಮಾರಂಭ' ಎನ್ನುವ ಸಾಂಕೇತಿಕ ಕಾರ್ಯಕ್ರಮದ ಮೂಲಕ ಸೂಚಿಸಲಾಗುತ್ತದೆ. ಬಜೆಟ್ ಪ್ರತಿಗಳು ಮುದ್ರಣಗೊಳ್ಳಲು ಆರಂಭವಾಗಿರುವುದನ್ನೂ ಕಾರ್ಯಕ್ರಮವು ಸಂಕೇತಿಸುತ್ತದೆ.**



**ವರಮಾನ ಮತ್ತು ವೆಚ್ಚದ ಅಂದಾಜು:** ವಿವಿಧ ರಾಜ್ಯ/ಮೂಲಗಳಿಂದ ಬಂದ ಮಾಹಿತಿಯನ್ನು ಹಣಕಾಸು ಸಚಿವಾಲಯವು ವಿಶ್ಲೇಷಿಸಿ, ವರಮಾನ ಮತ್ತು ವೆಚ್ಚವನ್ನು ಅಂದಾಜಿಸುತ್ತದೆ. ಈ ಮೂಲಕ ಸರ್ಕಾರದ ವರಮಾನ ಮತ್ತು ವೆಚ್ಚದ ನಡುವಿನ ಅಂತರವನ್ನು (ಬಜೆಟ್ ಕೊರತೆ) ತಿಳಿಯಲಾಗುತ್ತದೆ.

**ಬಜೆಟ್‌ಪೂರ್ವ ಸಮಾಲೋಚನೆ:** ಹಣಕಾಸು ಸಚಿವರು ರಾಜ್ಯಗಳ ಪ್ರತಿನಿಧಿಗಳು, ಉದ್ಯಮಿಗಳು, ಆರ್ಥಿಕ ತಜ್ಞರು, ಕಾರ್ಮಿಕ ಸಂಘಟನೆಗಳು ಮತ್ತು ವಿವಿಧ ಸಂಘ ಸಂಸ್ಥೆಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಅವರ ನಿರೀಕ್ಷೆ ಮತ್ತು ಅಗತ್ಯಗಳ ಬಗ್ಗೆ ದೀರ್ಘ ಹಾಗೂ ವಿಸ್ತೃತ ಚರ್ಚೆ ನಡೆಸುತ್ತಾರೆ.

**ಬಜೆಟ್ ಬೇಡಿಕೆಗಳನ್ನು ಅಂತಿಮಗೊಳಿಸುವುದು:** ವಿವಿಧ ವಲಯ/ರಾಜ್ಯ/ಇಲಾಖೆಗಳ ಬೇಡಿಕೆಗಳ ಬಗ್ಗೆ ಹಣಕಾಸು ಸಚಿವರು ಸಚಿವ ಸಂಪುಟದೊಂದಿಗೆ, ಪ್ರಧಾನಿ ಅವರೊಂದಿಗೆ ಚರ್ಚಿಸುತ್ತಾರೆ. ಯಾವ ಕ್ಷೇತ್ರ, ಇಲಾಖೆಗೆ ಎಷ್ಟು ಅನುದಾನ ನೀಡಬೇಕು ಎನ್ನುವ ಬಗ್ಗೆ ಸಮಾಲೋಚಿಸುತ್ತಾರೆ. ವರಮಾನ, ವೆಚ್ಚಗಳ ಅಂದಾಜು ಆಧರಿಸಿ ಹಣಕಾಸು ಸಚಿವರು ವಿವಿಧ ಇಲಾಖೆಗಳಿಗೆ ಅನುದಾನ ನಿಗದಿಯ ಬಗ್ಗೆ ತೀರ್ಮಾನಿಸುತ್ತಾರೆ.

**ಮಂಡನೆ:** ಬಜೆಟ್ ಅಧಿವೇಶನದ ವೇಳೆ ಸಂಸತ್ತಿನಲ್ಲಿ ಹಣಕಾಸು ಸಚಿವರು ಬಜೆಟ್ ಅನ್ನು ಮಂಡಿಸುತ್ತಾರೆ. ಸರ್ಕಾರ ಆರ್ಥಿಕ ಕಾರ್ಯತಂತ್ರ, ವರಮಾನ, ವೆಚ್ಚದ ಆದ್ಯತೆಗಳು, ಆರ್ಥಿಕ ನೀತಿಗಳು ಮತ್ತು ಸುಧಾರಣೆಗಳು ಬಜೆಟ್‌ನಲ್ಲಿ ವ್ಯಕ್ತವಾಗುತ್ತವೆ. ಸರ್ಕಾರ ಬಜೆಟ್‌ಗೆ ಸಂಸತ್ತಿನ ಅಂಗೀಕಾರ ಪಡೆಯಬೇಕಾಗುತ್ತದೆ. ಹೊಸ ಆರ್ಥಿಕ ವರ್ಷದ ಆರಂಭದ ದಿನ ಅಂದರೆ ಏಪ್ರಿಲ್ 1ರಿಂದ ಬಜೆಟ್ ಜಾರಿಗೆ ಬರುತ್ತದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

## ಬಜೆಟ್ ಸಿದ್ಧಪಡಿಸಲು ನೆರವಾದವರು



**1. ಅನುರಾಧ ಠಾಕೂರ್, ಆರ್ಥಿಕ ವ್ಯವಹಾರಗಳ ಕಾರ್ಯದರ್ಶಿ**

ಬಜೆಟ್‌ನ ಮೂಲ ಶಿಲ್ಪಿ ಇವರು. ಬಜೆಟ್ ಸಿದ್ಧಪಡಿಸುವ ಇಲಾಖೆಯ ಮುಖ್ಯಸ್ಥರಾಗಿ ಸಂಪನ್ಮೂಲಗಳ ಹಂಚಿಕೆ ಮತ್ತು 2026–27ರ ಅರ್ಥವ್ಯವಸ್ಥೆಯ ಚೌಕಟ್ಟುಗಳನ್ನು ನಿರ್ಧರಿಸುವ ಪ್ರಮುಖ ಅಧಿಕಾರಿ. ಬಜೆಟ್ ದಾಖಲೆಗಳನ್ನು ಸಿದ್ಧಪಡಿಸುವ ಜವಾಬ್ದಾರಿ ಹೊಂದಿರುವ ಬಜೆಟ್ ವಿಭಾಗದ ನೇತೃತ್ವ ಇವರದ್ದು. 1994ರ ಹಿಮಾಚಲ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಅನುರಾಧ ಅವರಿಗೆ ಇದು ಮೊದಲ ಬಜೆಟ್. ಈ ಇಲಾಖೆಯ ನೇತೃತ್ವ ವಹಿಸಿದ ಮೊದಲ ಮಹಿಳಾ ಅಧಿಕಾರಿಯೂ ಹೌದು.



**2. ಅರವಿಂದ ಶ್ರೀವಾಸ್ತವ, ರೆವೆನ್ಯೂ ಕಾರ್ಯದರ್ಶಿ**

ಕರ್ನಾಟಕ ಕೇಡರ್‌ನ ಐಎಎಸ್ ಅಧಿಕಾರಿಯಾಗಿರುವ ಅರವಿಂದ ಶ್ರೀವಾಸ್ತವ ಅವರದ್ದು ತೆರಿಗೆ ಪ್ರಸ್ತಾವನೆಗಳನ್ನು (ಬಜೆಟ್ ಭಾಷಣದ 'ಬಿ' ಭಾಗ) ಸಿದ್ಧಪಡಿಸುವ ಜವಾಬ್ದಾರಿ. ಇವರ ತಂಡವು ನೇರ ತೆರಿಗೆ–ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ ಮತ್ತು ಪರೋಕ್ಷ ತೆರಿಗೆಗಳನ್ನು (ಜಿಎಸ್‌ಟಿ, ಕಸ್ಟಮ್ಸ್) ನಿರ್ವಹಿಸುತ್ತದೆ. ರೆವೆನ್ಯೂ ಕಾರ್ಯದರ್ಶಿಯಾಗಿ ಶ್ರೀವಾಸ್ತವ ಅವರಿಗೆ ಇದು ಮೊದಲ ಬಜೆಟ್ ಆದರೂ, ಹಿಂದೆ ಅವರು ಹಣಕಾಸು ಸಚಿವಾಲಯದ ಬಜೆಟ್ ವಿಭಾಗದ ಜಂಟಿ ಕಾರ್ಯದರ್ಶಿಯಾಗಿದ್ದರು. ಆ ಬಳಿಕ ಪ್ರಧಾನಿ ಕಚೇರಿಗೆ ನಿಯೋಜನೆಗೊಂಡಿದ್ದರು. ವರಮಾನ ಸಂಗ್ರಹದ ವಿಚಾರದಲ್ಲಿ ಇವರ ಪಾತ್ರ ನಿರ್ಣಾಯಕವಾಗಿದೆ.



**3. ವುಮಲುನಮಾಂಗ ವುಅಲ್ನಮ್, ವೆಚ್ಚ ಕಾರ್ಯದರ್ಶಿ**

ಸರ್ಕಾರ ಮಾಡುವ ವೆಚ್ಚ, ಸಬ್ಸಿಡಿ ಸರಳೀಕರಣ ಮತ್ತು ಕೇಂದ್ರ ಸರ್ಕಾರದ ಯೋಜನೆಗಳ ಅನುಷ್ಠಾನದ ಮೇಲುಸ್ತುವಾರಿ ಇವರದ್ದು. ವಿತ್ತೀಯ ಕೊರತೆಯನ್ನು ನಿಭಾಯಿಸಲು ವಿತ್ತೀಯ ಶಿಸ್ತನ್ನು ಕಾಪಾಡಿಕೊಳ್ಳುವಂತೆ ನೋಡಿಕೊಳ್ಳುವುದರ ಜೊತೆಗೆ ಮುಂದಿನ ಆರ್ಥಿಕ ವರ್ಷಕ್ಕೆ ಅಗತ್ಯವಾದ ಮಾರ್ಗದರ್ಶನವನ್ನೂ ಇವರ ಇಲಾಖೆ ನೀಡುತ್ತದೆ.



**4. ಎಂ.ನಾಗರಾಜು, ಆರ್ಥಿಕ ಸೇವೆಗಳ ಕಾರ್ಯದರ್ಶಿ**

ಇವರ ಇಲಾಖೆಯು ಸರ್ಕಾರದ ಆರ್ಥಿಕ ಒಳಗೊಳ್ಳುವಿಕೆ ಯೋಜನೆಗಳು ಮತ್ತು ಸಾಮಾಜಿಕ ಭದ್ರತಾ ಯೋಜನೆಗಳ ಚಾಲನಾ ಶಕ್ತಿ. ಸರ್ಕಾರಿ ಸ್ವಾಮ್ಯದ ಬ್ಯಾಂಕುಗಳು, ವಿಮಾ ಕಂಪನಿಗಳು ಮತ್ತು ಪಿಂಚಣಿ ವ್ಯವಸ್ಥೆಗಳ ಹಣಕಾಸಿನ ಸ್ಥಿತಿಗತಿಗಳ ಮೇಲೆ ಇವರ ಇಲಾಖೆಯು ನಿಗಾ ಇಡುತ್ತದೆ. ಸಾಲ ನೀಡಿಕೆ ಹೆಚ್ಚಳ, ಡಿಜಿಟಲ್ ತಂತ್ರಜ್ಞಾನದ ಅಳವಡಿಕೆ ಮತ್ತು ಸಾಮಾಜಿಕ ಭದ್ರತಾ ಕಾರ್ಯಕ್ರಮಗಳೂ ಸೇರಿದಂತೆ ಸರ್ಕಾರದ ಹಣಕಾಸಿನ ಕಾರ್ಯಸೂಚಿಗಳ ಅನುಷ್ಠಾನದಲ್ಲಿ ಈ ಇಲಾಖೆಯದ್ದು ನಿರ್ಣಾಯಕ ಪಾತ್ರ.



**5. ಅರುಣೀಶ್ ಚಾವ್ಲಾ, ಹೂಡಿಕೆ ಮತ್ತು ಸಾರ್ವಜನಿಕ ಆಸ್ತಿ ನಿರ್ವಹಣಾ ಇಲಾಖೆ ಕಾರ್ಯದರ್ಶಿ**

ಸರ್ಕಾರದ ಬಂಡವಾಳ ಹಿಂತೆಗೆತ ಮತ್ತು ಖಾಸಗೀಕರಣ ಯೋಜನೆಗಳ ನೀಲನಕ್ಷೆಯ ಜವಾಬ್ದಾರಿ ಹೊತ್ತಿರುವ ಇಲಾಖೆಯ ನೇತೃತ್ವ ಇವರದ್ದು. ಕೇಂದ್ರ ಸರ್ಕಾರಿ ವಲಯದ ಉದ್ದಿಮೆಗಳಲ್ಲಿರುವ ಸರ್ಕಾರದ ಪಾಲಿನ ಷೇರು ಮಾರಾಟದಿಂದ ಬರುವ ತೆರಿಗೆಯೇತರ ವರಮಾನದ ಗುರಿಗಳನ್ನು ನಿರ್ವಹಿಸುವುದು ಇವರ ಕೆಲಸ.



**6. ಕೆ.ಮೋಸೆಸ್ ಚಾಲಾಯಿ, ಸಾರ್ವಜನಿಕ ವಲಯದ ಉದ್ದಿಮೆಗಳ ಇಲಾಖೆ ಕಾರ್ಯದರ್ಶಿ**

ಇಲಾಖೆಯ ಮುಖ್ಯಸ್ಥರಾಗಿ ಕೇಂದ್ರ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳ ಬಂಡವಾಳ ವೆಚ್ಚದ ಯೋಜನೆಗಳು ಮತ್ತು ಬಜೆಟ್‌ನಲ್ಲಿ ಹಂಚಿಕೆ ಮಾಡಿರುವ ಅನುದಾನವನ್ನು ಪರಿಣಾಮಕಾರಿಯಾಗಿ ಬಳಕೆಯಾಗುವುದನ್ನು ಖಾತ್ರಿ ಪಡಿಸುವುದು ಇವರ ಜವಾಬ್ದಾರಿ. ಆಸ್ತಿ ನಗದೀಕರಣ ಮತ್ತು ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಒಟ್ಟಾರೆ ಹಣಕಾಸಿನ ಪರಿಸ್ಥಿತಿಯ ಮೇಲ್ವಿಚಾರಣೆ ಮಾಡುವ ಹೊಣೆಯೂ ಇವರ ಮೇಲಿದೆ.



**7. ವಿ.ಅನಂತ ನಾಗೇಶ್ವರನ್, ಮುಖ್ಯ ಆರ್ಥಿಕ ಸಲಹೆಗಾರ**

ಕೇಂದ್ರ ಸರ್ಕಾರದ ಆರು ಇಲಾಖೆಗಳಲ್ಲದೆ, ಮುಖ್ಯ ಆರ್ಥಿಕ ಸಲಹೆಗಾರರ ಕಚೇರಿ ಕೂಡ ಬಜೆಟ್ ಸಿದ್ಧಪಡಿಸುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳುತ್ತದೆ. ಇವರ ಕಚೇರಿಯು ಬಜೆಟ್‌ಗಾಗಿ ದೇಶದ ಅರ್ಥವ್ಯವಸ್ಥೆಗೆ ಸಂಬಂಧಿಸಿದ ಪ್ರಮುಖವಾದ ಮಾಹಿತಿಗಳನ್ನು ನೀಡುತ್ತದೆ. ಆರ್ಥಿಕ ಪ್ರಗತಿಯ ಮುನ್ಸೂಚನೆ, ಕೃಷಿ, ಕೈಗಾರಿಕೆ, ಸೇವಾ ವಲಯಗಳು ಸೇರಿದಂತೆ ವಿವಿಧ ವಲಯಗಳ ಸಾಧನೆಗಳ ಪರಾಮರ್ಶೆ ಮತ್ತು ಜಾಗತಿಕ ಮಟ್ಟದ ಅಪಾಯ/ಸವಾಲುಗಳನ್ನು ಮೌಲ್ಯಮಾಪನ ಮಾಡಿದ ವಿವರಗಳನ್ನು ನೀಡುತ್ತದೆ. ಇದಲ್ಲದೇ, ಪ್ರಮುಖ ಆರ್ಥಿಕ ಸುಧಾರಣೆಗಳು, ಆರ್ಥಿಕ ನೀತಿಗಳು ಮತ್ತು ಹಣಕಾಸಿನ ಕಾರ್ಯತಂತ್ರಗಳ ಬಗ್ಗೆ ಹಣಕಾಸು ಸಚಿವರಿಗೆ ಸಲಹೆಯನ್ನೂ ನೀಡುತ್ತದೆ.

# ವಿತ್ತೀಯ ಕೊರತೆ ಶೇ 54.5ರಷ್ಟು

ನವದೆಹಲಿ (ಪಿಟಿಐ): ಡಿಸೆಂಬರ್ ಅಂತ್ಯದ ವೇಳೆಗೆ ಕೇಂದ್ರ ಸರ್ಕಾರದ ವಿತ್ತೀಯ ಕೊರತೆಯು 2025–26ನೇ ಬಜೆಟ್‌ನಲ್ಲಿ ಅಂದಾಜು ಮಾಡಿರುವ ಮೊತ್ತದ ಶೇಕಡ 54.5ರಷ್ಟು ಆಗಿದೆ. ಮೊತ್ತದ ಲೆಕ್ಕದಲ್ಲಿ ಇದು ₹8.55 ಲಕ್ಷ ಕೋಟಿ.

ಹಿಂದಿನ ವರ್ಷದ ಇದೇ ಹೊತ್ತಿನಲ್ಲಿ ಕೇಂದ್ರದ ವಿತ್ತೀಯ ಕೊರತೆಯು ಬಜೆಟ್ ಅಂದಾಜಿನ ಶೇ 56.7ರಷ್ಟು ಆಗಿತ್ತು.

2025–26ನೇ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯು (ವೆಚ್ಚ ಹಾಗೂ ವರಮಾನದ ನಡುವಿನ ವ್ಯತ್ಯಾಸ) ದೇಶದ ಒಟ್ಟು ಜಿಡಿಪಿಯ ಶೇ 4.4ರಷ್ಟು ಇರಲಿದೆ ಎಂಬುದು ಕೇಂದ್ರ ಸರ್ಕಾರದ ಅಂದಾಜು. ಇದು ಮೊತ್ತದ ಲೆಕ್ಕದಲ್ಲಿ ₹15.69 ಲಕ್ಷ ಕೋಟಿ ಆಗುತ್ತದೆ.

Publication Date
31/01/2026

Presented by ಪ್ರಜಾವಾಣಿ

## ಭಾರತದ ಸಂಸದೀಯ ಇತಿಹಾಸದಲ್ಲಿ ಹೆಮ್ಮೆಯ ಸಂಗತಿ: ಪ್ರಧಾನಿ

# 9ನೇ ಬಜೆಟ್ ಮಂಡಿಸಲಿರುವ ನಿರ್ಮಲಾ

ನವದೆಹಲಿ (ಪಿಟಿಐ): ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಭಾನುವಾರ ಒಂಬತ್ತನೆಯ ಬಾರಿಗೆ ಬಜೆಟ್ ಮಂಡನೆ ಮಾಡಲಿದ್ದಾರೆ. ನಿರಂತರವಾಗಿ, ಅತ್ಯಂತ ಹೆಚ್ಚಿನ ಅವಧಿಗೆ ಕೇಂದ್ರದ ಹಣಕಾಸು ಸಚಿವರ ಹುದ್ದೆಯನ್ನು ನಿರ್ವಹಿಸಿದ ಹೆಗ್ಗಳಿಕೆ ನಿರ್ಮಲಾ ಅವರದ್ದು.

ನಿರ್ಮಲಾ ಅವರು 2019ರ ಮೇ 31ರಂದು ಕೇಂದ್ರ ಹಣಕಾಸು ಸಚಿವರಾಗಿ ಅಧಿಕಾರ ಸ್ವೀಕರಿಸಿದರು. ನಂತರ ಕೋವಿಡ್ ಸಾಂಕ್ರಾಮಿಕ, ಜಾಗತಿಕ ಮಟ್ಟದಲ್ಲಿನ ಹಲವು ಬಿಕ್ಕಟ್ಟುಗಳ ಸಂದರ್ಭದಲ್ಲಿ ಅವರು ಈ ಹೊಣೆಯನ್ನು ನಿರ್ವಹಿಸಿದ್ದಾರೆ. ಭಾರತವು ಅವರ ಅವಧಿಯಲ್ಲಿ ವಿಶ್ವದಲ್ಲಿ ಅತ್ಯಂತ ವೇಗದ ಬೆಳವಣಿಗೆ ಕಾಣುತ್ತಿರುವ ಪ್ರಮುಖ ಅರ್ಥ ವ್ಯವಸ್ಥೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ನಿರ್ಮಲಾ ಅವರು ಹಣಕಾಸು ಸಚಿವೆ ಆಗಿ ಜನವರಿ 31ರಂದು (ಶನಿವಾರ)



ಆರು ವರ್ಷ, ಎಂಟು ತಿಂಗಳು ಕಳೆದಿವೆ. ಅವರು ಭಾನುವಾರ ಬಜೆಟ್ ಮಂಡನೆ ಮಾಡಲಿದ್ದಾರೆ. ಆಗ ಅವರು ಸತತವಾಗಿ ಒಂಬತ್ತನೆಯ ಬಜೆಟ್ ಮಂಡಿಸಿ ದಾಖಲೆ ಸೃಷ್ಟಿಸಲಿದ್ದಾರೆ.

ನಿರ್ಮಲಾ ಅವರು ಸತತವಾಗಿ ಒಂಬತ್ತನೆಯ ಬಜೆಟ್ ಮಂಡಿಸಲಿರುವುದು 'ಭಾರತದ ಸಂಸದೀಯ ಇತಿಹಾಸದಲ್ಲಿ ಒಂದು ಹೆಮ್ಮೆಯ ಸಂಗತಿಯಾಗಿ ದಾಖಲಾಗಲಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಬಜೆಟ್ ಅಧಿವೇಶನದ ಆರಂಭಕ್ಕೂ ಮುನ್ನ ಹೇಳಿದ್ದರು.

### ದೀರ್ಘ ಅವಧಿಗೆ ಹಣಕಾಸು ಸಚಿವರಾಗಿದ್ದ ಇತರರು

ಸಿ.ಡಿ. ದೇಶಮುಖ್ ಅವರು 1950ರ ಜೂನ್ 1ರಿಂದ ಆರು ವರ್ಷ ಎರಡು ತಿಂಗಳು ಹಣಕಾಸು ಸಚಿವರಾಗಿದ್ದರು. ಮನಮೋಹನ್ ಸಿಂಗ್ ಅವರು 1990ರ ಜೂನ್ 21ರಿಂದ 1996ರ ಜೂನ್ 16ರವರೆಗೆ ಸರಿಸುಮಾರು ಐದು ವರ್ಷ ಹಣಕಾಸು ಸಚಿವರಾಗಿದ್ದರು.

ನಂತರ ಪ್ರಧಾನಿಯಾಗಿ ಅವರು 2008ರಲ್ಲಿ ಹಾಗೂ 2012ರಲ್ಲಿ ಅಲ್ಪ ಅವಧಿಗೆ ಹಣಕಾಸು ಖಾತೆಯ ಹೊಣೆ ನಿರ್ವಹಿಸಿದ್ದರು. ಚಿದಂಬರಂ ಅವರು ಒಟ್ಟು ಎಂಟು ವರ್ಷ ಹಣಕಾಸು ಸಚಿವರಾಗಿ ಕೆಲಸ ಮಾಡಿದ್ದಾರೆ. ಆದರೆ ಸತತವಾಗಿ ಅಲ್ಲ.

ಮೊರಾರ್ಜಿ ದೇಸಾಯಿ (7 ವರ್ಷ, 9 ತಿಂಗಳು), ಪ್ರಣವ್ ಮುಖರ್ಜಿ (6 ವರ್ಷ 4 ತಿಂಗಳು), ಅರುಣ್ ಜೇಟ್ಲಿ (4 ವರ್ಷ 8 ತಿಂಗಳು), ವೈ.ಬಿ. ಚವಾಣ್ (4 ವರ್ಷ 3 ತಿಂಗಳು), ಯಶವಂತ್ ಸಿನ್ಹಾ (4 ವರ್ಷ 4 ತಿಂಗಳು) ಸತತವಾಗಿ ಅಲ್ಲದಿದ್ದರೂ ಸುದೀರ್ಘ ಅವಧಿಗೆ ಹಣಕಾಸು ಸಚಿವರಾಗಿ ಕೆಲಸ ಮಾಡಿದ ಇತರ ಪ್ರಮುಖರು.

ಮೊರಾರ್ಜಿ ದೇಸಾಯಿ ಅವರು ಒಟ್ಟು 10 ಬಾರಿ ಬಜೆಟ್ ಮಂಡನೆ ಮಾಡಿದ್ದರು, ಪಿ. ಚಿದಂಬರಂ ಅವರು ಒಂಬತ್ತು ಬಾರಿ ಬಜೆಟ್ ಮಂಡಿಸಿದ್ದರು. ಆದರೆ ಇವರಿಬ್ಬರೂ ಸತತವಾಗಿ ಇಷ್ಟು ಬಾರಿ ಬಜೆಟ್ ಮಂಡನೆ ಮಾಡಿಲ್ಲ.

Publication Date
31/01/2026

Presented by ಪ್ರಜಾವಾಣಿ

DR. RAJKUMAR ACADEMY

Dr. RAJKUMAR IAS/KAS ACADEMY

AN INITIATIVE BY DR. RAJKUMAR FAMILY

सत्यमेव जयते

MISSION SARKARI JOBS

Get exclusive information on UPSC, KPSC, SSC, Banking and various other Central and State Government Examinations with updates on New Job Notifications.

Scan QR Code to Join our Mission Sarkari Jobs Whatsapp Channel.

+91 9108449444 / 9108448444

DrRajkumarAcademy

# ಬಹು ಧ್ರುವೀಕರಣಕ್ಕೆ ಬೆಂಬಲ ಅಗತ್ಯ: ವಿಶ್ವಸಂಸ್ಥೆ

ವಿಶ್ವಸಂಸ್ಥೆ (ಪಿಟಿಐ): ಭಾರತ ಮತ್ತು ಐರೋಪ್ಯ ಒಕ್ಕೂಟದ (ಇ.ಯು) ನಡುವಿನ ಮುಕ್ತ ವ್ಯಾಪಾರ ಒಪ್ಪಂದವನ್ನು (ಎಫ್‌ಟಿಎ) ಉಲ್ಲೇಖಿಸಿದ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಬಹು ಧ್ರುವೀಕರಣವನ್ನು ಬೆಂಬಲಿಸುವ ಅಗತ್ಯವನ್ನು ಒತ್ತಿ ಹೇಳಿದರು.



ಆಂಟನಿಯೋ ಗುಟಾರಸ್

ಯಾವುದೋ ಒಂದು ಶಕ್ತಿಯಿಂದ ಜಾಗತಿಕ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದು ಅಮೆರಿಕ ಮತ್ತು ಚೀನಾವನ್ನು ಉಲ್ಲೇಖಿಸಿ ಹೇಳಿದರು.

‘ಸದ್ಯದ ಪರಿಸ್ಥಿತಿಯಲ್ಲಿ ಅಮೆರಿಕವು ವಿಶ್ವದ ಶಕ್ತಿಶಾಲಿ ರಾಷ್ಟ್ರ ಎಂಬುದು ಸ್ಪಷ್ಟವಾಗಿದೆ. ವಿಶ್ವವು ಎರಡು ಧ್ರುವಗಳಾಗಿ ವಿಂಗಡಣೆಯಾಗಿದೆ. ಒಂದು ಬದಿಯಲ್ಲಿ ಚೀನಾ ಹಾಗೂ ಇನ್ನೊಂದು ಬದಿಯಲ್ಲಿ ಅಮೆರಿಕ ದೇಶಗಳು ಶಕ್ತಿಕೇಂದ್ರಗಳಾಗಿವೆ’ ಎಂದು ಹೇಳಿದರು.

‘ಭಾರತ ಮತ್ತು ಇ.ಯು ಬೃಹತ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ ಹಾಕಿವೆ. ಶಾಂತಿ, ಅಭಿವೃದ್ಧಿ, ಮೌಲ್ಯಗಳು ಹಾಗೂ ಸ್ಥಿರತೆ ಇರುವ ವಿಶ್ವ ಬೇಕಾದರೆ ನಾವು ಬಹುಧ್ರುವೀಕರಣವನ್ನು ಬೆಂಬಲಿಸಬೇಕು. ವಿವಿಧ ದೇಶಗಳ ನಡುವಿನ ಬಲವಾದ ಸಂಬಂಧವನ್ನು ಉತ್ತೇಜಿಸಬೇಕಾಗಿದೆ. ಇತ್ತೀಚೆಗೆ ನಡೆದ ಇ.ಯು–ಮರ್ಕೊಸುರ್ (ದಕ್ಷಿಣ ಅಮೆರಿಕದ ಒಕ್ಕೂಟ), ಇ.ಯು– ಇಂಡೊನೇಷ್ಯಾ ಹಾಗೂ ಇ.ಯು–ಭಾರತ ನಡುವಿನ ಸಂಬಂಧದಲ್ಲಿ ಉತ್ತಮ ನಿರೀಕ್ಷೆಯನ್ನು ಹೊಂದಿದ್ದೇನೆ’ ಎಂದರು.

Publication Date
31/01/2026

Presented by ಪ್ರಜಾವಾಣಿ

------------------------------------------ಶುಭವಂದನೆಗಳು------------------------------------------